ಪೈಡ್ ಅಪ್ ಕ್ಯಾಪಿಟಲ್ -ರೂ. 1,52,100/- ರಿಸರ್ವ್ ಫಂಡ್ಸ್ ಮತ್ತು ಇತರ ನಿಧಿಗಳು ರೂ. 1,92,000/-

ಜನ್ಮಾಭರಣಗಳ, ಮೌಲ್ಯವಾದ ಇತರ ವಸ್ತುಗಳ ಮೇಲೆ ಸುಲಭ ದರಗಳಲ್ಲಿ ಚಿಕ್ಕ ಪ್ರಮಾಣದ ಸಾಲಗಳನ್ನು ಕೊಡಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ನಿಧಿಯ ಸಮಸ್ತ ವಹಿವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ಮೇಲಿನ ವಿಳಾಸಕ್ಕೆ ಪತ್ರದ್ವಾರ ವಿಚಾರಿಸಿರಿ.

ನಿಮ್ಮ ಆಕಾಂಕ್ಷೆ

ನೀವು ಮಾಡಲಿಕ್ಕಾಗಲೀ, ಪ್ರಾತಿನಿಧ್ಯತೆ ಪಡೆಯಲಿಕ್ಕಾಗಲೀ

ಭದ್ರತೆ ಮತ್ತು ಪ್ರಗತಿ

ಪರ ಜೀವನವೂ ಸಹ ಸುಖವಾಗುವುದೆಂದು ನೀವು ಯೋಚಿಸುತ್ತಿರುವುದಾದರೆ
ನಮ್ಮೊಡನೆ ವಿಚಾರಿಸಿರಿ.

ಇಂತು ಕಾರ್ಯದರ್ಶಿ,

ದಿ ನ್ಯೂ ಗಾರ್ಡಿಯನ್

ಲೈಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಮುದ್ರಾಸು
ಮಂಗಳೂರು ಬ್ರಾಂಚ್.

Transport & Car Owners



ARE SPECIALLY INVITED TO VISIT
OUR SHOW ROOM *for economical transport maintenance.*
CANARA AUTOMOBILES - - - - - MANGALORE

ಆಯುರ್ವೇದ ಔಷಧಗಳು

ವಿಕ್ರಯಿಸಲ್ಪಡುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

STD. 1921 ಸ್ಥಾಪನೆ

FOUNDER:
SRI. A. B. SHETTY, M. L. A.,

ಸಂಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿರು, ಎಂ. ಎಲ್. ಎ

ಸಂಪಾದಕ:
ಕೆ. ಕೆ. ಶೆಟ್ಟಿ.

ನವಯುಗ

ಚಂದಾ ವಿವರ:
1 ವರ್ಷಕ್ಕೆ - ರೂ 3—8—0
6 ತಿಂಗಳಿಗೆ - ರೂ 1—12 0

ಚಂದಾ ಹಣವನ್ನು ಎಂಆರ್ ಕಳುಹಿಸಬೇಕು.

ಸಹ ಸಂಪಾದಕ:
ಕೆ. ಎಚ್. ಶೆಟ್ಟಿ.

ಸಂಪುಟ ೧೯
ಸಂಚಿಕೆ ೪೮

ಉಡುಪಿ, ಗುರುವಾರ, ೮—೮—೧೯೪೦.
UDIPI, THURSDAY, 8-8-1940.

VOL. 19
No. 48

ಬಾಲ್ಕನಿನ ಪರಿಸ್ಥಿತಿ.

ಆಗ್ನೇಯ ಯುರೋಪಿನ ಬಾಲ್ಕನ್ ರಾಷ್ಟ್ರಗಳ ಪರಿಸ್ಥಿತಿಯು ರಸ್ಯದ ಘೋರ ಕೃತಿಯ ಮೇಲೆ ಅವಲಂಬಿಸಿರುತ್ತದೆ. ರಸ್ಯದ ಘೋರತೆಯು ಸ್ಪಷ್ಟವಾಗಿ ತಿಳಿವನಕ ಈ ರಾಷ್ಟ್ರಗಳ ಗತಿಯೇನಾಗುವುದೆಂದು ಹೇಳಲಾಗುವುದಿಲ್ಲ. ಸೋವಿಯೆಟ್ ರಸ್ಯವು ಕಮ್ಯುನಿಜಮ್‌ನಲ್ಲಿಅಭಿವೃದ್ಧಿಯಾಗುವುದೆಂಬುದನ್ನು ಮನಸಿನಲ್ಲಿ ತನ್ನದೇ ಆದ ಮಾರ್ಗ ಹಿಡಿದು ಮುಂದುವರಿಯುತ್ತಿದೆ. ಆದೀಗ ತನ್ನ ನೆ ಮತ್ತು ನೌಕರಿಯನ್ನು ಸಿದ್ಧಗೊಳಿಸಿ ಇದರ ಉದ್ದೇಶವೇನೆಂದು ಹೇಳಲು ಧ್ಯವಿಲ್ಲ. ಜರ್ಮನಿಯು ಇಂಗ್ಲೆಂಡಿ ರಾಂದಿಗೆ ಪ್ರಬಲ ಹೋರಾಟದಲ್ಲಿ ನಿರತ ವಾಗ ರಸ್ಯವು ಹಂಗೇರಿ ಮತ್ತು ಯು ಸ್ಲಾವಿಯದ ದಕ್ಷಿಣ ಸಾನು ಭೂಮಿ ಮೇಲೆ ಸುಲಭವಾಗಿ ಧಾಳಿ ನಡೆಸಿ ನನ್ನ ತನ್ನ ಅಧೀನವಡಿಸಿಕೊಳ್ಳುವು ರ ಎಂಬ ಸಂದೇಹಕ್ಕೆಡೆಯಾಗಿದೆ ಈ ಗದ ಸ್ಲಾವ್ ಜನರಲ್ಲಿ ರಸ್ಯಕ್ಕನುಕೂಲ ಗಿ ಪ್ರಬಲ ಚಳವಳ ಆರಂಭವಾಗಿದೆ. ಲ್ಗೇರಿಯವು ಈಗ ಹೆಚ್ಚಾಗಿ ರಸ್ಯದ ಕ್ಷಕ್ಕೆ ಸೇರಿದೆ. ಇದರಿಂದ ಜರ್ಮನರು ಸಮಳಗೊಂಡಿರುತ್ತಾರೆ. ಯುಗೋಸ್ಲಾ ಯವೂ ಈಗ ರಸ್ಯದ ವೈತ್ರಿ ಸಂಘದ ರುವೇನಿಯದ ಟ್ರಾನ್ಸಿಲ್ವೇನಿಯದ ನರು ಎಮ್ಮ ಮಾತೃಕ್ಕೂ ಹಂಗೇರಿ ಂದಿಗೆ ಸೇರಲೊಪ್ಪು ವುದಿಲ್ಲ. ಅವರು ್ಯದಕಡೆಗೆ ದೃಷ್ಟಿ ಹರಿಸಿರುತ್ತಾರೆ. ಹಂ ್ಲೆರರು ರುಮೇನಿಯದ ಮಂತ್ರಿಗಳನ್ನು ಬ್ಸ್ಬರ್ಗಿಗೆ ಕರೆಸಿ ನಡೆಸಿದ ಮಾತು ತಿಯಿಂದ ಹೆಚ್ಚಿನ ಪರಿಣಾಮವೇನೂ ಆರುವಂತಿಲ್ಲ. ರಾಜಿಯಿಂದ ದೊಬ್ರುಜ ನ್ನು ಬುಲ್ಗೇರಿಯಕ್ಕೂ ಟ್ರಾನ್ಸಿಲ್ವೇನಿ ಯವನ್ನು ಹಂಗೇರಿಗೂ ಬಿಟ್ಟುಕೊಡಬೇ ಂದು ಅವರು ರುಮೇನಿಯಕ್ಕೆ ಸಲಹೆ ತ್ತಿರುತ್ತಾರೆ. ಆದರೆ ತಮ್ಮ ದೇಶದ ಾಗವೆನ್ನು ಬಿಟ್ಟುಕೊಡುವ ವಿಷಯದಲ್ಲಿ ಮೇನಿಯದಲ್ಲಿ ಪ್ರಬಲ ವಿರೋಧವಿದೆ. ಿಯ ಮಂತ್ರಿ ಮಂಡಲಿಯು ಪುನಃ ದಲಾವಣೆಯಾಗುವ ಸಂಭವವಿದೆ. ಜನ ುಲ್ಲಿ ಉದ್ವೇಗವುಂಟಾಗಿದೆ. ರುಮೇ ುವು ಇನ್ನು ತಡಮಾಡದೆ ಟ್ರಾನ್ಸಿಲ್ವಾ ಯವನ್ನು ತನಗೆ ಬಿಟ್ಟುಕೊಡಬೇಕೆಂದು ಂಗೇರಿಯು ಆಗ್ರಹಗೊಂಡಿದೆ. ಟರ್ಕಿ ು ರಷ್ಯದೊಂದಿಗೆ ಕೂಡಬಹುದೇ ಹೊ ು ಜರ್ಮನಿಯೊಂದಿಗೆ ಎಂದಿಗೂ ಸೇರ ರದು. ಹಿಟ್ಲರರು ಬಾಲ್ಕನಿನ ಪರಿ ತಿಯ ಕುರಿತು ತಲೆಮಳಗೊಂಡಂತಿದೆ. ಲ್ಕನ್ ಪೆಮರಂಗದಾಟವಲ್ಲಿ ಇಂದೀಗ ಲಿಫರ ಕೈಮೇಲಾಗಿರುವುದು. ಅವರ ಆದೃಷ್ಟವು ರಷ್ಯದ ಮುಂದಿನ ಘೋರತೆಯನ್ನವಲಂಬಿಸಿರುವುದು.

ಅಬಿಸೀನಿಯಕ್ಕೆ ಮೈಲ್‌ಸೆಲಾಸಿಯವರ ಪಯಣ

ಅಬಿಸೀನಿಯದ ಮಾಜಿ ಚಕ್ರವರ್ತಿಗಳಾದ ಹೈಲ್ ಸೆಲಾಸಿಯವರನ್ನು ಬ್ರಿಟಿಷ್ ಸರಕಾರವೇ ವಿವರಾನ ಮೂಲಕ ಅಬಿಸೀನಿಯಕ್ಕೆ ಕಳುಹಿಸಿರುವುದು.. ಸೇಲಾಸಿಯವರು, ನಾಯ್ಗುಗಳು ಅಲ್ಪಮಿಸಿರುವ ಫ್ರಾನ್ಸಿನ ಭಾಗದ ಮೇಲೆ ಹಾರಾಡಿ ಮಾಲ್ಟಕ್ಕೆ ಮುಟ್ಟಿದರು. ಅಲ್ಲಿಂದ ಅಲೆಗ್ಸಾಂಡ್ರಿಕ್ಕೆ ಹಾರಾಡಿ ಅಲ್ಲಿ ಸ್ವಲ್ಪ ಕಾಲ ವಿರಮಿಸಿದರು. ಅಲ್ಲಿಯ ಬ್ರಿಟಿಷ್ ನೌಕಾಧಿಕಾರಿಗಳು ಕೆಲವರು ಗಣ್ಯರಾಗಿ ಸೇಲಾಸಿಯವರಿಗೆ ಬೀಳ್ಕೊಡುಗೆಯನ್ನು ಸತ್ಕರಿಸಿದರು. ಅವರು ಅತ್ಯಲ್ಪ ಸಗೆಗಂಡಿದ್ದು ನೆಗಾಡುತ್ತಾ, ಕಮಾಸಿಯು ಮಾತುಗಳನ್ನಾಡುತ್ತಿದ್ದರು. ಅಬಿಸೀನಿಯವು ಪುನಃ ತನ್ನ ಪರವಾಗುವುದೆಂಬ ವೃಥ ವಿಶ್ವಾಸದಿಂದ ತನ್ನ ಅಕಿಧಿಗಳನ್ನು ಸಂದರ್ಭಾನುಸಾರ ಆಡ್ಡಿಸ್ ಅಬಾಬಕ್ಕೆ ಬರಬೇಕೆಂದು ಆಮಂತ್ರಿಸಿದರು. ಇಂಗ್ಲೆಂಡಿನಿಂದ ತನ್ನನ್ನು ತಂದ ವೈಮಾನಿಕನಿಗೆ, ಕೀರ್ತಿದ ಚಿತ್ರ ಕೊರೆಯಲ್ಪಟ್ಟರುವ ಚಿನ್ನದ ವಾಚೊಂದನ್ನು ಪಾರಿತೋಷವಾಗಿ ಕೊಟ್ಟು, ಇನ್ನೊಮ್ಮೆ ನನ್ನನ್ನು ನೀವು ಕಾಣುವಾಗ ನಾನು ಕೀರ್ತಿ ಧರಿಸಿಕೊಳ್ಳಲಿರುವೆನು" ಎಂದರು. ಅನಂತರ ಅವರನ್ನು ಒಬ್ಬ ನಲ್ಲಿ ವಿಮಾನ ಮೂಲಕ ಸುದಾನಿಗೆ ಒಯ್ಯಲಾಯಿತು. ಅವರೀಗ ಅಬಿಸೀನಿಯದ ಎಲ್ಲೆಯಲ್ಲೇ ಇರುವರು. ಅವರ ಆಗಮನದ ಸುದ್ದಿಯು ಅಬಿಸೀನಿಯದಲ್ಲಿ ಹಬ್ಬಹತ್ತಿರುವುದು. ಇದರಿಂದ ಅಲ್ಲಿಯ ಬಂಡಾಯಗಾರ ಪಂಗಡಗರಲ್ಲಿ ನವೋತ್ಸಾಹವುಂಟಾಗಿರುವುದು.

ಯುರೋಪಿನಲ್ಲಿ ಇಷ್ಟೊಂದರಲ್ಲೇ ಬರಗಾಲ ಆರಂಭವಾಗಿದೆ.

ಯುರೋಪನ್ನು ಬರಗಾಲವು ಬೆದರಿಸುತ್ತಿರುವುದು ಮಾತ್ರವಲ್ಲದೆ ಇಷ್ಟರಲ್ಲೇ ಆರಂಭವಾಗಿದೆಯೆಂದು 'ನ್ಯೂಯೋರ್ಕ್ ಸನ್' ಎಂಬ ಪತ್ರಿಕೆಯು ಪ್ರಕಟಿಸಿದೆ. ಪೋಲಂಡಿನ ಮುಖ್ಯ ಪಟ್ಟಣವಾದ ವಾರ್ಸೋದ ಆಸುಪಾಸಿನ ಅರವಾಸಿ ಜನರು ಉಸಿರಾಡಲಾರೆಯೆಂದು ಮಿಲ್ಕ ಜನರು ಉಸಿರಾಡಬಿದ್ದಿದ್ದಾರೆ ಬೆಲ್‌ಜಿಯಮ್, ಹಾಲೆಂಡ್, ನೋರ್ವೆ, ಡೆನ್ಮಾರ್ಕ್ ಮತ್ತು ಫ್ರಾನ್ಸುಗಳನ್ನು ಬರಗಾಲವು ಇದಿರಿಸುತ್ತಿದೆ ಫ್ರಾನ್ಸಿನಲ್ಲಿ ಭಯಂಕರ ಭಯಂಕರ ಅಭಾವವುಂಟಾಗಿದೆ. ಉತ್ತರ ಫ್ರಾನ್ಸಿನ ಬೆಳೆಯು ಒಲವಂಶ ಯುದ್ಧದಲ್ಲಿ ನಾಶವಾಗಿದೆ. ಉಳಿದುದನ್ನು ಜರ್ಮನರು ತಮ್ಮ ಉಪಯೋಗಕ್ಕಾಗಿ ವಶಪಡಿಸಿಕೊಂಡಿರುತ್ತಾರೆ ಫ್ರಾನ್ಸಿಗೆ ಉಕ್ಕಿಂತ ಕಡಿಮೆಯಾಗಿ ಬೇಳಕಾಗುವ ಪ್ರಮಾಣವು ಅರವಾಸಿ ದವಸ ಧಾನ್ಯಗಳು ಈ ವರ್ಷ ಇರುವುದಿಲ್ಲ. ಹರ್ ಹಿಟ್ಲರ್ ಮತ್ತು ಮೋರ್ಲಿ ಪೆಟೈನರು ಪೆರಿಸಿನಲ್ಲಿ ಒಟ್ಟುಗೂಡಿ ಈ ಸಮಸ್ಯೆಯನ್ನು ಚರ್ಚಿಸಲಿರುವರೆಂದು ತಿಳಿದುಬರುತ್ತದೆ. ಫ್ರಾನ್ಸಿನಲ್ಲಿ ಇನ್ನೂ ಗೊಂದಲದ ಪರಿಸ್ಥಿತಿಯೇ ನೆಲೆಗೊಂಡಿದೆ. ಸುಮಾರು 100 ಮಿಲ್ಯ ಟಾಗದಗಳು ಇನ್ನೂ ಎಲ್ಲೆಯಾಗಿಲ್ಲ ಕಾಣೆಯಾಗಿರುವ ನೂರಾರು ಜನರ ಕುರಿತು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಣೆಗಳು ಬರುತ್ತಿವೆ. ಉತ್ತರದಲ್ಲಿ ಅನೇಕ ಪಟ್ಟಣಗಳು ನಾಶವಾಗಿ, ನೂರಾರು ಹಳ್ಳಿಗಳು ನಿರ್ಜನವಾಗಿವೆ. ಸೇನಾ ಚಲನವಲನಕ್ಕೆ ಬೇಕಾದ ರಸ್ತೆ ಮತ್ತು ಸೇತುವೆಗಳನ್ನು ಮಾತ್ರ ಜರ್ಮನರು ಪರಮಾಡುತ್ತಿದ್ದಾರೆ ಸ್ವಿಟ್ಸರ್ಲಿಯೂ ಈ ಬರಗಾಲದಲ್ಲಿ ಆಹಾರದ ಅಭಾವವುಂಟಾಗುವ ಸಂಭವತೋರುತ್ತಿದೆ.

ಸ್ವೇಜು ಕಾಲುವೆಯ ರಕ್ಷಣೆ

ಇಟೆಲಿಯು ಯುದ್ಧಕ್ಕೆಳೆದ ಮೇಲೆ ನಿಂತುಹೋಗಿದ್ದ ಸ್ವೇಜ್ ಕಾಲುವೆಯ ಮೇಲಿನ ಹಡಗ ಸಂಚಾರವು ಈಗ ಆರಂಭವಾಗಿದೆ. ಸ್ವೇಜ್ ಕಾಲುವೆಯು ಈಗ ಬಗ್ರಸ್ತದ ಮುಖ್ಯಬಂದರಾಗಿ ವಿಶೇಷ ಚಟುವಟಿಕೆಯುಳ್ಳದಾಗಿದೆ. ಸ್ವೇಜ್ ಕಾಲುವೆಯ ಆಡಳಿತದ ವಿಷಯವನ್ನು ಫ್ರೆಂಚರು ಬ್ರಿಟಿಷ್ ಮತ್ತು ಇಜಿಪ್ಟಿಯನ್ನರೊಂದಿಗೆ ಸಹಕರಿಸುತ್ತಿದ್ದಾರೆ. ಕಾಲುವೆಯ ಆಡಳಿತದಲ್ಲಿ ಕೆಲಸಮಾಡುತ್ತಿದ್ದ ಅನೇಕ ಮಂದಿ ಇಟೆಲಿಯನ್ ನೌಕರರು ಕೆಲಸದಿಂದ ತೆಗೆಯಹಾಕಲ್ಪಟ್ಟಿರುತ್ತಾರೆ. ಭೂಮಧ್ಯ ಸಾಗರ ಪ್ರದೇಶದಲ್ಲಿ ಪ್ರಬಲ ಬ್ರಿಟಿಷ್ ನೌಕಾಪಡೆ ಮತ್ತು ಸೇನೆಯು ಇರಿಸಲ್ಪಟ್ಟಿರುವುದರಿಂದ ಇಟೆಲಿಯು ಬಹಳ ತೊಂದರೆಗೀಡಾಗಿದೆ. ಅಬಿಸೀನಿಯಕ್ಕೆ ಕಮ ಮುದ್ದೋಪಕರಣ ಮತ್ತು ಸೇನಾಸಹಾಯವನ್ನು ಕಳುಹಿಸದಂತಾಗಿದೆ. ಬ್ರಿಟಿಷ್ ವ್ಯಾಪಾರಿ ಹಡಗುಗಳು ಆಟ್ಲಾಯದ ಕಾರಣಗಳಿಂದಲೇ ಸಂಚರಿಸುತ್ತಿರುವಾದರೂ ಇಟೆಲಿಯಾನರು ಯಾವ ಕರದ ಶೋದನೆಯನ್ನೂ ಕೊಡದೆ ಸುಮ್ಮನಿದ್ದಾರೆ ಇಟೆಲಿಯು ಯುದ್ಧಕ್ಕಿಳಿದಾಗ ಇಟೆಲಿಯ ಹಲವು ಸಬ್ ಮೆರೀನು

TROPICAL.

TROPICAL INSURANCE CO LTD., does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their caree. s.

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.

Branch Manager: M. SUNDER RAM SHETTY.

ಗಳು ಕೆಂಪುಸಮುದ್ರದಲ್ಲಿಪ್ಪತ್ತು ಬ್ರಿಟಿಷ್ ಯುದ್ಧ ಹಡಗಗಳು ಈಗ ಅವುಗಳಲ್ಲಿ ಕೆಲವನ್ನು ನಾಶಮಾಡಿ ಉಳಿದವುಗಳನ್ನು ಬೆದರಿಸಿದ್ದಾನೆ. ಜರ್ಮನ್ ಬಾಂಬರ್ ವಿಮಾನಗಳು ಮಾತ್ರ ಇಟಲಿಯಾ ನಿಂದ ಬ್ರಿಟಿಷ್ ಹಡಗ ಸಂಚಾರಕ್ಕೆ ಬಹಳ ತೊಂದರೆಯನ್ನುಂಟು ಮಾಡುತ್ತಿವೆ. ಬ್ರಿಟಿಷ್ ವಿಮಾನಗಳು ಧಾಳಿಯಿಂದ ಇಟಲಿಯಾನಿನಾಗರಿಕರು ಮತ್ತು ಸೈನ್ಯದವರಿಗೆ ತೊಂದರೆಯಾಗಿದೆ. ಅಬಿಸೀನಿಯದಲ್ಲಿ ಬಂದಾಯವೆದ್ದಿರುವುದರಿಂದ ಅಲ್ಲಿಗೆಯ ದ್ಯೋಪಕರಣವನ್ನೊಯ್ಯುವುದು ಹೇಗೆಂಬುದು ಇಟಲಿಗೆ ತಿಳಿಯದಾಗಿದೆ. ಇಟಲಿಯಾನ ಹಡಗಗಳನ್ನೆಲ್ಲಾ ಬ್ರಿಟಿಷ್ ಯುದ್ಧ ಹಡಗಗಳು ಮುತ್ತಿವೆ ಮತ್ತು ಅನ್ನಾಬ್ ಬಂದರಿಗೆ ಗೋಡಿಸಿವೆ. ಕೆಂಪು ಸಮುದ್ರ ಮತ್ತು ಹಿಂಗೂಸಾಗರದಲ್ಲಿ ಬ್ರಿಟಿಷ್ ಯುದ್ಧ ಹಡಗಗಳು ಎಚ್ಚರಿಬಿಡದೆ ಪಹರೆ ನಡೆಸುತ್ತಿರುವುದರಿಂದ ಐಗುಸ್ತಾನ ಹೊರಗಣ ಸಂಬಂಧವನ್ನು ಕಡಿದು ಪ್ರತ್ಯೇಕಿಸಲು ಸಾಧ್ಯವಿಲ್ಲ. ಇಟಲಿಯಾನರಿಗೆ ಬ್ರಿಟಿಷ್ ಹಡಗಗಳನ್ನು ಸಮಾಪಿಸಲು ಕೊಂಚ ಸಾಧ್ಯವಿಲ್ಲ. ಬೇಗನೆ ಆಮೆರಿಕದಿಂದ ಮಧ್ಯಪೂರ್ವಕ್ಕೆ ಯುದ್ಧ ವಿಮಾನಾದಿಗಳನ್ನು ತರಲು ಸಾಧ್ಯವಾಗುವುದು.

ಡೋವರ್ ಬಂಬರದ ಮೇಲೆ ವಿಮಾನ ಧಾಳಿ

ಜುಲೈ ತಾ. 29ರಲ್ಲಿ 30 ಜರ್ಮನ್ 57 ಫ್ಲೈಟ್ ಬೋಂಬರ್ ಮತ್ತು 60 ಮೆಸ್ಸರ್ಸ್‌ಮಿಟ್ಸ್ ವಿಮಾನಗಳು ಡೋವರಿನ ಮೇಲೆ ಅದಸ್ಮಾತ್ತಾಗಿ ಏರಿ ಬಂದು ಬೆಂಬೆಸೆಯತೊಡಗಿದುವು. ಕೂಡಲೆ ಬ್ರಿಟಿಷ್ ಹರಿಕೇನ್ ಮತ್ತು ಸ್ಪಿಟ್‌ಫೈರ್ ವಿಮಾನಗಳು ನೇಲಕ್ಕೇರಿ ದೊಡ್ಡ ಯುದ್ಧವಾಯಿತು. ಅರ್ಧ ಘಂಟೆಯೊಳಗೆ 17 ಜರ್ಮನ್ ವಿಮಾನಗಳು ನಾಶಮಾಡಲ್ಪಟ್ಟವು. ಇಡೀ ಯುದ್ಧಗಳಲ್ಲಿ ಒಟ್ಟು 25 ವೈರಿ ವಿಮಾನಗಳು ನಾಶಹೊಂದಿವೆ. ನಾಶವಾದ ಬ್ರಿಟಿಷ್ ವಿಮಾನ ಒಂದು ಮಾತ್ರ. ಸರಾಸರಿ ದಿನಕ್ಕೆ 6ರಂತೆ ಜರ್ಮನ್ ವಿಮಾನಗಳು ನಾಶವಾಗುತ್ತಲೇ ಇವೆ. ಜೂನ್ ತಾ. 18ರಿಂದ ಜುಲೈ ತಿಂಗಳ ವರೆಗೆ 241 ನಾಶಹೊಂದಿವೆ. ನಾಶವಾದ ಬ್ರಿಟಿಷ್ ವಿಮಾನಗಳು ಬಹಳ ಸ್ವಲ್ಪ. ಜರ್ಮನ್‌ರ ಧಾಳಿಯಿಂದ ಸೈನ್ಯ ಪ್ರಾಣ ಯಾ ಸೊತ್ತು ಪಾಸಿ ಕೂಡ ಆಗಿರುವುದಿಲ್ಲ.

ಬಂಡಿನಿಸೆ ಮೇಲೆ ಧಾಳಿ

ಜುಲೈ ತಾ. 29ರಲ್ಲಿ ಇಟೆಲಿಯಾನ ವಿಮಾನಗಳು ಎಡನ್ ಬಂದರ ಮೇಲೆ ನಡೆಸಿದ ಧಾಳಿಯು ಪರಿಣಾಮಾಗಿ 4 ಮಂದಿ ಮೂಲನಿವಾಸಿಗಳು ಕೊಲ್ಲಲ್ಪಟ್ಟು 15 ಮಂದಿ ಗಾಯಗೊಂಡಿರುವರು. ಲಿಬಿಯ ಮತ್ತು ಇಜಿಪ್ಟಿನ ಎಲ್ಲೆಯಲ್ಲಿ ನಡೆದ ಹೋರಾಟದಲ್ಲಿ ಭಾಗವಹಿಸಿದ್ದ ಬ್ರಿಟಿಷ್ ಪಹರೆಗಾರ ಸೈನಿಕರು ಕಾಣೆಯಾಗಿರುವರು

ಜಪಾನಿನಲ್ಲಿ ಬ್ರಿಟಿಷರ ದಸ್ತಗಿರಿ

ಇಂಗ್ಲೆಂಡಿನ ಪರವಾಗಿ ಗುಪ್ತಚರರಾಗಿ ಕೆಲಸ ಮಾಡುತ್ತಿರುವರೆಂಬ ಆರೋಪದಿಂದ ಜಪಾನ್ ಮತ್ತು ಕೊರಿಯದಲ್ಲಿ ವ್ಯಾಪಾರ ಮೊದಲಾದ ಉದ್ಯೋಗಗಳಲ್ಲಿದ್ದ 13 ಮಂದಿ ಅಧ್ಯ ಇಂಗ್ಲೀಯ ಗೃಹಸ್ಥರನ್ನು ಸರಕಾರವು ಕೈದು ಮಾಡಿ ಕೆಲವರನ್ನು ಬಿಟ್ಟು ಬಿಟ್ಟಿರುವುದು. ಜಪಾನಿನ ಕ್ಯೂಟೋ ಪ್ರತಿನಿಧಿಯಾದ ಎಂ. ಕೋಲ್ಡ್ ರು ಪೋಲೀಸ್ ಬಿಗಿ ಸಹಿತ ರೈಲಿನಲ್ಲಿ ರವಾನಿಸಲ್ಪಟ್ಟಿರುವರು. ಜಪಾನಿನ ಸರಕಾರದ ಹೇಳಿಕೆಯು ಅತ್ಯಂತ ಸಂಚಿತ ಕರವಿದೆ. ಕೋಸ್ಸರ ಮಂಡಿಸುವ ಸಂಶಯಾಸ್ಪದವಿರುವುದೆಂದು ನಂಬಲಾಗಿದೆ. ಜಪಾನ್ ಪತ್ರಿಕೆಗಳು ಇಂಗ್ಲೆಂಡನ್ನು ತೀವ್ರವಾಗಿ ಖಂಡಿಸಹತ್ತಿವೆ. ಜಪಾನರ ದಸ್ತಗಿರಿಯ ಕುರಿತು ಇಂಗ್ಲೆಂಡಿನ ವಿದೇಶ ಮಂತ್ರಿ ಲೋರ್ಡ್ ಹೆಲಿಫ್ಯಾಕ್ಸ್‌ರು ಪಾರ್ಲಿಮೆಂಟ್ಸಿನಲ್ಲಿಂದು ಹೇಳಿಕೆಯಿತ್ತು ಬ್ರಿಟಿಷ್ ಸರಕಾರವು ಜಪಾನಿಗೆ ತನ್ನ ನಿಷೇಧ ಸೂಚಿಸಿರುತ್ತೆಂದು ತಿಳಿಸಿದರು. ಜಪಾನಿನ ವರ್ತನೆಯಿಂದ ಲಂಡನಿನಲ್ಲಿ ಕ್ರೋಧವೆದ್ದಿರುವುದು.

ಇಬ್ಬರು ಜಪಾನೀಯರ ದಸ್ತಗಿರಿ

ಇಂಗ್ಲೆಂಡಿನ ದಕ್ಷಿಣಾ ಕಾನೂನಿನ ಮೇರೆಗೆ ಜುಲೈ ತಾ. 31ರಲ್ಲಿ ಇಬ್ಬರು ಜಪಾನ್ ವ್ಯಾಪಾರಿಗಳು ದಸ್ತಗಿರಿ ಮಾಡಲ್ಪಟ್ಟಿರುವರು. ಇವರು ಎರಡು ಪ್ರಾಮುಖ್ಯ ಜಪಾನ್ ಕಂಪೆನಿಗಳ ಮುಖ್ಯಸ್ಥರಾಗಿರುವರು ಬ್ರಿಟಿಷರನ್ನು ದಸ್ತಗಿರಿಮಾಡಿದ ಪ್ರತೀಕಾರಾರ್ಥವಾಗಿ ಈ ದಸ್ತಗಿರಿ ಮಾಡಲ್ಪಟ್ಟಿದಲ್ಲೆಂದು ಸರಕಾರವು ಪ್ರಕಟಿಗೊಳಿಸಿರುತ್ತದೆ.

ಜಪಾನಿನಲ್ಲಿ ಜರ್ಮನಿಯ ಪ್ರಭಾವ

ಜಪಾನಿನಲ್ಲೀಗ ಜರ್ಮನಿಯ ಕುರಿತು ಮೆಚ್ಚಿಗೆಯು ಬಹಳವಾಗಿ ಹೆಚ್ಚತೊಡಗಿದೆ ಜಪಾನರು ಜರ್ಮನಿಯನ್ನು ಸಂಶಯಿಸಬೇಕೆಂದು ಅಲ್ಲಿಯ ಪತ್ರಿಕೆಗಳು ಪ್ರಚಾರಮಾಡಹತ್ತಿವೆ. ಜರ್ಮನರು ಜಪಾನಿನಲ್ಲಿ ಸ್ಥಿರ ಸಪ್ಪದ ಸ್ಥಿತಿಯೊಂದನ್ನು ನಿರ್ಮಿಸಿ ಕೆಲಸಮಾಡುತ್ತಿರುವುದನ್ನು ಜಪಾನರು ಪತ್ತೆಗೆಡಿಸಿರುತ್ತಾರೆ. ಸ್ಥಿರ ಗೆನ್ಸೆಪ್ಪೋ ಸ್ಥಾಲಸ್ ಪಡಕ್ಕೆ ಸೇರಿದವ ನೊಬ್ಬನನ್ನು ಜಪಾನ್ ಸರಕಾರವೆ ತನ್ನ ಕೈಕೆಳಗೆ ನೇಮಿಸಿಕೊಂಡಿದೆ. ಜಪಾನು, ಜರ್ಮನಿ ಮತ್ತು ಇಟೆಲಿಗಳೊಂದಿಗೆ ನೇರ ನಯಸಬೇಕೆಂದು ಸೇನಾನಿಗಳು ಕೆಲವರು ಪ್ರಯತ್ನಿಸುತ್ತಿದ್ದಾರೆ. ಜಪಾನಿನಲ್ಲಿ ಜರ್ಮನ್ ವ್ಯಾಪಾರಿಗಳ ಮತ್ತು ಸಂಚಾರಿಗಳ ಸಂಖ್ಯೆಯು ಹೆಚ್ಚತೊಡಗಿದೆ

ಕಾಂಗ್ರೆಸ್ ಪ್ರೆಸಿಡೆಂಟರಿಗೆ ಸ್ವಾಗತ

ಜುಲೈ ತಾ. 30ರಲ್ಲಿ ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಅಬ್ದುಲ್ ಕಲಮ್ ಆಜಾದರು ಶ್ರೀಮತಿ ಸರೋಜಿನಿ ದೇವಿಯವರೊಂದಿಗೆ ಜೊಂಬಾಯಿಗೆ ಹೋದಾಗ ಅಲ್ಲಿಯ 136 ಸಂಸ್ಥೆಗಳು ಇವರಿಗೆ ಸ್ವಾಗತವಿತ್ತವು. ಇವುಗಳಲ್ಲಿ ಹಲವು ಮುಸಲ್ಮಾನ ಸಂಸ್ಥೆಗಳಿದ್ದುವು. ಕಾಂಗ್ರೆಸ್ ಪ್ರೆಸಿಡೆಂಟರಾದ ನಂತರ ಮೌಲಾನಾಜಾದರು ಬೊಂಬಾಯಿಗೆ ಹೋಗುವುದಿದು ಪ್ರಥಮ ಸಾರಿ. ಶ್ರೀ. ಭೂಲಭಾಯಿ ದೇಸಾಯಿ, ಶ್ರೀ. ಬಿ. ಜಿ. ಖೇರ್, ಶ್ರೀ. ಕೆ. ಎಮ್ ಮುನ್ಶಿಗಳೇ ಮೊದಲಾದ ಮುಖಂಡರು ವೈಲ್ವೇ ಸ್ಟೇಶನಿಗೆ ಹೋಗಿ ಪ್ರೆಸಿಡೆಂಟರನ್ನು ಎದುರ್ಗೊಂಡರು. ಸ್ಟೇಶನಿಂದ ಕಾಂಗ್ರೆಸ್ ಭವನಕ್ಕೆ ಹೋಗಿ ಮೌಲಾನಾ ಆಜಾದರು ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ಜುಲೈ ತಾ. 31ರಲ್ಲಿ ಪತ್ರಿಕಾ ಪ್ರತಿನಿಧಿಗಳ ಪರಿಷತ್ತೊಂದರಲ್ಲಿ ಪೂರ್ಣಾದಲಲ್ಲಿ ಇಂಡಿಯಾ ಕಾಂಗ್ರೆಸ್ ಕಮಿಟಿಯು ನಿರ್ಣಯಕ್ಕೆ ಬರೋಣ ಟಿ ಟು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಅಪ ಜಯ ಮಚ್ಚು ಗಾಂಧಿಜಿಯವರ ನೈತಿಕ ವಿಜಯವನ್ನು ಸೂಚಿಸುತ್ತದೆಂಬುದು ಸರಿಯಲ್ಲ. ಆದರಲ್ಲಿ ಗಾಂಧಿಜಿಯವರ ಜಯಾಪಜಯದ ಸ್ಪಶ್ನೆಯೇ ಇಲ್ಲ. ವೈಸರಾಯರು ಕಾಂಗ್ರೆಸಿನ ನಿರ್ಣಯದ ಕುರಿತು ಉತ್ತರವೇನನ್ನೂ ಕೊಡದಿದ್ದರೆ ಆಕುರಿತು ವಿಚಾರಿಸಲಾಗುವುದು. ಅನಿಶ್ಚಿತ ಕಾಲದ ವರೆಗೆ ಕಾಂಗ್ರೆಸು ಕಾರ್ಯಕೂತಾ ಕೊಳ್ಳಬಾರದು.ನ್ಯಾಯವಾಗಿ ಬೇಕಾಗುವಷ್ಟು ಸಮಯ ಕಾದು ಅನಂತರ ಮುಂದಿನ ಹೆಜ್ಜೆಯ ಕುರಿತು ವಿಚಾರಿಸಲಾಗುವುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಆಗೋಸ್ತು ತಿಂಗಳ ಅಂತ್ಯ ಅಥವಾ ಸೆಪ್ಟೆಂಬರ್ ಆದಿಯಲ್ಲಿ ವಾರ್ಧಾದಲ್ಲಿ ಸೇರಲಿರುವುದೆಂದು ಹೇಳಿದರು.

ಬ್ರಿಟಿಷರ ಸಮುದ್ರ ಮುತ್ತಿಗೆ

ಇಂಗ್ಲೆಂಡು ಸಮುದ್ರ ಮುತ್ತಿಗೆಯ ನಿರ್ಬಂಧವನ್ನೀಗ ಯುರೋಪಿನ ತಟಸ್ಥ ರಾಷ್ಟ್ರಗಳ ಹಡಗಗಳ ಮೇಲೂ ಹಾಕುವ ನಿರ್ಧಾರಮಾಡಿದೆ. ತಟಸ್ಥ ರಾಷ್ಟ್ರಗಳ ಹಡಗಗಳು ಬ್ರಿಟಿಷ್ ಯುದ್ಧ ನಾವ ಮತ್ತು ಅಧಿಕಾರಿಗಳಿಂದ ಜಪ್ತಿ ಮಾಡಲ್ಪಡದೆ ಸಂಚರಿಸಬೇಕಾದರೆ ಬ್ರಿಟಿಷ್ ರಾಯಭಾರಿ ಅಧಿಕಾರಿಗಳಿಂದ 'ನೇವಿಸರ್ಟ್' ಎಂಬ ಸರ್ಟಿಫಿಕೇಟನ್ನು ಪಡೆಯಬೇಕು. ಈ ತಟಸ್ಥ ರಾಷ್ಟ್ರಗಳ ಹಡಗಗಳು ಯುರೋಪಿನ ಯುದ್ಧ ಮಾಡುವ ರಾಷ್ಟ್ರಗಳಿಗೆ ಸಾಮಾನುಗಳನ್ನೊಯ್ಯದಿದ್ದರೆ ಮತ್ತು ಯುದ್ಧ ಸಹಾಯಕ ಸಾಮಾನುಗಳನ್ನು ಹಡಗಗಳಲ್ಲಿ ತುಂಬಿಸದಿದ್ದರೆ 'ನೇವಿಸರ್ಟ್' ಸರ್ಟಿಫಿಕೇಟು ಕೊಡಲ್ಪಡುವುದು.

ಖಾನ್ ಅಬ್ದುಲ್ ಗಫಾರ್ ಖಾನರು

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ತನ್ನ ನೆಂಬರಿಕೆಗೂ ರಾಜಿನಾಮೆ ಕೊಟ್ಟಿರುವರು. ಸೂನದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಸಭೆಯು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯಗಳನ್ನು ಸಮರ್ಥಿಸಿರುವುದರಿಂದ ತಾವು ಎ.ಐ.ಸಿ.ಸಿ. ಮೆಂಬರಿಕೆಗೂ ರಾಜಿನಾಮೆ ಕೊಟ್ಟಿರುವೆನೆಂದವರು ತಿಳಿಸಿರುವರು.

ನೋಟೀಸು

ದಿ ಬೊಂಬಾಯ್ ಲೈಫ್ ಎಶ್ಯೂರೆನ್ಸ್ ಕೋ ಲಿಮಿಟೆಡ್.

ದಿವಂಗತಶ್ರೀ. ಪಿ ಬರ್ಮಪ್ಪಶೆಟ್ಟಿಯವರ ಜೀವನಮಯ ನಪತ್ರ ಪೊಲಿಸಿ ನಂ. 477923 ಹಕ್ಕುದಾರರಾದ ಶ್ರೀಗಳಾದ ಪಿ. ಆಚ್ಚುತ ಶೆಟ್ಟಿ, ಪಿ ಪದ್ಮಾವತಿ ಶೆಟ್ಟಿ ಮತ್ತು ಪಿ. ನರಸಿಂಹ ಶೆಟ್ಟಿಯವರು, ಸದರಿ ಪೊಲಿಸಿಯು ಕಳೆದು ಹೋಗಿದೆ ಅಥವಾ ಸ್ವೈರುಪಿಯಾಗಿದೆ ಎಂದು ತಿಳಿಸಿ ಅದರ ದ್ವಿಪ್ರತಿಯನ್ನು ಕೊಡಿಸಲು ಅರ್ಜಿ ಹಾಕಿದ್ದಾರೆ. ಆದ್ದರಿಂದ ಸದರಿ ಪೊಲಿಸಿಯ ಹಿಂದಿನ ಹಕ್ಕುದಾರರು ಅಥವಾ ಇನ್ಯಾರಾದರೂ ಇದರಿಂದ ಕಂಪೆನಿಯವರು ಈ ವಿಷಯದಲ್ಲಿ ಜಾಸ್ತಿ ಪರಿಗಣಿಸಬೇಕೆಂದು ಕೇಳಿಕೊಂಡಿರಿ

ಆಧುನಿಕ ಯುದ್ಧ ಹಡಗಗಳು ಭಾಗ-೨ ನೌಕಾಬಲ

ಬೇರೆ ಬೇರೆ ಜಾತಿಯ ಹಡಗುಗಳು, ಅವುಗಳ ರಚನೆ ಮತ್ತು ಅವು ಏನಾಪೇಕ್ಷಕ್ಕೆ ಕೆಲಸ.

ಒಂದು ಬೆಟ್ಲ್‌ಶಿಪ್ ಕಟ್ಟಲು ರೂ. 10ಕೋಟಿ ವೆಚ್ಚ

ಇಂದಿನ ನೌಕಾ ಪಡೆಯಲ್ಲಿ ಪ್ರಾಮುಖ್ಯವಾದ ಹಡಗಗಳ ಜಾತಿಯೆಂದರೆ, ಬೆಟ್ಲ್‌ಶಿಪ್, ಬೆಟ್ಲ್‌ಕ್ರೂಸರ್, ಏರ್‌ಕ್ರೇಫ್ಟ್‌ಕ್ಯಾರಿಯರ್, ಕ್ರೂಸರ್, ಡಿಸ್ಟ್ರೋಯರ್, ಮತ್ತು ಸಬ್‌ಮೇರೀನುಗಳು.

ಬೆಟ್ಲ್‌ಶಿಪ್ (ಯುದ್ಧ ಹಡಗ)

ಇವುಗಳಲ್ಲಿ ಬೆಟ್ಲ್‌ಶಿಪ್ಪು ಎಂಬ ಯುದ್ಧ ಹಡಗವು ಅತಿ ದೊಡ್ಡದು ಮತ್ತು ಬಹಳ ಶಕ್ತಿಯುಳ್ಳದ್ದು. ಈ ಯುದ್ಧ ಹಡಗಗಳೇ ನೌಕಾಬಲದ ತಿರುಳು. ಇವುಗಳಲ್ಲಿ ಅತಿ ದೊಡ್ಡ ತೋಪು ಮತ್ತು ಬಲವಾದ ರಕ್ಷಾ ಕವಚಗಳಿರುತ್ತವೆ ಈ ಯುದ್ಧ ಹಡಗಗಳನ್ನು ಅವಕ್ಕೆ ಸಮಾನವಾದ ಹಡಗಗಳಂದ ಮಾತ್ರ ಜಯಶೀಲವಾಗಿ ವಿರೋಧಿಸಲು ಸಾಧ್ಯ. ಅವುಗಳಿರುವ ರಾಷ್ಟ್ರದ ವಿರೋಧಿಗಳು, ಅಂಥಹ ಹಡಗಗಳಿಂದಲೇ ಅದರ ನೌಕಾಬಲವನ್ನು ಮುರಿಯಲೆತ್ನಿಸಬೇಕು.

ಇಂಗ್ಲೆಂಡು ಇಂದು ಹಲವು ಬೆಟ್ಲ್‌ಶಿಪ್‌ಗಳನ್ನು ಕಟ್ಟುತ್ತಿರುವದು ಆದರೆ ಕಳೆದ ಯುದ್ಧಾನಂತರ ಅದು ನೆಲ್ಸನ್ ಮತ್ತು ರೊಡ್ನೆ ಎಂಬ ಬೆಟ್ಲ್‌ಶಿಪ್‌ಗಳನ್ನು ಮಾತ್ರ ಕಟ್ಟಿ ಸಂಪೂರ್ಣಗೊಳಿಸಿರುವುದು. ಈ ಹಡಗವೊಂದರ ತೂಕ 35,000 ಟನ್ನು. 16 ಇಂಚು ವ್ಯಾಸದ ತೋಪುಗಳೇ ಇವುಗಳ ಮುಖ್ಯ ಯುದ್ಧೋಪಕರಣ. ಮುಮ್ಮಡಿಯ ಮೂರು ಬುರುಜುಗಳ ಮೇಲೆ ಈ ತೋಪುಗಳು ಇರಿಸಲ್ಪಟ್ಟಿವೆ. ಅವು ಒಂದು ಟನ್ನು ತೂಕದ ಗುಂಡುಗಳನ್ನು 20ಮೈಲು ದೂರಕ್ಕೆಸೆಯ ಬಲ್ಲವು. ಇಂತಹ ಬೆಟ್ಲ್ ಶಿಪ್ಪುಗಳನ್ನು ಕಟ್ಟಲು ರೂ. 10 ಕೋಟಿ ತಾಗುವುದು. ಅದರಲ್ಲಿ 1100 ಮಂದಿ ನಾವಿಕರಿರುವರು. 45,000 ಕುದುರೆ ಶಕ್ತಿಯ ಇಂಜಿನುಳ್ಳ ಈ ಹಡಗಗಳು ಘಂಟೆಗೆ 25 ಮೈಲು ವೇಗದಿಂದ ಚಲಿಸಬಲ್ಲವು. ಇಂತಹ ಅಮೂಲ್ಯ ಹಡಗಗಳನ್ನು ವೈರಿಯ ಗುಂಡಿನಿಂದ ರಕ್ಷಿಸಲು ಸಾಧ್ಯವಾದ ಏರ್ಪಾಡೆಲ್ಲಾ ಮಾಡಲ್ಪಡಲೇ ಬೇಕು. ನೆಲ್ಸನ್ ಮತ್ತು ರೊಡ್ನೆ ಬೆಟ್ಲ್‌ಶಿಪ್‌ಗಳ ಎರಡು ಬದಿಗಳೂ 14 ಇಂಚು ದಪ್ಪದ ರಕ್ಷಾ ಕವಚಗಳಿಂದ ಮುಚ್ಚಲ್ಪಟ್ಟಿವೆ. ಬೆಟ್ಲ್‌ಶಿಪ್‌ಗಳು ಅತಿ ದೊಡ್ಡ ಮತ್ತು ಅತಿ ಶಕ್ತಿಯುಳ್ಳ ಮತ್ತು ಅತಿ ಹೆಚ್ಚಿನ ಬೆಲೆಯ ಯುದ್ಧ ಹಡಗಗಳು. ಅವು ಸಮುದ್ರದಲ್ಲಿರುವಾಗ ಅವುಗಳ ಸುತ್ತಲೂ ಬೇರೆ ಬೇರೆ ಆಕೃತಿಯ ಹಡಗಗಳು ಜನಸ್ಥಾವರವಿಸಿ ಪಹರೆ ಮಾಡಿಕೊಂಡಿರುತ್ತವೆ.

ಬೆಟ್ಲ್‌ಕ್ರೂಸರ್
(ಪರೀಕ್ಷಕ ಯುದ್ಧ ಹಡಗ)

ಬೆಟ್ಲ್ ಕ್ರೂಸರುಗಳಲ್ಲಿ ಬೆಟ್ಲ್‌ಶಿಪ್ ಗಳಷ್ಟೇ ದೊಡ್ಡವಾದ ತೋಪುಗಳಿವೆ. ಆದರೆ ಅಷ್ಟು ಬಲವಾದ ರಕ್ಷಾಕವಚಮಾತ್ರ ಇರುವುದಿಲ್ಲ ಸುಲಭವಾಗಿ ಇದನ್ನು ಭೇದಿಸಬಹುದು ಆದರೆ ಇವುಗಳು ಬೆಟ್ಲ್‌ಶಿಪ್‌ಗಳಿಗಿಂತ ಹೆಚ್ಚಿನ ವೇಗವುಳ್ಳವಾಗಿವೆ ಬ್ರಿಟಿಷ್ ಬೆಟ್ಲ್‌ಕ್ರೂಸರುಗಳ ಹೊಡೆ ಎಂಬುದು 15,000 ಟನ್ನು ತೂಕವಿದ್ದು ಇಡೀಲೋಕದಲ್ಲೇ ಅತಿದೊಡ್ಡದಾಗಿದೆ. ಅದರ ವೇಗ ಘಂಟೆಗೆ ೩೩ಮೈಲು. ಬೆಟ್ಲ್‌ಕ್ರೂಸರುಗಳು ಹೆಚ್ಚಿನವೇಗದಿಂದ ಚಲಿಸಿ ವೈರಿ ಹಡಗಗಳ ಚಲನವಲನಗಳನ್ನು ಪರೀಕ್ಷಿಸಿ ಅಗ್ರಗಾಮಿಗಳಾಗಿರುವ ವೈರಿಕ್ರೂಸರುಗಳನ್ನು ನಾಶಮಾಡಿ ವೈರಿ ನೌಕಾಬಲವನ್ನು ತಿಳಿದುಕೊಂಡು ತಮ್ಮ ಮುಖ್ಯ ನಾವಿಕ ಸೈನ್ಯ ತಿಳಿಸುವವು ಈ ಜಾತಿಯ ಹಡಗಗಳೇಗ ಕಟ್ಟಲ್ಪಡುವದಿಲ್ಲ. ಹುಡ್, ರಿನೌನ್ ಮತ್ತು ರಿಲ್ಸ್‌ಗಳೆಂಬ ಬೆಟ್ಲ್ ಕ್ರೂಸರುಗಳು ಮಾತ್ರ ಈಗ ಬ್ರಿಟಿಷ್ ನೌಕೆಯಲ್ಲಿವೆ. ಫ್ರಾನ್ಸ್ ಮತ್ತು ಜರ್ಮನಿಗಳು ಕಟ್ಟುರುವ ಈ ಜಾತಿಯ ಹಡಗುಗಳು ಬಲವಾದ ರಕ್ಷಾಕವಚಗಳುಳ್ಳವಾಗಿನೆ ಪ್ರತಿಯೊಂದು ಬೆಟ್ಲ್‌ಶಿಪ್ ಮತ್ತು ಬೆಟ್ಲ್ ಕ್ರೂಸರಿನಲ್ಲಿ ಒಂದು ಅಥವಾ ಹೆಚ್ಚು ಯುದ್ಧವಿಮಾನಗಳಿರುತ್ತವೆ ಬೇಕಾದಾಗ ಇವನ್ನು ಮೇಲಕ್ಕೆ ಹಾರಿಸಲಾಗುವದು. ಅವು ತಮ್ಮ ಕೆಲಸಮಾಡಿ ಸಮುದ್ರಕ್ಕಿಳಿದು ಈ ಯುದ್ಧ ಹಡಗಗಳ ಬದಿಯಲ್ಲೇ ತೇಲಾಡಿಕೊಂಡಿರುವಂತೆ ತೇಲುಚೀಲವುಳ್ಳ ವುಗಳಾಗಿವೆ. ಪುನಃ ಬೇಕಾದಂತೆ ಇವನ್ನು ಕ್ರೇನಿನ (ಭಾರವೆತ್ತುವ ಯಂತ್ರ) ಮೂಲಕ ಹಡಗದ ಮೇಲಕ್ಕೆತ್ತಲಾಗುವುದು.

ಏರ್‌ಕ್ರೇಫ್ಟ್ ಕ್ಯಾರಿಯರ್
(ವಿಮಾನವಾಹಕ ಹಡಗ)

ನಿಜವಾದ ವಿಮಾನವಾಹಕ ಹಡಗವು ದೊಡ್ಡ ಹಡಗವಾಗಿದೆ. ಇದರ ಮೇಲ್ಭಾಗವು ಯಾವ ತರದ ವಿಜೆಯೂ ಇಲ್ಲದ ವಿಶಾಲವಿರುತ್ತದೆ. ಹೊಗೆ ನಳಿಗೆಗಳು ಒಂದು ಎಡಿಯಲ್ಲಿ ಅಥವಾ ಹಿಂಬದಿಯಲ್ಲಿರುತ್ತವೆ. ಯುದ್ಧ ವಿಮಾನಗಳು ಹಡಗದೊಳಭಾಗದಲ್ಲಿ ತೂಗುದಾಣಗಳಲ್ಲಿರಿಸಲ್ಪಟ್ಟು ಲಿಫ್ಟ್‌ಗಳ ಮೂಲಕ ಹಾರುವ ಧ್ಯಾಸೇರಿಸಲ್ಪಡುತ್ತವೆ ಹೀಗೆ ವಿಮಾನವಾಹಕ ಹಡಗಗಳು ಸನ್ನದ್ಧತಾ ಸಂಚಾಲಕ ವಿಮಾನಗಳಿಲ್ಲದಿರುವಾಗ ಈ ಹಡಗಗಳು ಅತ್ಯಂತ ವೇಗದಿಂದೋಡುತ್ತಿರುವಾಗ ವಿಮಾನಗಳು ಮೇಲಕ್ಕೆ ಹಾರಿ ಅತಿ ಶೀಘ್ರವಾಗಿ ವೇಗವನ್ನು ಪಡೆಯುತ್ತವೆ. ಆದರೆ ಅವು ಹಿಂತಿರುಗಿ ಬಂದು ಈ ಹಡಗಗಳ ನಿಲ್ದಾಣಗಳ ಮೇಲೆ ಇಳಿಯುವುದು ಬಹಳ ಕಷ್ಟ ಮೊದಲು ಅವುಗಳ ವೇಗವನ್ನು ನಿಲ್ಲಿಸಿ ಆ ಮೇಲೆ ನಿಧಾನವಾಗಿ ಕೆಳಗಿಳಿಯುವಂತೆ ಏರ್ಪಾಡುಮಾಡಲಾಗಿದೆ. ವಿಮಾನವಾಹಕ ಹಡಗಗಳನ್ನು ಸುಲಭವಾಗಿ ಭೇದಿಸಬಹುದು, ಅವುಗಳಿಗೆ ರಕ್ಷಾಕವಚವಿಲ್ಲವೇನೂ ಇರುವುದಿಲ್ಲ. ವೇಗ ಮಾತ್ರ ಹೆಚ್ಚಾಗಿದ್ದು ಚಿಕ್ಕ ತೋಪುಗಳು ಅವುಗಳಲ್ಲಿರುತ್ತವೆ. ಆದರೆ ಈ ಹಡಗಗಳಲ್ಲಿ ವಿಮಾನಭೇದಕ ತೋಪುಗಳಿರುತ್ತವೆ. ಮತ್ತು ಇವರ ವಿಮಾನಗಳೇ ಅದಕ್ಕೆ ರಕ್ಷಣೆ ಕೊಡುತ್ತವೆ.

ಕ್ರೂಸರ್
(ಹೋರಾಡುವ ಹಡಗ)

ಈ ಜಾತಿಯ ಯುದ್ಧ ಹಡಗಗಳು ಬಹಳ ಪ್ರಾಮುಖ್ಯವಾಗಿವೆ. ಇವೇ ಬ್ರಿಟಿಷ್ ಸಾಮ್ರಾಜ್ಯದ ವ್ಯಾಪಾರ ಮಾರ್ಗಗಳನ್ನು ರಕ್ಷಿಸುವ ಯುದ್ಧ ಹಡಗಗಳು. ಹೆಚ್ಚಿನ ಕ್ರೂಸರುಗಳ ತೂಕ 1000 ಟನ್ನು. ಮತ್ತು ಅವುಗಳಲ್ಲಿ 8 ಇಂಚು ತೋಪುಗಳಿರುತ್ತವೆ. ಬ್ರಿಟಿಷ್ ನೌಕೆಯಲ್ಲಿ 4000 ಟನ್ನು ತೂಕದ ಕ್ರೂಸರುಗಳೂ ಇರುತ್ತವೆ. ಈ ಕ್ರೂಸರುಗಳಲ್ಲಿಯೇ ಸುಮಾರು 12 ವಿಧದವುಗಳಿವೆ. ಬೇರೆ ಬೇರೆ ವಿಧದ ಕೆಲಸ ಮಾಡುವುದಕ್ಕೆ, ಮತ್ತು ಪರರಾಷ್ಟ್ರಗಳು ಕಟ್ಟಿದ ಕ್ರೂಸರುಗಳಿಗೆ ಉತ್ತರವಾಗಿ ಹಲವು ವಿಧದ ಕ್ರೂಸರುಗಳು ಕಟ್ಟಲ್ಪಟ್ಟಿವೆ ವಸ್ತುಣ ಅಮೇರಿಕದ ಫ್ಲೇಟ್ ಸದಯ ಬಳಿ ಗ್ರಾಫ್‌ಸ್ಪೀ ಎಂಬ ಪ್ರಬ್ಯಾತ ಜರ್ಮನ್ ಯುದ್ಧ ಹಡಗವೊಡನೆಕೋಂಡಿಅವನ್ನು ಜಖಮ್

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ ?
— ಕಾ ಗಾ ದ ರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇನ್ನೆಲ್ಲಿಗಾಗಲು ಕಡಿಮೆ ದರವಲ್ಲ ದೊರೆಯುವುದೆಲ್ಲಿ?
ಸುಖನಿವಾಸ ದಲ್ಲಿ ಮಾತ್ರ.
ಪ್ರಯಾಣಿಕರಿಗೆ ಅನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಕಚೇರಿಯ
ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, ಸುಖನಿವಾಸ.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. S. No 1341.

ಸರ್ಪು ಶೆಟ್ಟಿ — ವಾದಿ

ಮೇಲ್ಕು

(1) ತಿಂಮು ಶೆಟ್ಟಿ-ಚಿಟ್ಟು ಶೆಟ್ಟಿ ಸೂನು, (2 ಮಕ್ಕಳಜೆಟ್ಟಿ, (3) ಲಂಕರಶೆಟ್ಟಿ, (4) ಅಚ್ಚುಕಟ್ಟಿ, 1ನೆಯವಳ ಮಕ್ಕಳು ಅಬ್ಬಿ ಪಾಲ್ಕು ಸಣ್ಣಾಲಗ್ರಾಮದ ಕೆಂಪುಂಗರಪ್ಪಿನವರ್ತಿ.—ಪ್ರತಿವಾದಿಯು.

ಇವರೊಳಗ

ಈ ಮೂಲ್ಕ ನೋಟಿ ಪೆಸರು ಕಾಣಿಸಿದ ಪ್ರತಿವಾದಿರಿಗೆ ತಿಳಿಯಹಡಿಸುವದೇನಂದ್ರೆ—

ವಾದಿಯಿಂದ ನಿಮ್ಮ ಕ.ಡ ಬಾಧ್ಯದ ಆಸ್ತಿಗಳ ತೀರ್ವ ಸಲ್ಕಾವುವ ಬಗ್ಗೆ 1936ನೆ ಇಸ್ವಿ ಎಪ್ರಿಲು ತಿಂಗಳಲ್ಲಿ ಪಡೆದ ರೂಪಾ 100ನ್ನು ಬಡ್ಡಿ ಸಹಿತ ಬರಮಾಡಿಕೆಳ್ಳುವ ಬಗ್ಗೆ ವಾದಿಯು ನಿಮ್ಮ ವಿರೆ ಮಾಕ್ಕುನಾಮಿದ ಮೇಲ್ಕಂಡ ಕೋರ್ಟುS C. S. No. 164/1940ನೆ ವ್ಯಾಜ್ಯವ ನಿಮ್ಮ ಮಾಜ್ಞಾಪತ್ರ ಬಗ್ಗೆ ಕಾರೀಕು 12-8-1940ಕ್ಕೆ ಇಪ್ಪರೆ. ನಿಗದಿ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉತ್ತರಕೊಡಕ್ಕೆಪ್ಪ. ಪ್ಪು ಪರೆ ನಿಮ್ಮನ್ನ ನಿಮ್ಮಾಮಾ ನಿಮ್ಮ ಗೈರುಹಾಜರಿಯಲ್ಲಿ ಮೇಲ್ಕಂಡ ವ್ಯಾಜ್ಯವ ತೀರ್ಮಾನಾಲುಟಿತು ಎಂತ ಈ ಪಾತಳಕ ಕೋರ್ಟು ಹುಕುಮು ಶ್ರಕಾರ ತಿಳಿಸೂಣಾಗುತ್ತದೆ.

ಕಾರ್ಕಳ 31-7-40 — K.Sadananda Hegde ವಾದಿ ಕರೆ ಎಡ್ವೊಕೇಟ್.

NOTICE

In the court of the District Munsif of Mangalore.

S. E P. No 1510

Coimbatore

District Munsif's Court

S. C. No. 1915/1938

Between:—

The Travancore National & Quilon Bank (in liquidation), Limited by its official liquidators —*Petitioner.*

AND

1. T. Ratanam
2. G. Perumal Doss } *Respondents*

To

2nd Respondent,

G Perumal Doss, son of Govinda Pillai,
Telephone Operator, Mangalore.

Is hereby given that the above execution petition filed by petitioner for your arrest stands posted to 22 8 1940 for execution notice to you.

You are hereby requested to appear before the said Court on 22 8 1940 at 11 A. M. either in person or by a pleader and contest the execution Otherwise arrest warrant will be issued against you.

Mangalore 31-7-1940 } K Rammohan Rao, *Vakil for Petitioner.*

ಗೊಳಿಸಿದ ಎಗ್ಸಿಟರ್, ಅಜಕ್ಸ್ ಮತ್ತು ಆಬಿಲಿಸ್ ಎಂಬ ಬ್ರಿಟಿಷ್ ಕ್ರೂಸರುಗಳು ಪ್ರಮುಖವಾಗಿವೆ. ಎಗ್ಸಿಟರಿನಲ್ಲಿ 8 ಇಂಚು, ಅಜಕ್ಸ್ ಮತ್ತು ಆಬಿಲಿಸ್ ಗಳಲ್ಲಿ 6 ಇಂಚು ವ್ಯಾಸದ ತೋಪುಗಳಿದ್ದುವು. ಬ್ರಿಟಿಷರು ಈಗ ಹಲವು ಕ್ರೂಸರುಗಳನ್ನು ವಿಮಾನವಾಹಕ ಹಡಗುಗಳಾಗಿ ಮಾರ್ಪಡಿಸಿರುತ್ತಾರೆ

ಡಿಸ್ಟ್ರೋಯರ್
(ಅಗ್ರಗಾಮಿ ಯುದ್ಧನಾವೆ)

ಕ್ರೂಸರಿನ ನಂತರದ ಯುದ್ಧ ಹಡಗ ವೆಂದರೆ ಡಿಸ್ಟ್ರೋಯರು. ಟೊರ್ಪೆಡೋ ಬೋಟುಗಳೆಂಬ ಅತಿ ಚಿಕ್ಕ ಸಿಡಿ ತೋಟ ನಾವೆಗಳನ್ನು ನಾಶಮಾಡಲು ನಿರ್ಮಿಸಲ್ಪಟ್ಟ ಯುದ್ಧ ಹಡಗಗಳವು ಈಗಣ ಡಿಸ್ಟ್ರೋಯರು 1300 ಟನ್ನು ತೂಕ ವಿದ್ದು ಘಂಟೆಗೆ 100ರಿಂದ 50 ಮೈಲು ವೇಗವುಳ್ಳವಾಗಿದೆ ಅದರಲ್ಲಿ 4 ರಿಂದ 6 ಇಂಚು ತೋಪು, ಮತ್ತು ನಿಳೆಂಟು ಸಿಡಿ ತೋಟಿಗಳಿರುತ್ತವೆ. ಡಿಸ್ಟ್ರೋಯರುಗಳಿಗೆ ರಕ್ಷಾ ಕವಚವೇನೂ ಇರುವುದಿಲ್ಲ ಅತ್ಯಾ ಜೆಗೆ ಕಟ್ಟಲ್ಪಟ್ಟಿರುವ ಡಿಸ್ಟ್ರೋಯರುಗಳು ದೊಡ್ಡವಾಗಿರುತ್ತವೆ. ಡಿಸ್ಟ್ರೋಯರುಗಳ ಕೆಲಸವು ಅನೇಕ ರೀತಿಯದಾಗಿದೆ. ಯುದ್ಧನೌಕೆಯ ಅಗ್ರಗಾಮಿ ಹಡಗ ಗಳವು. ಕೆಲವು ವೇಳೆ ವೈರಿಗಳನ್ನು ಎಂಬಿಸುವ ಮಸುಕಾಗಿ ಉಪಯೋಗಿಸ ಲ್ಪಡುತ್ತವೆ. ವೈರಿ ಹಡಗಗಳ ಮೇಲೆ ಸಿಡಿ ತೋಟಿಗಳನ್ನು ರಾತ್ರಿಯಲ್ಲಾಗಲಿ ಹಗ ಲಲ್ಲಾಗಲ್ಲಿ ಸ್ರಯೋಗಿಸುವುದು, ತಮ್ಮ ನೌಕಾಪಡೆಯ ಪತ್ತಿರುವ ವೈರಿ ಸಬ್ ಮೆರೀನುಗಳನ್ನು ನಾಶಮಾಡುವುದು, ಮತ್ತು ತಮ್ಮ ನೌಕಾಪಡೆಯ ಚಲನ ವಲನವನ್ನು ಮರೆಮಾಡಲು ಹೊಗೆ ಪರ ದೆಯನ್ನೆಬ್ಬಿಸುವುದೇ ಡಿಸ್ಟ್ರೋಯರುಗಳ ಪ್ರಮುಖ್ಯ ಕೆಲಸ. ಸಬ ಮೆರೀನುಗಳ ಅತಿ ದೊಡ್ಡ ವೈರಿ ಡಿಸ್ಟ್ರೋಯರುಗಳು. ತಮ್ಮ ಅತಿ ಹೆಚ್ಚಿನ ವೇಗದಿಂದ ಸಬ ಮೆರೀನ್ ತೋರಬರುವ ಸ್ಥಳಕ್ಕೆ ಇವು ತೂಡಲೆ ಬಿಡಿ ಜಲಗರ್ಭಗಾಮಿ ತೋಟಿ ಗಳನ್ನೆಸೆದು ಅವನ್ನು ನಾಶ ಇಲ್ಲನೆ ಜಮಂ ಮಾಡುವುವು.

ಸಬ್‌ಮೆರೀನು
(ಜಲಾಂತರ್ಗಾಮಿ ನಾವೆ)

ಕೊನೆಯ ಹಾಗು ಅತಿ ಕೌತುಕವಾದ ಯುದ್ಧ ಹಡಗವೆಂದರೆ ಸಬ್‌ಮೆರೀನು ಅತಿ ದೊಡ್ಡ ಕಬ್ಬಿಣದ ಚುಟ್ಟಿಯಂತಿದೆ ಆದರ ಆಕೃತಿ. ಬಾಲದಲ್ಲಡಗಿಸಲಾಕ ಯಂತ್ರ, ಚುಕ್ಕಾಣಿಗಳಿವೆ. ಎರಡು ಕಡೆಗಳಲ್ಲಿಯೂ ಸಮತಟ್ಟಾದ ಎರಡೆರಡು ರೆಕ್ಕೆಗಳಿರು ತ್ತವೆ ಸುವಾರು ಮಧ್ಯ ಬಾಗದಲ್ಲಿ ಚಿಕ್ಕ ಉರುಟಾದ ಬುಕ್ಕಿನ ಮುಖವಿದೆ. ಈ ಮೂಲಕವೇ ಈ ನಾವೆಯು ಚಾಲಕರು ಅನನ್ನು ನೀರ ಮೇಲೆ ಬೇಕಾದಲ್ಲಗೆ ನಡಿ ಸುತ್ತಾರೆ ಸಬ್‌ಮೆರೀನ್ ಮುಳುಗಿದಾಗ ಈ ಮುಖವು ಮುಚ್ಚಲ್ಪಟ್ಟು ಪರಿ ಸ್ಕೋಪ್ ಎಂಬ ನೀರೊಳಗಿನ ನೋಡುವ ಯಂತ್ರವು ಅಪರೋಳಗಿಂದ ಮೇಲೆ ಒರು ತ್ತದೆ ಸಬ್‌ಮೆರೀನಿನೊಳಗೆ ಎರಡು ಪ್ರತ್ಯೇಕವಾದ ಇಂಜಿನುಗಳಿವೆ ನೀರ ಮೇಲೆ ಚಲಿಸುವಾಗ ಇತರ ಹಡಗಗಳಂ ತಹ ಯಂತ್ರವು ಚಾಲನಗೊತ್ತದೆ. ನಿರೊ ಳಗೆ ಇನ್ನೊಂದು ರೀತಿಯ ಯಂತ್ರವು ಚಾಲನಗೊತ್ತದೆ. ನೀರ ಮೇಲೆ ಸಂಚ ರಿಸುವಾಗ ಬಾಲಾಗುವ ಯಂತ್ರಕ್ಕೆ ವಾಯು ಮತ್ತು ಕಟ್ಟಿಗೆ ಬೇಕು.

ಆದರೆ ನೀರೊಳಗೆ ಚಲಿಸುವಾಗ ನಡಿ ಯುವ ಯಂತ್ರವು ಇಲೆಕ್ಟ್ರಿಕ್ ಬ್ಯಾಟರಿಗಳಿಂದ ಶಕ್ತಿಪಡೆಯುತ್ತದೆ ಸಬ್ ಮೇರೀನಿನೊಳಗೆ ದೊಡ್ಡ ಪ್ರಮಾಣದ ಭಾರವಾದ ಬ್ಯಾಟರಿಗಳು ತ್ತವೆ. ಇವನ್ನು ಸವಂದ್ರದ ನೀರಿಂದ ತುಂಬಿದಾಗ ಸಬ್‌ಮೆರೀನ್ ಮುಳುಗುತ್ತದೆ ಆಗ ಹಾಲಿಕ ಪೋಟರ್ ಯಂತ್ರದಿಂದ ಮುಂದೂಡಲ್ಪಟ್ಟು ಮುಳುಗುತ್ತವೆ. ಅವ ವಾ ರೆಕ್ಕೆಗಳನ್ನು ಪಯೋಗಿಸುವ ಮೇರೆಗೆ ಮುಳ್ಳಾಗದಲ್ಲೇ ಚಲಿಸುತ್ತವೆ ಸಬ್ ಮೆರೀನುಗಳಿಗೆ ದೊಡ್ಡ ಉಕ್ಕಿನ ಪಾತ್ರೆಗಳಲ್ಲಿ ಗಾಳಿಯು ಒತ್ತಿರಲ್ಪಡುತ್ತವೆ. ಸಬ್‌ಮೆರೀನು ಬೇಲೆ ಬರಬೇಕಾದಾಗ ಈ ಗಾಳಿಯು ಇವನ್ನು ನೀರಿನ ಟ್ಯಾಂಕಿಗಳೊಳಗೆ ಬಿಡಲಾಗುತ್ತದೆ ಹೆಚ್ಚಿನ ಒತ್ತಾಟವಿರುವ ಈ ಗಾಳಿಯು ಟ್ಯಾಂಕಿಗಳ ನೀರನ್ನೆಲ್ಲಾ ಮೇಲಕ್ಕೆ ಹಾರಿಸಿ ನಳಗೆಯ ಮೂಲಕ ಹೊರ ಹೋಗುತ್ತದೆ ಸಬ್‌ಮೆರೀನೊಂದು ಎಷ್ಟು ಹೆಚ್ಚು ವಿದ್ಯುತ್ತನ್ನು ಸಂಗ್ರಹಿಸಿ ಕೊಂಡಿರ ತ್ತದೋ ಅಷ್ಟು ದಿನಗಳವರೆಗೆ ನೀರಿನೊಳಗಿರಬಲ್ಲದು ಒಮ್ಮೆ ಸಂಗ್ರಹಿ ಸಲ್ಪಟ್ಟ ವಿದ್ಯುತ್ತು ಖರ್ಚಾದಾಗ ಬ್ಯಾಟರಿ ಗಳಿಗೆ ಪುನಃ ವಿದ್ಯುತ್ತನ್ನು ತುಂಬಿಸಲು ಮೇಲೆ ಬರಬೇಕು. ಸಬ್‌ಮೆರೀನಿನೊಳಗೆ ಉಸಿರಾಡುವುದಕ್ಕೆ ಹೆಚ್ಚಿನ ಮಾಯು ಸಂ ಗ್ರಹ ಇರುವುದಿಲ್ಲ ಆದರೊಳಗಣ ಟೋರ್ಪೆಡೋನಳಿಗೆಗಳು ಆದರ ಮುಂಭಾ ಗದ ಹೊರವಳಯಕ್ಕೆ ಜೋಡಿಸಲ್ಪಟ್ಟಿರು ತ್ತವೆ. ಕೆಲವು ಸಬ್‌ಮೆರೀನುಗಳಲ್ಲಿ ಇವು ಹಿಂಭಾಗದಲ್ಲಿರುತ್ತವೆ ಟೋರ್ಪೆಡೊವನ್ನು ಹಡಗಕ್ಕೆ ಗುರಿಯಿಟ್ಟು ಹೊಡೆಯುವಾಗ ಇಡೀ ಸಬ್‌ಮೆರೀನು ಹಡಗದ ಕಡಗೆ ನೋಸೆಗೊಂಡಿರುತ್ತದೆ. ಪೆರಿಸ್ಕೋಪಿನಮೂ ಲಕ ದಿಕ್ಕನ್ನು ಕಂದುಬಿಡಿದು ಟೋಪೆ ಡೋಗಳು ಗುರಿಯಿಟ್ಟು ಹೊಡಿಯಲ್ಪ ಡುತ್ತವೆ. ಪೆರಿಸ್ಕೋಪೆಂದರೆ ದೂರ ನೋಳಗೆ ಪಡಿಯಲ್ಲಿರುವ ಮರ್ಬಿನೆಂದು ಸಂಕ್ಷೇಪ ವಾಗಿ ಹೇಳಬಹುದು. ಸಬ್‌ಮೆರೀನು ಮುಳುಗುವಾಗ ಈ ದಂಡಿನು ಮೇಲಕ್ಕೆತ್ತ ಲ್ಪಡುವುದು. ಆದರ ನೂರಕ ೫೦ ಕಡಿ ಆಳದ ವರೆಗೆ ಹೋದರೂ ನೀರಮೇಲೆ ನಡೆ ಯುವುದನ್ನೆಲ್ಲಾ ನೋಡಬಹುದು. ಆದರೆ ಅನಂತರ ಮಾತ್ರ ನೋಡುವುದಕ್ಕು ಸಾಧ್ಯ ವಿಲ್ಲ

ಇಂಗ್ಲೆಂಡಿನ ಅದ್ವಿತೀಯ
ನೌಕಾಬಲ

ಸ್ಪೈನಿನೊಡನೆ ನಡೆದ ಟ್ರಿಫಾಲ್ಗರ್ ಯುದ್ಧದಲ್ಲಿ ಜಯಶೀಲವಾವಂದಿನಿಂದ ಇಂಗ್ಲೆಂಡೇ ಲೋಕದಲ್ಲಿ ನೌಕಾಬಲದಲ್ಲಿ ಪ್ರಬಲನುಷ್ಠಾನ ಪಡೆದು ಸಮುದ್ರದೊಡೆತನ ಪಡೆದಿದೆ ಲೋಕದ ಎಲ್ಲಾ ಸಾಗರಗಳಲ್ಲಿ ಯೂ ಅದರ ನೌಕೆಯು ಇದ್ದೇ ಇದೆ. ಜಬ್ರಾಲ್ಟರ್, ಮಾಲ್ಟ, ಏಡೆನ್, ಸಿಂಗ ಪುರ, ಹೊಂಕೋಂಗ್ ಮೊದಲಾದ ಸಂದು ಕಟ್ಟಿನ ಸಮುದ್ರ ರೇವುಗಳಲ್ಲಿ ಅತಿ ದೊಡ್ಡ ನೌಕಾಸ್ಥಾನಗಳಿರುತ್ತವೆ ಬ್ರಿಟನು ಸವುದ್ರ ವೆರಿಗಳನ್ನು ಪೂರ್ತಿ ಗಸ್ತುಗುಂಪಿಗಾಗಿ ಬ್ರಿಟಿಷ್ ನಾವಿಕರ, ಹ ಲವು ಶತಮಾನಗಳಿಂದ ಸಮುದ್ರ ಸಂಚಾ ರಾನುಭವ, ಜುಗ್ಗ ತಪಜೇತಿ ಪಡೆದು ಪಳಗಿದವರೂ. ಡ್ರೇಕ್, ನೆಲ್ಸನ್‌ರೇ ಮೊದ ಲಾದ ಸಮುದ್ರಯುದ್ಧ ವೀರರ ಪರಂಪರೆ ಯವರಾಗಿ ನಮ್ಮ ಹಿಂದಿನವರಿಂದೆಮಿನವನ್ನು ಬೆಳೆಸಿಕೊಂಡು ಬಂದವರು ಬ್ರಿಟಿಷ್ ನಾವಿಕರಿಗೆ ಸಮಾನರಾದ ನಾವಿಕರೇ ಲೋಕದಲ್ಲಿರಲಿಲ್ಲ ಅದಕಾರಣ ಬ್ರಿ ಟಿಷ್ ಸಮುದ್ರ ಬಲವನ್ನು ಇಷ್ಟರವರೆಗೆ ಯಾರಿಗೂ ಹಿಮ್ಮೆಟ್ಟಿಸಲು ಸಾಧ್ಯವಾಗಿರ ವುದಿಲ್ಲ ಇಂದೀಗ ಅಮೇರಿಕವು ಶಾಂತ ಮತ್ತು ಅಟ್ಲಾಂಟಿಕ್ ಸಾಗರಗಳ ಬಗ್ಗೆ ಎರಡು ಪ್ರತ್ಯೇ ಪ್ರತ್ಯೇಕ ಹಾಗೂ ಜಗತ್ತಿ ನಲ್ಲೇ ಅತ್ಯಂತ ಪ್ರಬಲವಾದ ನೌಕಾ ಪಡೆ ಯನ್ನು ಕಟ್ಟುವ ಕಾರ್ಯಕ್ರಮವನ್ನು ಕೈಕೊಂಡು ತದಕ್ಕಾಗಿ 10,೦೦೦ ಮಿಲ್ಯ ಡಾಲರು ವ್ಯಯಿಸುವ ನಿರ್ಧಾರ ಮಾಡಿರು ವುದು ಆದರ ಇದಕ್ಕು ಕಡಿಮೆಯೆಂದರೆ ಇದಾರುವರ್ಷ ಜೇರ್ಮನಿತ್ತು ಇಂಗ್ಲೆಂಡಿನ ನಂತರ 2ನೇ ಸ್ಥಾನ ಫ್ರಾನ್ಸಿಗೆ ಸಲ್ಲುತ್ತಿ ರಾಗಿತ್ತು. ಅದರೊಡನೆಯೂ ಪ್ರಬಲ ನೌಕಾ ಪಡೆಯಿದ್ದಿತು ಆದರೆ ಇಂದೀಗ ಅದು ಛಿನ್ನ ಛಿನ್ನವಾಗಿ ಒಡಮನೆಯಾಗಿ ತನ್ನ ಶಕ್ತಿಯನ್ನು ಕಳಕೊಂಡಿರುವುದು. ತನ್ನಷ್ಟೇ ಅತಿದೊಡ್ಡ ನೌಕಾಪಡೆಯೆಂದು ಇಟಲಿಯು ಜಂಭ ಹೊಡೆಯುತ್ತಿರುವುದಾ ದರೂ ಇಂಗ್ಲೆಂಡಿನ ಸಮೀಪಕ್ಕೆ ಕೂಡಾ ಅದಕ್ಕೆ ಬರಲು ಸಾಧ್ಯವಿಲ್ಲೆಂಬುದೀಗ ಸಿದ್ಧವಾಗಿದೆ. ಜರ್ಮನಿಯ ವಶವಿರುವ ಯುದ್ಧ ಹಡಗಗಳೇ ಕಡಿಮೆ. ಆದರೆ ಅವು ಅತ್ಯಾಧುನಿಕ ರೀತಿಯಲ್ಲಿ ಕಟ್ಟಲ್ಪಟ್ಟಿದ್ದು ಹೆಚ್ಚಿನ ಶಕ್ತಿಯುಳ್ಳದಾಗಿದೆ. ಜರ್ಮನ್ ಪೊಕೆಟ್ ಬೆಟ್ಲ್‌ಶಿಪ್ ಎಂಬ ಚಿಕ್ಕ ನಮೂನೆಯ ಯುದ್ಧ ಹಡಗಗಳು ಬಹಳ ವೇಗ ಮತ್ತು ಯುದ್ಧ ಚಾತುರ್ಯ ವುಳ್ಳವಾಗಿವೆ ಜರ್ಮನ್ ಯು. ಬೋಟು ಗಳೆಂಬ ಸಬ್‌ಮೆರೀನುಗಳು ವಿಶಿಷ್ಟ ರೀತಿ ಯವಿದ್ದು ಬಹಳ ಸಾಮರ್ಥ್ಯವುಳ್ಳದಾ ಗಿವೆ. ಇಂದೀಗ ಜರ್ಮನರು ಇ ಬೋಟು ಗಳೆಂಬ ಹೊಸ ರೀತಿಯ ಅತಿ ಚಿಕ್ಕ ಸಬ್ ಮೆರೀನುಗಳನ್ನು ತಯಾರಿಸಿರುತ್ತಾರೆ. ಇವು ಗಳನ್ನು ಕೂಡ ನಾಶಮಾಡುವರಹಸ್ಯವನ್ನು ಬ್ರಿಟಿಷರುಕಂಡುಕೊಂಡಿರುತ್ತಾರೆ. ಜರ್ಮನಿ ಮತ್ತು ಇಟಲಿಗಳು ಒಟ್ಟಾಗಿ ಹೋರಾಡಿ ದರೂ ಇಂಗ್ಲೆಂಡಿನ ನೌಕಾಬಲವನ್ನು ಜ ಯಶೀಲವಾಗಿ ಇದಿರಿಸಲು ಸಾಧ್ಯವಿಲ್ಲ. ನೌಕಾಬಲದಲ್ಲಿ ಜಪಾನು ಇಂಗ್ಲೆಂಡಿನ ಮಾದರಿಯನ್ನನುಸರಿಸಿದೆ ಜಪಾನ ನಾ ವಿಕರು ಅತಿ ಚತುರರೂ ಪಳಗಿದವರೂ ಆಗಿದ್ದಾರೆ. ಆದರೆ ಇಂಗ್ಲೆಂಡಿನ ಯುದ್ಧ ನಾವೆಗಳ ಸಾಲಿಗೆ ಜಪಾನ ಹಡಗಗಳು ಬರಲಾರವು. ಇತ್ತೀಚಿಗೆ ಜಪಾನು ತನ್ನ ನೌಕಾಬಲವನ್ನು ವಿಶೇಷವಾಗಿ ಬೆಳೆಸಿ ದೆ. ರಷ್ಯವು ಈಗ ಕೆಲವು ವರ್ಷಗಳಿಂದ ತನ್ನ ನೌಕಾಪಡೆಯನ್ನು ಇಮ್ಮಡಿ ನಾಲ್ಮಡಿಯಾಗಿ ಹೆಚ್ಚಿಸಿದೆ. ಜರ್ಮನಿ ಜಪಾನುಗಳ ಒಟ್ಟು ನೌಕಾಪಡೆಗಿಂತ ಲೂ ಹೆಚ್ಚಿನ ಹಡಗಪಡೆಯು ತಮ್ಮಲ್ಲಿದೆ ಯೆಂದು ರಷ್ಯದ ನೌಕಾ ಸೇನಾನಿಯೊಬ್ಬರು ಇತ್ತಲಾಗಿ ಹೇಳಿರುವರು. ಇದರಲ್ಲಿ ಅತಿಶಯೋಕ್ತಿ ಏನೂ ಇರುವುದಿಲ್ಲ. ಕಪ್ಪು ಸಮುದ್ರ, ಬಾಲ್ಟಿಕ್ ಸಮುದ್ರ, ಮತ್ತು ಜಪಾನ ಸಮುದ್ರದ ವ್ಲಾಡಿವೊ ಸ್ಟಕಿನಲ್ಲಿ ಅವರ ಪ್ರಬಲ ನೌಕಾಪಡೆಗಳಿರು ತ್ತವೆ ಆದರೆ ರಷ್ಯವು ತನ್ನ ಬಲವನ್ನು ಎಷ್ಟೊಂದು ಹೆಚ್ಚಿಸಿರುವುದೆಂದು ಸರಿಯಾ ಗಿ ಹೇಳಲು ಸಾಧ್ಯವಿಲ್ಲ. ಅಂತೂ ಇನ್ನೂ ಕೆಲವು ವರ್ಷ ಸಮುದ್ರ ಶಕ್ತಿಯಲ್ಲಿ ಬ್ರಿಟ ನನ್ನು ಹಿಂದೆ ಹಾಕಲು ಯಾವ ರಾಷ್ಟ್ರಕ್ಕೂ ಸಾಧ್ಯವಾಗಲಂರದು.

WAR or NO WAR.

NAVAYUGA, the Paper of the people keeps to its programme and announces its JAYANTHI SPECIAL on 22-8-'40 in connection with the Avathar Day of SRI KRISHNA of Udipi.

Jayanthi Special hardly needs any introduction. The value of this issue to an advertiser is unbounded. A campaign of publicity through the special Number attracts innumerable persons in and out of season. Therefore send your advertisements immediately.

Rates on application.

Advt. Manager, **NAVAYUGA, UDIPI.**

"ನವಯುಗದ ಜಯಂತಿ ಸಂಚಿಕೆ"

ಎಂದಿನಂತೆ ಈ ವರ್ಷವೂ "ಶ್ರೀ ಕೃಷ್ಣ ಜಯಂತಿ ಸಂಚಿಕೆ" ಎಂಬ ವಿಶೇಷ ಸಂಚಿಕೆಯು ತಾ. ೨೨-೮-೪೦ರಂದು ಪ್ರಕಟಗೊಳ್ಳುವುದು

ಜಾಹೀರಾತಿಗೆ ಉತ್ತಮ ಸಾಧನ. ತ್ವರೆಮಾಡಿರಿ.

ದರಗಳಿಗೆ ಬರೆಯಿರಿ.

NOTICE

In the Court of the District Munsif of Karkal.

O. S. no 1515 R. E. P. no 1216

K. P. Subraya Prabhu (son of K. P. Subraya Prabhu, residing in Karkal) } Petitioner,

Versus

Venkamma & 2 others Respondents

1o, (3rd respondent) Diego D. Souza son of Kote-Koph Pedro Souza No 10, Owen Dunn Road, Camden Bombay.

Where is the above named petitioner has mad application to this Court for sale of the mortgaged property and also for permission to bid and set off at the time of sale, you are hereby warned to appear in this Court in person or by a Pleader duly instructed on 26-8-1940 at 10 A. M. before this Court failing which the said application will be heard and determined expaite

(By order of the Court)

Karkala } **K. L. Kudva,**
29th July 1940 } *Pleader for Petitioner.*

★ ಮೈಸೂರು ಮಹಾರಾಜರ ನಿಧನ ★

ಮೈಸೂರು ಮಾದರಿ ಸಂಸ್ಥಾನವೆನಿಸಲು ಪ್ರಾಮುಖ್ಯ ಕಾರಣರಾಗಿ ರಾಜಋಷಿಗಳಂತಿದ್ದ ಮಹಾಪುರುಷರು ಅದೃಶ್ಯರಾದರು.

ಮೈಸೂರಿಗೆ ಪಾಗೂ ಇಡೀ ದೇಶಕ್ಕೆ ಅತಿ ದೊಡ್ಡ ನಷ್ಟ

ಮೈಸೂರಿನ ಮಹಾರಾಜ ಶ್ರೀ ಕೃಷ್ಣ ರಾಜ ಒಡೆಯರ್ ಬಹದೂರು, ಜಿ. ಸಿ. ಎಸ್. ಐ., ಜಿ ಬಿ ಇ, ಇವರು ಇಂದೇ ತಾ 3ನೇ ರಾತ್ರಿ ಬೆಂಗಳೂರಿನಲ್ಲಿ ವಿವೆಂಗತ ರಾದರೆಂಬುದು ಅತ್ಯಂತ ವಿಷಾದಕರವಿವಿ ಮಯಾರಾಜರಿಗೆ ಕಳೆದ ಆದಿತ್ಯವಾರ ಹೃದಯ ಸ್ತಂಭನವುಂಟಾಯಿತು. ಅನಂತರ ಅವರ ದೇಹಸ್ಥಿತಿಯು ಸ್ವಲ್ಪ ವಷ್ಟಿಗೆ ಸುಧಾರಿಸಿತು. ಆದರೆ ತಾ. 3ನೇ ಸಂಜೆ ಪರಿಸ್ಥಿತಿಯು ಘನಃ ಕೆಟ್ಟ ದಾಗಿ ರಾತ್ರಿ ಘಂಟೆ 9ಕ್ಕೆ ಮರಣ ಹೊಂದಿದರು. ಮಹಾರಾಜರ ಮರಣದ ಸಂಭರ್ಭದಲ್ಲಿ ಮಹಾರಾಣಿ, ಯುವರಾಜ, ಯುವರಾಣಿ, ದಿವಾನ್ ಮತ್ತು ಇತರ ಪ್ರಮುಖ್ಯ ಸರ ಕಾರಿ ನೌಕರರು ಹಾಜರಿದ್ದರು. ತಾ 4 ನೇ ಬೆಳಗ್ಗೆ ಮಹಾರಾಜರ ಕಳೇಬರವನ್ನು ಮೈಸೂರಿಗೊಯ್ದು ಅಲ್ಲಿ ಶವಸಂಸ್ಕಾರ ನಡೆಯಿತು.

ಇಡೀ ಮೈಸೂರೇ ದುಃಖಸಾಗರ ದಲ್ಲಿ ಮುಳುಗಿದೆ.

ತನ್ನ ಪ್ರಗತಿಪರ ಆಡಳಿತ, ಮತ್ತು ಅವ ರ್ಯಜೀವನದಿಂದ ಪ್ರಜೆಗಳೆಲ್ಲರ ಪ್ರೀತಿ ಮತ್ತು ವಿಶ್ವಾಸಕ್ಕೆ ಸಂಪೂರ್ಣವಾಗಿ ಪಾತ್ರರಾಗಿದ್ದ ಶ್ರೀ ಕೃಷ್ಣರಾಜ ಒಡೆಯರ ಮರಣ ವಾರ್ತೆಯು ಮೈಸೂರಿಗರೂ ಹೊರಗೂ ಸಹೇವಿಷಯವನ್ನುಂಟು ಮಾಡಿರುವುದು. ಯಾಕೆಂದರೆ ತಾ. 2ರ ಡಾಕ್ಟರರ ಬುಲೆಟಿನ್ನಲ್ಲಿ ಅವರ ಸ್ಥಿತಿಯು ಸುಧಾರಿಸಿದೆ ಎಂದು ಪ್ರಕಟವಾಗಿದ್ದಿತು. ಹಕ್ಕನೆ ನೆದೆದು ಹೋಗಿರುವ ಈ ಮಹಾ ಪುರುಷರ ಮರಣದಿಂದ ಇಡೀ ಮೈಸೂರೇ ದುಃಖ ಸಾಗರದಲ್ಲಿ ಮುಳುಗಿ ಹೋಗಿರುವುದೆನ್ನಬಹುದು. ಮೈಸೂರಿನವರೆಲ್ಲರ ಮಾತ್ರವಲ್ಲದೆ ಹೊರಗಣವರ ವಿದೇಶೀಯರನ್ನು ಎಲ್ಲಾ ವರ್ಗ, ಜಾತಿ, ಮತಗಳವರ ಸಂಪೂರ್ಣಪ್ರೇಮಕ್ಕೆಪಾತ್ರರಾಗಿ ಇಷ್ಟೊಂದು ಮಾನ್ಯರಾದ ಮಹಾರಾಜರುಮೈಸೂರನ್ನೇ ಈ ವರೆಗೆ ಆಳಲಿಲ್ಲೆಂದೇ ಹೇಳಬಹುದು.

೧೩ ದಿನಗಳನಕ ಸಾರ್ವಜನಿಕ ದುಃಖ ಪ್ರದರ್ಶನ

ದಿವಂಗತ ಮಹಾರಾಜರ ಸ್ಮರಣಾರ್ಥ ವಾಗಿ ಮೈಸೂರಿನ ತೋಟ್ಗಾ, ಕಛೇರಿ, ಮತ್ತು ಶಿಕ್ಷಣ ಸಂಸ್ಥೆಗಳೇ ಮೊದಲಾ ದುವುಗಳು 13 ದಿನಗಳ ವರೆಗೆ ವುಚ್ಚ ಬಂದುವು. ತಾ. 10ರಿಂದ 12 ದಿನಗಳ ನಕ ಧ್ವಜಗಳು ಅರೆತೆರೆದಿಡಲ್ಪಡವು. ತಾ. 4 ರಲ್ಲಿ ಬೆಂಗಳೂರು ಮತ್ತು ಮೈಸೂರಲ್ಲಿ ಮಹಾರಾಜರ ಪ್ರಾಯದಷ್ಟು ಮಿನಿಟು ತೋಪುಗಳನ್ನು ಹಾರಿಸಲಾಗು ವುದು. ಮಹಾರಾಜರ ಮರಣದ ವರ್ತೆ ಯು ಬೆಂಗಳೂರು ಮೈಸೂರು ಮತ್ತು ಸಂ ಸ್ಥಾನದ ಇತರ ಕಡೆಗಳಿಗೆ ಮುಟ್ಟಿದೊಡ ನೆಯೇ ಜನರು ತಾವಾಗಿ ಅಂಗಡಿ ಮಾ ರ್ಕೆಟ್ಗಳನ್ನು ಮುಚ್ಚಿ ಪರತುಳಿ ಆಚರಿಸಿ ದರು. ಕಳೇಬರವು ಮೈಸೂರಿಗೆ ತರಲ್ಪ ಟ್ಟಾಗ ಸಾವಿರಾರು ಮಂದಿ ಪ್ರಜೆಗಳ. ನೆದೆದುಬಂದು ಹಿಂದೂ ಧರ್ಮದ ಮಹ ತ್ತಾದ ಆಧಾರಸ್ತಂಭರೂ, ಸ್ವಜ್ಯೆ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿ ನ್ವಯ ನಾಗರಿಕತೆಗಳಕಗೊಂಡು ಕೋಟಿಸಿ ಕೊಂಡಿದ್ದ ಮಾದರಿ ಮಹಾರಾಜರೂ, ತಮ್ಮ ತ್ರಿಕರಣ ಪೂರ್ವಕವಾದ ಭಕ್ತಿಗೆ ಪಾತ್ರಂಶಿಗಿದ್ದ ಮಹಾ ಪ್ರಭುವೂ ಆದ ಶ್ರೀಕೃಷ್ಣರಾಜ ಒಡೆಯರಿಗೆ ತಮ್ಮ ಕೊನೆಯ ವಂದನೆಯನ್ನರ್ಪಿಸಿದರು

ಶವ ಮೆರವಣಿಗೆ

ಶವ ಮೆರವಣಿಗೆಯು ತಾ. 4ನೇ ಬೆಳಿಗ್ಗೆ 9 ಘಂಟೆಗೆ ಹೊರಟು ಅರಸು ಮನೆತನದ ಸ್ಮಶಾನವಾದ ಮಧುವನಕ್ಕೆ ಮುಟ್ಟಿತು. ಅರಮನೆಯ ತೋಪುಗಳು 57 ಮಿನಿಟು ಗುಂಡುಗಳನ್ನು ಹಾರಿಸಿದುವು. ಮಹಾ ರಾಜರ ಸರ್ವಸಾಧಾರಣಳುಪನ್ನೇ ಕಳೇ ಬರಕ್ಕೆ ಹಾಕಲಾಗಿತ್ತು. ಶವವನ್ನು ಚಂ ಗಾರದ ಪಲಕೆಯಲ್ಲಿ ಮಧುವನಕ್ಕೊಯ್ಯ ಲಾಯಿತು. ಜಯ ಚಾಮರಾಜೇಂದ್ರರು ಪವಿತ್ರಾಗ್ನಿಯನ್ನು ಹಿಡಿದು ಪಾಲಕಿಯ ಹಿಂದೆ ಹೋಗುತ್ತಿದ್ದರು. ಅವರ ಎಡ ಬಲಗಳಲ್ಲಿ ಶ್ರೀಗಳಾದ ಎ. ವಿ. ಸುಬ್ಬ ಮಣ್ಯರಾಜ, ಮತ್ತು ಸಿ. ವಿ. ಸುಬ್ರಮಣ್ಯ ರಾಜು ಅವರುಗಳು ನಡೆಯುತ್ತಿದ್ದರು ಸಂಸ್ಥಾನದ ತುರಗ ದಳವು ದುಃಖ ಸೂಚಕ ಸೋಪಾನಕೆಸಿಂದ ಹಿಂದಿನಿಂದ ಹೋಗು ತ್ತಿತ್ತು. ಅವರ ಹಿಂದೆ ಸಾವಿರಾರು ಮಂದಿ ಪ್ರಜೆಗಳು ಸಾಲುಗಟ್ಟಿ ನಿರಯುತ್ತಿದ್ದರು ದಿವಾನರೂ, ರೆಸಿಡೆಂಟರೂ ತುರಗ ದಳ ದೊಂದಿಗೆ ಹೋಗುತ್ತಿದ್ದರು. ಮೆರವಣಿ ಗೆಯು 11 ಘಂಟೆಗೆ ಮಧುವನಕ್ಕೆ ಮುಟ್ಟಿತು ಧಾರ್ಮಿಕ ವಿಧಿಗಳೆಲ್ಲಾ ಆದ ಮೇಲೆ ದಹನ ಕ್ರಿಯೆ ನಡೆಯಿತು.

ಈಗ ಊಟಿಯಮಂಡಿನಲ್ಲಿರುವ ವೈಸರಾ ಯರೂ, ಮದ್ರಾಸಿನ ಗವರ್ನರೂ ತಮ್ಮ ದುಃಖಸೂಚಿಸಿ ಯುವರಾಜರು ಮತ್ತು ದಿವಾನರಿಗೆ ತಂತಿಬಿಟ್ಟಿರುವರೆಂದು ತಿಳಿದು ಬರುತ್ತದೆ. "ಮೈಸೂರಿನ ಪ್ರಜೆಗಳು ಮಾತ್ರವಲ್ಲ, ಇಡೀ ಇಂದುಸ್ಥಾನವು ಮೈಸೂರು ಮಹಾರಾಜರ ಮರಣದಿಂದ ದುಃಖಿಂದುಧಿಯಲ್ಲಿ ಮುಳುಗಿದೆ. ದಿವಂಗತ ಮಹಾರಾಜರು ಅತ್ಯುತ್ತಮ ನಡತೆಯವರು ಮತ್ತು ಜನತೆಯ ಅತಿ ಹೆಚ್ಚಿನ ಅನುರಾಗಕ್ಕೆ ಪಾತ್ರರಾದವರೆ" ಎಂದು ಶ್ರೀ ರಾಜಗೋಪಾಲಾಚಾರ್ಯರು ಹೇಳಿರುವರು. ಮದ್ರಾಸ್ ನೇಯರ್ರಾದ ಶ್ರೀಸತ್ಯ ಮೂರ್ತಿಗಳು, ಹಿಂದೂ ಮಹಾಸಭೆಯವ ರೇ ಮೊದಲಾದವರು ಸ್ಥಾರ್ಥಿಕ ದುಃಖಸೂಚಿಸಿರುವರು.

ಸಂಕ್ಷಿಪ್ತ ಜೀವನ ವೃತ್ತಾಂತ

ಶ್ರೀ ಕೃಷ್ಣರಾಜ ಒಡೆಯರು ಶ್ರೀ ಚಾಮರಾಜೇಂದ್ರರ ಪ್ರಥಮಪುತ್ರರಾಗಿ 1884ನೇ ಇಸ್ವಿ ಜೂನ್ ತಾ 18ರಲ್ಲಿ ಜನ ನಕ್ಕೆ ಬಂದರು. 1894ನೇ ಇಸ್ವಿ ದಶಂ ಬರ ತಾ. 28ರಲ್ಲು ತಂದೆಯು ಕಲ್ಕತ್ತ ದಲ್ಲಿ ವ್ಯಕರಾಜಾಗ, ಶ್ರೀ ಕೃಷ್ಣರಾಜರು ಮೈನರರಾಗಿ ಪಟ್ಟಕ್ಕೇರಿದರು. ಅವರಿಗೆ ಪ್ರಾಯಬರುವನಕ ಅನರ ತಾಯಿ ವಾಣಿ ವಿಲಾಸ ಸನ್ನಿಧಾನರವರು ರೀಜೆನ್ಸಿ ಕೌನ್ಸಿ ಲಿನ ಮೂಲಕ ಆಡಳಿತ ನೆಡಿಸುತ್ತಿದ್ದರು. 1902ನೇ ಜೂನ್ ತಾ. 30ರಲ್ಲಿ ಶ್ರೀ ಕೃಷ್ಣರಾಜ ಒಡೆಯರಿಗೆ, ಕಛಿಯಾವಾದ ವಾಣಿ ಸಂಸ್ಥಾನದ ಅಣರ ಎರಡನೇ ಪ್ರತ್ರಿ ಪ್ರತಾಪ ಕ್ರುಮಾಯಿಜೊಮಿರಿ ವಿವಾ ಹವಾಯಿತು ಮದುವೆಯಾದ ಎರಡು ವರ್ಷಗಳ ನಂತರ ರಾಜ್ಯಧಾರದ ಅಧಿಕಾರ ಪಡೆದರು. ಮಹಾರಾಜರಿಗೆ, ಇತರ ಕೆಲ ಮಂದಿ ರಾಜ ಪುತ್ರತನದ ಹುಡುಗರೊಂ ದಿಗೆ ಬಾಸಗಿಯಾಗಿ ಇಂಗ್ಲಿಷ್, ಕನ್ನಡ ಮತ್ತ ಸಂಸ್ಕೃತ ಶಿಕ್ಷಣ ಕೊಡಲ್ಪಟ್ಟಿತ್ತು. ಈಗಣ ದಿವಾನರಾದ ಸರ್. ಮಿರ್ಜಾ ರವರು ಅವರ ಸಹಪಾಠ್ಯಾಧಿಕಾರಿಯಾಗಿದ್ದರು. ಸರ್. ಸೈಮನ್ ಫ್ರೇಸರ್ ಎಂಬವರ ಕೈ ಕೆಳಗೆ ಮಹಾರಾಜರು ರಾಜ್ಯಾಡಳಿತ ತರ ಬೇತಿ ಪಡೆದರು. ಮೈಸೂರಿನ ಹಳ್ಳಿ ಹಳ್ಳಿ ಗಳನ್ನೂ ಕೋಟ್ಗಾ ಕಚೇರಿಗಳನ್ನೂ ಸಂದ ರ್ಶಿಸಿ ಸ್ವಯಂ ಅನುಭವ ಪಡೆದರು. 1902 ನೇ ಇಸ್ವಿಯಲ್ಲಿ ಅವರಿಗೆ ಪೂರ್ಣ ಅಧಿಕಾರವನ್ನು ಬ್ರಿಟಿಷ್ ಸರ್ಕಾರವು ಮಹಾರಾಜರಿಗೆ ಅಡಳಿತಾಧಿಕಾರವಿತ್ತರು.

ಮಹಾರಾಜರು ರಾಜ್ಯ ಭಾರದ ಜವಾಬ್ದಾರಿ ವಹಿಸಿಕೊಡನೆಯೇ ಪ್ರಥಮ ವಾಗಿ ಮಾಡಿದ ಕೆಲಸವೆಂದರೆ ರೀಜೆನ್ಸಿ ಕೌನ್ಸಿಲಿನ ಸಿಲಿಗೆ, ದಿವಾನರು ಪ್ರಥಮ

(೧೩ನೇ ಪುಟಕ್ಕೆ ಮುಂದುವರಿದೆ)

Money to Lend.

Loans are granted at competitive rates on Bullion, Gold Ornaments, Government Paper, Goods and produce, Shares & other valuable securities. Enquire of any of our THIRTY SEVEN OFFICES.

RESOURCES OF A CRORE | CANARA BANK LIMITED. ESTD. 1906.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೪-೪-೪೦

ಮೂದರಿ ರಾಜರು

ಮೈಸೂರಿನ ಮಹಾ ರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಬಹಳ ಕಳದ ಶನಿವಾರ ತನ್ನ ೫೭ನೇ ವಯಸ್ಸಿನಲ್ಲಿ ವಿಧಿವಶರಾದರೆಂಬುದು ಅತ್ಯಂತ ಖೇದಕರವಿದೆ. ಇವರಿಗೆ ಜುಲೈ ತಾ. ೨೫ರಲ್ಲು ಆಕಸ್ಮಾತ್ತಾಗಿ ಹೃದಯನೋವಿನೆ ಉಂಟಾಯಿತು. ಅನಂತರ ಅವರ ಪರಿಸ್ಥಿತಿಯು ಸುಧಾರಿಸಿ ಚಿಂತಾಜನಕವೇನೂ ಆಗಿರಲಿಲ್ಲ. ಆಗೋಸ್ತು ತಾ. ೩ನೇ ಅಪರಾಹ್ನ ಸರ್. ನಿರ್ಜಾರವೇ ಮೊದಲಾದ ನರೊಡನೆ ನಗುತ್ತಾ ಮಾತಾಡುತ್ತಿದ್ದರು. ಆದರೆ ಸಂಜೆ ಘಕ್ಕನೆ ವಿಷಮವಾಗಿ ರಾತ್ರಿ ೨ಘಂಟೆಗೆ ದಿವಂಗತರಾಗಿ ಇಡೀ ಮೈಸೂರನ್ನೇ ಶೋಕ ಸಾಗರದಲ್ಲದ್ದಿರುವರು.

ಹಿಂದಿನ ಹಿಂದೂಪುರಾಣ ಗ್ರಂಥಗಳಲ್ಲಿ ಚಿತ್ರಿತವಾಗಿರುವ ರಾಜ ಮತ್ತು ರಾಜ್ಯ ಭಾರದ ಆದರ್ಶವನ್ನು ಇಂದಿನ ಕಾಲಸ್ಥಿತಿಯಲ್ಲಿಯೂ ಮೂರ್ತ ಸ್ವರೂಪಕ್ಕೆ ತರುವುದರಲ್ಲಿ ಬಲುಮಟ್ಟಿಗೆ ಜಯಶೀಲರಾಗಿರುವ ಒಬ್ಬನೇ ಒಬ್ಬ ಹಿಂದೀ ರಾಜರೆಂದರೆ ಮೈಸೂರು ಮಹಾರಾಜರೆಂದರೆ ತಪ್ಪಾಗಲಾರದು. ಮಹಾತ್ಮ ಗಾಂಧಿಯವರು ರಾಮರಾಜ್ಯವೆಂದು ಹೇಳಿಸಿಕ್ಕು ಉತ್ತಮ ರಾಜ್ಯಭಾರ ಮೈಸೂರಿದ್ದು. ಆದರ್ಶ ರಾಜರು ಮೈಸೂರು ಮಹಾರಾಜರು, ಉದಾತ್ತ ಜೀವನ ಶ್ರೀ ಕೃಷ್ಣರಾಜ ಒಡೆಯರದು. ಅವರ 18ನೇ ವಯಸ್ಸಿನಿಂದ 57ರ ವರೆಗಣ ಸುಮಾರು 40ವರ್ಷಗಳ ರಾಜ್ಯಭಾರವು ಮೈಸೂರಿನ ಇತಿಹಾಸದಲ್ಲಿ ಚಿರಸ್ಮರಣೀಯವಾದುದು.

1927ರಲ್ಲಿ ಅಭೂತ ಪೂರ್ವಕ ವಿಜೃಂಭಣೆ ಮತ್ತು ಅತ್ಯಂತ ಭಕ್ತಿ ಮತ್ತು ಆನಂದದಿಂದ ಮೈಸೂರಿನ ಜನತೆಯು ಮಹಾರಾಜರ ಆಳ್ವಿಕೆಯ ರಜತೋತ್ಸವವನ್ನು ಆಚರಿಸಿತು. ಆ ಸಂದರ್ಭದಲ್ಲಿ ಮಹಾರಾಜರು ಪ್ರಜೆಗಳಿಗಿತ್ತ ಚಿತ್ತ ಸಂದೇಶವು ಅವರ ಹೃದಯದ ಕೈಗನ್ನಡಿಯಂತಿರುವುದು. "ನನ್ನ ಆಳ್ವಿಕೆಯ 25ನೇ ವರ್ಷವನ್ನು ಸಂಪೂರ್ಣವಾಗಿ ಸುವ ಈ ದಿನದಲ್ಲಿ, ನನ್ನ ಪ್ರಿಯ ಪ್ರಜೆಗಳಿಲ್ಲರನ್ನು ಅವರ ಸುಖದ ಕುರಿತು ತುಂಬಾ ಆತುರಗೊಂಡಿರುವ ಹೃದಯದಿಂದ ನಮಸ್ಕರಿಸುತ್ತೇನೆ. ನಾನು ಬದುಕಿರುವ ವರೆಗೆ ಅವಿಶ್ರಾಂತವಾಗಿ ದುಡಿದು ಅವರ ಹಿತ ಮತ್ತು ಅಭಿವೃದ್ಧಿ ಸಾಧಿಸಲೆತ್ನಿಸುವೆನು. ನನ್ನ ಜೀವನ ಮತ್ತು ಆಳ್ವಿಕೆಯ ಈ ಸರೋದ್ದೇಶವನ್ನು ಸಾಧಿಸಲು ದೇವರು ನನಗೆ ಬೇಕಾದ ಮತ್ತು ಬಲವನ್ನೀಯಲೆಂದು ಪ್ರಾರ್ಥಿಸುತ್ತೇನೆ" ಈ ಸರಳ ವಾಕ್ಯಗಳು ಅವೆಷ್ಟು ಉಚ್ಚ, ಉದಾತ್ತ ಹಾಗೂ ಉತ್ಸಾಹಪೂರಿತವಾಗಿವೆ!

"ಚಿತ್ತಾಕರ್ಷಕ ವೈಯಕ್ತಿಕತೆ, ಸದಾ ಆತ್ಮನಿಗ್ರಹ ಮತ್ತು ವಿಸ್ತೀರ್ಣ ನಡತೆ, ಪ್ರಶಾಂತ ಗಾಢಗೂ ಗಂಭೀರ ಮುಖ, ರಾಜ ಯೋಗ್ಯ ವರ್ತನೆ, ಮಧುರ ಮತ್ತು ವಿನಯ ಪರನುಡಿ, ಹಿರಿಯರಿಂತಹ ರೀತಿ ನೀತಿ, ವ್ಯಾಪಕ ಮನೋವೃತ್ತಿ, ಉದಾರ ಅಂತಃಕರಣ, ಗಾಢ ಸಂಸ್ಕೃತಿ, ವಿಚಾರ ಪರಭಾವನೆಗಳಿಂದ ಪಾಕಗೊಂಡಿವ ಮನಸ್ಸು, ನ್ಯಾಯ ಪ್ರಿಯತೆ, ಸಮದೃಷ್ಟಿಯ ಸಹನಾ ಶೀಲ ಬುದ್ಧಿ, ತಪ್ತೋನಿಷ್ಠ ಜೀವನ ಕ್ರಮ, ಪ್ರಾಣಿಗಳ ಮೇಲಿನ ವಿಶೇಷ ಪ್ರೇಮ, ಸಂಗೀತ ಮತ್ತು ಇತರ ಲಲಿತ ಕಲೆಗಳ ಅಭಿಮಾನ, ಪ್ರಜೆಗಳ ಕುರಿತು ನಿರಂತರವಾದ ಪ್ರೀತಿ, ಸಂಸ್ಥಾನದ ಭೌತಿಕ ಮತ್ತು ನೈತಿಕೋನ್ನತಿಯ ಚಿರಚಿಂತನಾ ಗುಣಗಳಿಂದ ಸರ್ವರನ್ನೂ ಪ್ರೀತಿಸಿ ಸರ್ವರ ಪ್ರೀತಿಗೂ ಪಾತ್ರರಾಗಿ, ಸಂತರಾಜರು ಮತ್ತು, ರಾಜ ಸಂತರೆನಿಸಿ ಸಾಧುಗಳ, ಋಷಿಗಳ ಮಹಾತ್ಮರ ಪವಿತ್ರ ದೇಶವಾದ ಆರ್ಯಾವರ್ತದಲ್ಲಿ ನಿಜವಾದ ರಾಜ ಋಷಿಯಾಗಿ ರಾಜ್ಯವಾಳಿ, ಬಾಳಿ ಬೆಳಗಿ, ತಮ್ಮ ನಶ್ವರ ಶರೀರವನ್ನು ಬಿಟ್ಟು ಉಜ್ವಲ ಕೀರ್ತಿಕಾಯವನ್ನು ಪ್ರವೇಶಿಸಿ ಬೆಳಗುತ್ತಿರುವರು" ಶ್ರೀ. ಎನ್. ಆರ್. ಅಯ್ಯಂಗಾರರೆಂಬವರು ಮಹಾರಾಜರನ್ನು ಬಣ್ಣಿಸಿದುದರಲ್ಲಿ ಅತಿಶಯೋಕ್ತಿಯೇನೂ ಇರುವುದಿಲ್ಲ.

ಪ್ರತಿಯೊಂದು ವಿಷಯದಲ್ಲಿಯೂ ಮೈಸೂರಮ್ಮನ ಮುಂದುವರಿದ ದೇಶೀಯ ಸಂಸ್ಥಾನವೇ ಹಿಂದೂದೇಶದಲ್ಲಿರಲಾರದು. ದೇಶದ ಕೈಗಾರಿಕಾಭಿವೃದ್ಧಿಗೂ, ಹಳ್ಳಿಗಳ ಸಂಘಟನೆ ಮತ್ತು ಪುನರುಜ್ಜೀವನಕ್ಕೂ, ಯಾಂತ್ರಿಕ ಉದ್ಯಮಗಳಿಗೂ ಗೃಹಕೈಗಾರಿಕೆಗಳಿಗೂ ಪಟ್ಟಣ ವ್ಯಾಪಾರಕ್ಕೂ ಹಳ್ಳಿಗಳ ಸೊಬಗಿಗೂ, ಏಕಪ್ರಕಾರವಾಗಿ ಮೈಸೂರು ಸಂಸ್ಥಾನವು ಗಮನಕೊಟ್ಟು ಆತಳಿತ ಮತ್ತು ಜೀವನದ ಅದೊಂದು ಬಗೆಯ ಅಪೇಕ್ಷಣೀಯ ಸಮನ್ವಯವನ್ನುಂಟುಮಾಡಲು ಮಹಾರಾಜರೂ ಸುದೈವದಿಂದ ಅವರಿಗೆ ಜತೆಗೂಡಿದ ಉತ್ತಮ ದಿವಾನರುಗಳೂ ಕಾರಣವಾಗಿರುತ್ತಾರೆ.

ಮಹಾರಾಜರು ಹಿಂದೂ ಧರ್ಮದ ಅಭಿಮಾನಿಯಿದ್ದು ಶ್ರದ್ಧಾಳುವಾಗಿದ್ದರೂ ಪರಧರ್ಮ ಸಹಿಷ್ಣುವಾಗಿ ಮುಸಲ್ಮಾನ ಕೈಸ್ತ ಮತಾನುಯಾಯಿಗಳನ್ನೆಲ್ಲಾ ಹಿಂದುಗಳಂತೆಯೇ ಕಾಣುತ್ತಿದ್ದರು. ಹೊರಗಣ ಆಚರಣೆ ಸಂಪ್ರದಾಯಗಳಲ್ಲಿ ಧರ್ಮಗಳೊಳಗೆ ಭಿನ್ನ ಭೇದ ಕಂಡುಬಂದರೂ ಒಳಗಣ ಮೂಲಭೂತ ತತ್ವಗಳಲ್ಲಿ ಅವು ಒಂದೇ ಇರುವವು. ಈ ಮೂಲ ಭೂತ ತತ್ವಗಳಿಗೇನೇ ಜನರು ಹೆಚ್ಚಿನ ಸ್ವಾಮುಖ್ಯತೆಯಿತ್ತು ಬಂಧುಭಾವದಿಂದ ನಡೆಯಬೇಕೆಂದೇ ಮಹಾರಾಜರ ಮನೋನಿರ್ಧಾರವಾಗಿತ್ತು. 1933ರಲ್ಲಿ ಮೈಸೂರಲ್ಲಿ ಸ್ಟೇಟ್ ಫಿಲೋಮಿನ ಜಾರ್ಜಿಯನ್ನ ಈರು ತೆರೆಯುವ ಸಂದರ್ಭದಲ್ಲಿ ಅದನ್ನವರು ವ್ಯಕ್ತಗೊಳಿಸಿದ್ದರು.

ರಾಜ್ಯಭಾರ ವಿಷಯದಲ್ಲಿ ಅವರು ನಿಜವಾಗಿಯೂ ಸೂತ್ರಬದ್ಧ ರಾಜರಿದ್ದರು. ಬ್ರಿಟಿಷ್ ಪ್ರಭುತ್ವದ ಮಾದರಿಯನ್ನವರು ಅನುಸರಿಸುತ್ತಿದ್ದರೆನ್ನಬಹುದು. ಕಾನೂನಾಗಿ ಅಧಿಕಾರವನ್ನೇನೂ ತೋರಿಸದೆ ಸರ್ವಾಧಿಕಾರಿಯಂತೆ ಪ್ರಜೆಗಳೆಲ್ಲರ ಮನ್ನಣೆಗೆ ಪಾತ್ರರಾಗಿದ್ದರು. ಒಮ್ಮೆ ತನಗೆ ಯೋಗ್ಯರೆಂದು ತೋರಿದವರನ್ನು ದಿವಾನರಾಗಿ ಆರಿಸಿ ವಿಶ್ವಾಸದಿಂದ ರಾಜ್ಯಭಾರದ ಜವಾಬ್ದಾರಿಯನ್ನವರಿಗೆ ಬಹುಮಟ್ಟಿಗೆ ಮೇಲೆ ಆಡಳಿತದ ವಿವರಗಳನ್ನು ಆಗಾಗ ಕೈಹಾಕಿ ಅವರಿಗೆ ಎಂಥಾ ತೊಂದರೆಯನ್ನುಂಟುಮಾಡುತ್ತಿದ್ದಿಲ್ಲ ಅವರೆ ಮಹಾರಾಜರ ವರ್ಚಸ್ಸನ್ನು ದಿವಾನರ ಮೇಲೆ ಸದಾ ಇದ್ದೇ ಇದ್ದಿತು. ಕಾಲಧರ್ಮಕ್ಕನುಗುಣವಾಗಿ ಮೈಸೂರಿಗೆ ಆಗಾಗ ರಾಜಕೀಯ ಸುಧಾರಣೆಯನ್ನೀಯಲು ಬಂದಿರುವರು. ಇಂದೀಗ ಹೊಸ ಸುಧಾರಣೆಗಳು ಜಾರಿಗೆ ಬರುವುದರಲ್ಲಿರುವಾಗ ಮಹಾರಾಜರು ದೈವವಶರಾದುದು ಕೋಚನೀಯವಿದೆ. ಇತ್ತಲಾಗಿ ಮೈಸೂರಿನ ಪ್ರಜೆಗಳು ತಮಗೆ ಜವಾಬ್ದಾರಿ ರಾಜ್ಯಭಾರವನ್ನೀಯಬೇಕೆಂದು ಚಳವಳಿ ಹೂಡಿ, ಸರಕಾರವು ಈ ಚಳವಳವನ್ನಣಗಿಸಲ್ಕೆತ್ನಿಸಿ ಹಲವು ನಿಷಾದಕರ ಘಟನೆಗಳು ನಡೆದಿರುವವಾದರೂ, ಪ್ರಜೆಗಳಿಗೆ ಮಹಾರಾಜರ ಕುರಿತಿದ್ದ ಆದರವು ಕಡಿಮೆಯಾಗಿರಲಿಲ್ಲವೆನ್ನಬಹುದಿಲ್ಲ. ಬೇಗನೆ ಪ್ರಜಾಜವಾಬ್ದಾರಿ ಪದೆಯಬೇಕೆಂಬ ವೈಸೂರಿನ ಜಾಗ್ರತ ಪ್ರಾಣಗೂ ಸಂಸ್ಕೃತ ಪ್ರಜೆಗಳ ಆತುರವನ್ನು ಈ ಚಳವಳವು ಸೂಚಿಸುತ್ತಿದೆಯೇ ಹೊರತು ಮೈಸೂರಿನ ರಾಜ್ಯಭಾರವು ಅಪ್ರಾಗತಿಕವಾಗಿ ಪ್ರಜಾಹಿತವಿಘಾತುಕವಿರುವುದೆಂದು ಅದರಿಂದ ಊಹಿಸುವುದು ಯುಕ್ತವಾಗಲಾರದು. ಮಹಾರಾಜರು ಹೆಚ್ಚೆಚ್ಚು ರಾಜಕೀಯ ಸುಧಾರಣೆಗಳನ್ನು ಪ್ರಜೆಗಳಿಗಿತ್ತುದರಿಂದಲೇ ಅವರಲ್ಲಿ ಸಂಪೂರ್ಣ ಪ್ರಜಾ ಜವಾಬ್ದಾರಿ ರಾಜ್ಯಭಾರ ಪಡೆಯಬೇಕೆಂಬ ಲವಲವಿಕೆಯುಂಟಾಗಿದೆಯೆನ್ನಬಹುದು. ತರುಣ ಮಹಾರಾಜರಾದ ಶ್ರೀ. ಜಯಚಾಮರಾಜೇಂದ್ರ ಒಡೆಯರು ಪ್ರಜೆಗಳ ಈ ಅಪೇಕ್ಷೆಯನ್ನು ಬೇಗನೆ ನೆರವೇರಿಸಿ ಮೈಸೂರಿನ ಹಿರಿಯರಿಗೆ ಅಂಟಿರುವ ಕಳಂಕವನ್ನು ತೊಡೆದು ಹಾಕುವರೆಂದು ಹಾರೈಸುತ್ತೇನೆ.

ಮೈಸೂರಿನ ಆಡಳಿತದಲ್ಲಿ ಮತ್ತು ಮಹಾರಾಜರಲ್ಲಿ ದೋಷವೇನೂ ಇರಲಿಲ್ಲೆಂದು ನಾವು ಹೇಳುವುದಲ್ಲ. ಆಡಳಿತದಲ್ಲಿ ಕ್ರಮ ಮತ್ತು ನೀತಿ ಇದ್ದಿತು. ಆದೆಂದೂ ನಿರಂಕುಶವಾಗಿರಲಿಲ್ಲ. ಇಂತಹ ಹಿಚ್ಚಿನ ದೇಶೀಯ ಸಂಸ್ಥಾನಗಳಲ್ಲಿ ನಡೆಯುವ ದುಂದುಗಾರಿಕೆ, ಅನಾಚಾರ ಮತ್ತು ಸ್ವೇಚ್ಛಾ ಪ್ರವರ್ತನೆಗೆ ಮೈಸೂರಲ್ಲಿ ಅಪ್ಪದವಿದ್ದಿರಲಿಲ್ಲ. ನಿಜವಾದ ಪ್ರಜಾಹಿತ ಮತ್ತು ಸಂಸ್ಥಾನದ ಸರ್ವಾಂಗವಾದ ಅಭಿವೃದ್ಧಿಯನ್ನು ಸಾಧಿಸಲು ಯಥಾರ್ಥವಾದ ಪ್ರಯತ್ನ ನಡೆದಿದ್ದಿತು. ಇತರ ದೇಶೀಯ ಸಂಸ್ಥಾನಗಳಿಗಿಂತ ಎಷ್ಟೋ ಮೇಲಿನ ಅಂತಸ್ತಿಗೆ ಮೈಸೂರಿನ ರಾಜ್ಯಭಾರವು ಮುಟ್ಟಿದ್ದಿತು. ದೀನ ದರಿದ್ರ ಜನತೆಯ ಸಾಮಾನ್ಯರ ನಿಜವಾದ ಹಿತಸಾಧಕ ರಾಜ್ಯಭಾರವು ಮೈಸೂರಿನದಾಗಿದ್ದಿಲ್ಲೆಂದು ಹೇಳುವುದಾದರೆ ಆ ದೋಷದಿಂದ ಲೋಕದ ಹೆಚ್ಚಿನ ರಾಷ್ಟ್ರಗಳ ರಾಜ್ಯಭಾರಗಳು ವಿಮುಕ್ತವಾಗಿರುವುದಿಲ್ಲ. ಇಂಗ್ಲೆಂಡಿನ ರಾಜ್ಯಭಾರವೂ ಧನಿಕ ಪಕ್ಷಪಾತಿಯಾದುದೆಂದು ಪ್ರೊ ಫೆಸರ್ ಹರಾಲ್ಡ್ ಲಾಸ್ಕಿಯವರು ಟೀಕಿಸಿರುವರು.

ವೈಯಕ್ತಿಕ ಸಂಬಂಧ, ಸಾಮಾಜಿಕ ಸಂಪರ್ಕ, ಮತ್ತು ಅತಿಥಿ ಸತ್ಕಾರದ ವಿಷಯದಲ್ಲಿ ಮೈಸೂರು ಹೆಸರುವಾಸಿಯಾಗುವುದಕ್ಕೂ ಮಹಾರಾಜರೂ ಅವರ ದಿವಾನರೂ ಕಾರಣ. ಯಾವ ತರದ ಸಂಕುಚಿತತೆಗೂ ಅವರಲ್ಲಿ ಅಪ್ಪದವಿರಲಿಲ್ಲ. ಸರಕಾರಿ ಅಧಿಕಾರಿಗಳಿಗೂ, ಸನ್ಮಾನ್ಯ ರಾಜಕೀಯ ಧುರೀ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ತೆಂಕಯೆಕ್ಕಾರು ಸ. ಕೋರ್ಟು

ವ್ಯಾಜ್ಯ ನಂಬ್ರ ೧೮೭೨

S. E. P. No. 558/1940.

ಪಿ. ಶ್ಯಾಮರಾಯ ವೈ, ರಾಮಕೃಷ್ಣಯ್ಯನವರ ಮಗ, ನಂಗಳೂರು ತಾಲೂಕು ಸಜ-ಗೋಡು ಗ್ರಾಮವಾಸಿ ಇವನ. ಅರ್ಜಿದಾರ—ವಾದಿ.

ಮತ್ತು

1. ಬಜಪೆ ಶೆಟ್ಟಿ, ಮುಂ ಕೊರಗ ಶೆಟ್ಟಿ ಅಳಿಯ,
2. ಸೀಲು. ಪೂಜಾರಿ, ಕಾಂತು ಪೂಜಾರಿ ಅಳಿಯ,

ಮಂಗಳೂರು ತಾಲೂಕು ಬಡಗಮೆಕ್ಕಾರು ಗ್ರಾಮವಾಸಿಗಳಿರುವರು.

ಕೌಂಟರ್ ಪಿಟಿಷನರುಗಳು—ಪ್ರತಿವಾದಿಗಳು.

ಸದ್ರಿ ರಿಜಿಸ್ಟಾಂದಂಟರಿಗೆ—

ವೇಲ್ಯುಣಿಸಿದ ವ್ಯಾಜ್ಯದಲ್ಲಿ ವಾದಿಯ ಗುಜಾಸ್ತೆ ಕೊಡೋಣವಾದ ದಿಕ್ಕಿಯ ಅಮಲ್‌ಜ್ಯಾರಿ ಬಗ್ಗೆ ಅರ್ಜಿದಾರನು ರೆಜಿಸ್ಟಾಂದಂಟರ ಮೇಲೆ ಕೈದು ವಾರಂಟು ಆದೇಶಿಸಿ ಅಮಲ್‌ಜ್ಯಾರಿ ಅರ್ಜಿದಾಖಲು ಮಾಡಿರುತ್ತಾನೆ. ಆದ್ದರಿಂದ ಸದ್ರಿ ಅಮಲ್‌ಜ್ಯಾರಿಯನ್ನು ಯಾಕೆ ನಡಿಸಕೊಡದು ಮತ್ತು ನಿಮ್ಮನ್ನು ಯಾಕೆ ಸಿವಿಲ್ ಜೈಲಿಗೆ ರವಾನಿಸಕೊಡದು ಎಂಬುವ ಕ್ಕೆ ಸಬಬು ಕಾಣ್ಬೆ ಉದಾತ್ತರಿಸುವ ಬಗ್ಗೆ ಇವೇ 1940ನೇ ಇಸವಿ ಆಗೋಸ್ತು ತಾ. 29ನೇ ಪೂರ್ವಾಹ್ನ 11 ಘಂಟೆಗೆ ನೀವು ಈ ಕೋರ್ಟು ಮುಂದೆ ಪಾಜರಾಗಿ ನಿಮ್ಮ ಉದಾಹರಣೆಯನ್ನು ದಾಖ್ಲು ಮಾಡತಕ್ಕದ್ದು. ತಪ್ಪಿದರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಿ ಅರ್ಜಿದಾರನು ಕೇಂದ ವಾದಂಡು ಹಾಕುಂ ಕೊಡೋಣವಾಗುವುದು ಎಂತ ಈ ಮೇಲಳಕ ತಿಳಿಸೋಣವಾಯಿತು.

(by order of Court)

P. Shrinivasa Rao,
Advocate for Petitioner.

ಮಂಗಳೂರು ತಾ. 5-8-1940.

ರಕಾರದ ಮೌನದ ಆಂತರ್ಯವೇನು? ★

ಅಮೆರಿಕವು ಕೂಡಲೆ ಡಿಸ್ಟ್ರೋಯರುಗಳನ್ನು ಇಂಗ್ಲೆಂಡಿಗೆ ಕೊಡಬೇಕು.

ಇದೇ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಕೂಡಾ ಲಂಡನ್ನಿನ ಕೆಲಮಂದಿ ಜಾಪಾನಿ ವ್ಯಾಪಾರಿಗಳನ್ನು ದೇಶರಕ್ಷಣಾ ಕಾನೂನಿನ ಪೇರಿಗೆ ದಸ್ತಗಿರಿ ಮಾಡಿರುವುದರಿಂದ ಪರಿಸ್ಥಿತಿಯು ಮತ್ತಷ್ಟು ತೀವ್ರಗೊಳ್ಳುವಂತಾಗಿದೆ. ಬರ್ಮಾ, ಮಲಾಯ ಹೋಂ ಕೊಂಗ್‌ಗಳಲ್ಲಿಯೂ ಕೆಲಮಂದಿ ಜಾಪಾನರು ಕೈದುಮಾಡಲ್ಪಟ್ಟಿರುತ್ತಾರೆ. ಪೂರ್ವ ಆಸ್ಯದಲ್ಲೆಲ್ಲಾ ತನ್ನ ಆಧಿಕಾರ ಸ್ಥಾಪಿಸಲು ಇದೇ ಸುಸಂದರ್ಭವೆಂದು ಜಾಪಾನೀಗ, ಜರ್ಮನಿ, ಇಟೆಲಿಗಳ ಒಳಗಿಂದೊಳಗಿನ ಪ್ರೋತ್ಸಾಹದಿಂದಲೇ ಮುಂದುವರಿಯುತ್ತಿದೆಯೆನ್ನಬಹುದು. ಇಂಡೋ ಚೈನಾ ಮತ್ತು ಡಚ್ ಈಸ್ಟ್ ಇಂಡೀಸನ್ನು ಅದು ತನ್ನ ಆಧೀನಪಡಿಸಿಕೊಳ್ಳಲೆಳಸುತ್ತಿದೆ. ಅಮೇರಿಕದಿಂದ ಹೊರಹೋಗುವ ಕಬ್ಬಿಣ ಮತ್ತು ಪೆಟ್ರೋಲಿನ ಮೇಲೆ ಪ್ರೆಸಿಡೆಂಟ್ ರೂಸವೆಲ್ಟರು ನಿರ್ಬಂಧಕ ಹಾಕಿರುವುದರಿಂದ ಜಾಪಾನಿಗೆ ಹೆಚ್ಚಿನ ಹಾನಿಯಾಗಿದೆ. ಆದುದರಿಂದ ಯುದ್ಧಕ್ಕೆ ಅವಶ್ಯವಾಗಿ ಬೇಕಾದ ಪೆಟ್ರೋಲನ್ನು ಅದು ಡಚ್ ಈಸ್ಟ್ ಇಂಡೀಸಿನಿಂದ ಪಡೆಯಲು ಯತ್ನಿಸದಿರಲಾರದು.

✤

ಚಂಡ ಸಿದ್ಧತೆ ನಡೆಯುತ್ತಿರುವುದೆಂದೂ ಸದ್ದಿಗಳು ಸುಳಿದಾಡಹತ್ತಿವೆ. ಈ ಧಾಳಿಯಲ್ಲಿ ಕೆಲವು ಗುಪ್ತ ರಕ್ಷಣೆಗಳನ್ನು ಹಿಟ್ಲರು ಉಪಯೋಗಿಸಲಿರುವಂತೆ. ಟಾಂಕಿ ಮತ್ತು ಸೈಬಿರಿಯನ್ನೊಯ್ಯುವ ದೊಡ್ಡ ವಿಮಾನಗಳು ತಯಾರಾಗಿವೆ. ಚಿಕ್ಕ ರಬ್ಬರ್ ದೋಣಿ ಮತ್ತು ನವೀನ ರೀತಿಯ ಸಣ್ಣ ಸಬ್‌ಮೆರಿನುಗಳು ಉಪಯೋಗಿಸಲ್ಪಡಲಿವೆ. ಇತ್ತೀಚೆಗೆ ಫ್ರಾನ್ಸಿನ ಕರಾವಳಿಯಲ್ಲಿ ನಾವಿಕರು ಜರ್ಮನ್ ನೌಕರು ಸಂಗ್ರಹಿಸಲ್ಪಟ್ಟಿದ್ದಾರೆ, ದೊಡ್ಡ ದೊಡ್ಡ ತೋಪುಗಳು ಸ್ಥಾಪಿಸಲ್ಪಡುತ್ತಿವೆ ಎಂದೆಲ್ಲಾ ನಾನಾ ವರ್ತಮಾನಗಳು ಪ್ರಕಟವಾಗುತ್ತಿವೆ. ಆದರೆ ಹಿಟ್ಲರು ಇಂಗ್ಲೆಂಡಿನ ಮೇಲೆ ಧಾಳಿ ನಡಿಸುವ ಸಂಭವವಿದೆಯೋ ಎಂಬುದಾಸಂದೇಹಕರ. ಮೆಗನೋ ಕೋಟಿಯನ್ನೊಡೆಯುವ ನಟನೆ ಮಾಡಿ, ಬೆಲ್‌ಜಿಯಮಿನ ಮೂಲಕ ಒನ್ಮೆಯೇ ಫ್ರಾನ್ಸಿನ ಮೇಲೇರಿ ಹೋದಂತೆ ಈಗಲೂ ನಟನೆ ನಡೆಸುತ್ತಿರುವನೆಂದು ಊಹಿಸುವಂತಾಗಿದೆ. ಇಂಗ್ಲೆಂಡಿಗೆ ಜಯಶೀಲವಾಗಿ ಧಾಳಿಯಿಡುವುದೇ ಅಸಾಧ್ಯ, ಒಂದುವೇಳೆ ಅದು ಸಾಧ್ಯವಾದರೂ ಧಾಳಿಯಿಟ್ಟವರು ಹಿಂದೆ ಬರುವಂತಿಲ್ಲ! ಬ್ರಿಟಿಷ್ ನೌಕಾ ಬಲವನ್ನು ಮುರಿಯಲು ಎಷ್ಟು ಮಾತ್ರಕ್ಕೂ ಜರ್ಮನರಿಗೆ ಸಾಧ್ಯವಿಲ್ಲ. ಇಂಗ್ಲೆಂಡನ್ನು ರಕ್ಷಿಸಲು ಬೇಕಷ್ಟು ಆಕಾರ ಪಡೆಯನ್ನೀಗ ಅದು ಸಂಗ್ರಹಿಸಿಕೊಂಡಿದೆ ಇಡೀ ಬ್ರಿಟಿಷ್ ಜನಾಂಗವೇ ಈಗ ಬಟ್ಲರನ್ನೆದುರಿಸಲು ಕಟಿಬದ್ಧವಾಗಿ ನಿಂತಿದೆ. ಇಂಗ್ಲೆಂಡಿನ ಮೇಲಿನ ಆಕಾಶವನ್ನೆಲ್ಲಾ ವಶಪಡಿಸಿಕೊಳ್ಳಲು ಸಾಧ್ಯವಾಗದೆ ಜರ್ಮನರಿಗೆ ಇಂಗ್ಲೆಂಡಿನ ಮೇಲೆ ಧಾಳಿ ಇವಲು ಸಾಧ್ಯವಿಲ್ಲ ಅಂತಹ ವಿಮಾನ ರಕ್ಷಿಯು ಜರ್ಮನಿಗೆ ಈಗ ಇರುವಂತಿಲ್ಲ! ಡಂಕರ್ಕಿನ ಪುಕರಣವು ಜರ್ಮನ್ ವಿಮಾನ ಪಡೆಯು ಮಬಾಲತೆಯನ್ನು ಸಿದ್ಧಗೊಳಿಸಿರುವುದು. ಜರ್ಮನ್ ವಿಮಾನ ಪಡೆಯು ಎಷ್ಟೊಂದು ಪ್ರಯತ್ನಿಸಿದರೂ ಬ್ರಿಟಿಷ್ ವಿಮಾನಗಳ ರಕ್ಷಣೆಯಿಂದ ನೂರಾರು ಬ್ರಿಟಿಷ್ ಹಡಗುಗಳು ಸಾವಿರಾರು ಮಂದಿ ಸೈನಿಕರನ್ನು ಇಂಗ್ಲೆಂಡಿಗೊಯ್ದಿರುವವು.

ಈ ದುರ್ಬಲತೆಯನ್ನು ತಿಳಿದುಕೊಂಡೇ ಹಿಟ್ಲರು ಇಂಗ್ಲೆಂಡಿನ ಮೇಲಿನ ಧಾಳಿಯನ್ನು ಇನ್ನೊಂದು ಮುಂದುವರಿಸಲು ಕಾರಣ. ಅವರು ಇಂಗ್ಲೆಂಡಿನ ಮೇಲೆ ಧಾಳಿ ನಡಿಸುವ ಆಲೋಚನೆಯನ್ನೇ ಬಿಟ್ಟು ಬ್ರಿಟಿಸಿನ ರಕ್ಷಣಾಡಿಗಳನ್ನು ಕಡಿಯುವ ಪ್ರಯತ್ನವನ್ನು ಹಿಟ್ಲರ್ ಮಲಸಲೋಸಿಗಳು ಮಾಡುವಂತೆ ತೋರುತ್ತದೆ. ಸ್ಪೈನು ಮತ್ತು ಜಾಪಾನುಗಳು ಅವರಿಗೆ ಸಹಾಯಕವಾಗಿ ನಡೆಯುವಂತಿವೆ. ಸ್ಪೈನಿನ ಸಹಾಯದಿಂದ ಜಿಬ್ರಾಲ್ಟರನ್ನು ಗೆದ್ದು ಆಫ್ರಿಕದ ಮೊರೊಕ್ಕೋ, ಲಿಬಿಯಾ ಅಲ್‌ಜೀರಿಯದ ಮಾರ್ಗವಾಗಿ ಏಗುಪ್ತದ ಮಾರ್ಗವಾಗಿ ಮೇಲೇರಿ ಹೋಗಿ ಆಫ್ರಿಕದ ವಸಾಹತುಗಳನ್ನು ಸ್ಪೇಜ್ ಕಾಲುವೆಯನ್ನು ವಶಪಡಿಸಿಕೊಳ್ಳಲೆತ್ನಿಸುವ ಪತ್ತು ಯೆಗೊಸ್ಲಾವಿಯ ಗ್ರೀಸ್ ಮತ್ತು ಟರ್ಕಿಗಳನ್ನು ಗೆದ್ದು ಪೀರಿಯ ಇರಾನ್ ಇರೇಬಿಯಗಳ ಮೂಲಕ ಮುಂದೊತ್ತುವ ಸಂಭವ ತೋರುತ್ತದೆ. ಹೀಗೆ ಜಿಬ್ರಾಲ್ಟರ್ ಮತ್ತು ಸ್ವೇಜ್ ಕಾಲುವೆಗಳನ್ನು ಜರ್ಮನಿ ಇಟೆಲಿಗಳು ಗೆಲ್ಲುವಾಗ, ಇತ್ತ ಜಾಪಾನು ಮುಂದೊತ್ತಿ ಸಿಂಗಪುರವನ್ನು ವಶಪಡಿಸಿಕೊಳ್ಳಬಹುದು. ಈ ಹೆಜ್ಜೆಕೆಯನ್ನು ಜರ್ಮನಿ, ಇಟೆಲಿ, ಸ್ಪೈನು ಮತ್ತು ಜಪಾನುಗಳು ಮಾಡುತ್ತಿರುವವೆಂದು ಇತ್ತಲಾಗಿನ ವಿದ್ಯಮಾನಗಳಿಂದ ಊಹಿಸಬಹುದು. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯವೆಂದು ಹೇಳಬರುವುದಿಲ್ಲ. ಬ್ರಿಟನ್ನು ಇದನ್ನು ತಡೆಗಟ್ಟಲು ಬೇಕಾದ ಸಿದ್ಧತೆಯನ್ನು ನೋವಲೇ ಮಾಡಿದೆ.

ಅಮೇರಿಕವು ಕೂಡಲೆ ಇಂಗ್ಲೆಂಡಿಗೆ ನೆರವಾಗಬೇಕು.

ನಾಳೆಯೆಂದರೆ ಬಹಳ ವಿಳಂಬವಾದೀತು. ಇಂದೇ ಅಮೇರಿಕವು ಬ್ರಿಟನಿಗೆ ಸಹಾಯಮಾಡಬೇಕು. ಹಿಂದಿನ 50ಡಿಸ್ಟ್ರೋಯರುಗಳನ್ನಾದರೂ ಅಮೇರಿಕವು ಇಂಗ್ಲೆಂಡಿಗೀಗ ಕೊಡಬೇಕು. ಹಾಗೆ ಮಾಡಿದರೆ ಮಾತ್ರ ಅಮೇರಿಕವೂ ಯುದ್ಧಕ್ಕೆ ಳಗಾಗದೇಶೇ ತನ್ನ ಬಳಿಗೆ ಬರುವ ಯುದ್ಧವನ್ನು ಪಡೆಗಟ್ಟಬಹುದು. ಅಮೇರಿಕವೂ ಕೂಡಲೆ ಡಿಸ್ಟ್ರೋಯರುಗಳನ್ನೆತ್ತು ಇಂಗ್ಲೆಂಡಿಗೆ ಸಹಾಯಮಾಡಿದರೆ ಇನ್ನೊಂದು ಯುದ್ಧದಲ್ಲಿ ಅದು ಹೋರಾಡಬೇಕಾಗುವ ಪರಿಸ್ಥಿತಿಯನ್ನದು ನಿವಾರಿಸಬಹುದು. ಅಮೇರಿಕದ ಹಿತವೆಂದಲೇ ಜದಿಗ ಇಂಗ್ಲೆಂಡಿನ ಸಹಾಯಕ್ಕೆ ಹೋಗಬೇಕು. ಇಲ್ಲವಾದರೆ ಆದಕ್ಕೆ ಮುಂದೆ ಆಪಾಯ ತಪ್ಪಲಾರದೆಂದು ಜನರಲ್ ಪರ್ಷಿಂಗ್ ಎಂಬವರು ರೇಡಿಯೋ ಮೂಲಕ ಭಾಷಣವಿತ್ತು ಎಚ್ಚರಿಸಿರುವರು. ಅನೇಕರಿಂದ ಪತ್ರಿಕೆಗಳು ಜನರಲ್ ಪರ್ಷಿಂಗ್ ಭಾಷಣವನ್ನು ಸಂಪೂರ್ಣವಾಗಿ ಸಮರ್ಥಿಸಿರುವವು.

ಬ್ರಿಟಿಷ್ ಸರಕಾರದ ಮೌನದ ಆಂತರ್ಯವೇನು?

ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯದ ವಿಷಯದಲ್ಲಿ ನೈಸರ್ಗಿಕ, ಇಂಡಿಯಾ ಸೆಕ್ರೆಟರಿಗಳಾಗಲಿ ಈವರೆಗೆ ಯಾವ ಅಭಿಪ್ರಾಯವನ್ನು ಕೊಟ್ಟಿರುವುದಿಲ್ಲ. ಆ ಕುರಿತು ಇಂಡಿಯ ಮತ್ತು ಬ್ರಿಟಿಷ್ ಸರಕಾರಗಳು ಪ್ರಯತ್ನ ಪೂರ್ವಕವಾಗಿ ಮೌನ ಧಾರಣೆ ಮಾಡಿರುವಂತಿದೆ. ಪೈಸರಾಯರು ಬೆಟ್ಸರ್ ಸಾವರ್‌ಕರ್ ಮತ್ತು ಮಿ. ಜಿನ್ನಾರವರನ್ನು ವ್ಯವಸಾಮಾಜಿಕರು ಕರೆದಿರುವರು. ಆದರೆ ಕಾಂಗ್ರೆಸ್ ಪ್ರೆಸಿಡೆಂಟರನ್ನಾಗಲಿ ಗಾಂಧಿಯವರನ್ನಾಗಲಿ ಕರೆದಿರುವುದಿಲ್ಲ. ಇದರಿಂದ ಕಾಂಗ್ರೆಸಿನ ಕೇಳಿಕೆಯನ್ನು ಸರಕಾರವು ಮನ್ನಿಸುವ ಸಂಭವ ಕೀರಿಯುದಿಲ್ಲೆಂದು ಊಹಿಸಬಹುದಾಗಿದೆ. ಶ್ರೀ ರಾಜಗೋಪಾಲಾಚಾರ್ಯರು, ಬ್ರಿಟಿಷ್ ಮುತ್ಸದ್ದಿಗಳಲ್ಲಿ ವಿವೇಕೋದಯವಾಗುವಂತೆ ಬಳಕವಾಗಿ ಪ್ರಯತ್ನಿಸುತ್ತಿರುವರು. ಸರಕಾರವು ಕಾಂಗ್ರೆಸಿನೊಂದಿಗೆ ರಾಜಿಮಾಡುವುದರ ಮೇಲೆ ಅವರ ಮತ್ತು ಸರ್ದಾರ್ ವಲ್ಲಭಾಯಿಯವರ ಇಂದಿನ ಮುಂದಾಳುತ್ವವು ಹೊಂದಿಕೊಂಡಿರುವುದು. ಸರಕಾರನ್ನು ಕಾಂಗ್ರೆಸನ್ನು ಲಕ್ಷ್ಯಸದೆ ತನ್ನ ಹಾದಿ ಹಿಡಿದೇ ಮುಂದುವರಿದರೆ ಪಂಡಿತ ಜವಾಹರಲಾಲರೇ ಮೊದಲಾದ ತೀವ್ರ ಗಾಮಿಗಳ ನಾಯಕತ್ವವನ್ನು ಕಾಂಗ್ರೆಸು ಸ್ವೀಕರಿಸಿ ಮುನ್ನಡೆಯಬೇಕಾಗುವುದು. ಕಾಂಗ್ರೆಸು ಕಾಯದೆ ಭಂಗವನ್ನೇನೂ ಹೂಡದೆ ಅನಿಶ್ಚಿತ ಕಾಲದ ವರೆಗೆ ಸುಮ್ಮನಿರುವುದೆಂದು ಬ್ರಿಟಿಷ್ ಸರಕಾರವು ಭಾವಿಸುವುದು ತಪ್ಪು. ಪರಿಸ್ಥಿತಿಯು ಕೈ ಮೀರಿ ಹೋದರೆ ಅದು ಹೋರಾಟವನ್ನು ಆರಂಭಿಸಲೇ ಬೇಕಾಗುವುದೆಂದು ಗಾಂಧಿಯವರು ಸರಕಾರಕ್ಕೆ ಎಚ್ಚರಿಕೆಯಿತ್ತಿರುವರು. ಕಾಂಗ್ರೆಸು ಸತ್ಯಾಗ್ರಹವನ್ನಾರಂಭಿಸಿದೆಂದರೆ ಗಾಂಧಿಜಿಯವರು ಅದರಲ್ಲಿ ಭಾಗವಹಿಸದಿರಲಾರರು. ಯಾಕಂದರೆ ಸ್ವಾತಂತ್ರ್ಯ ಸಾಧನೆ ಹೋರಾಟದ ವಿಷಯದಲ್ಲಿ ಅವರಿಗೂ ಇತರ ಕಾಂಗ್ರೆಸ್ ನುಖಂಡರಿಗೂ ಮತಭೇದವಿರುವುದಿಲ್ಲ. ಇಂತಹ ಗಂಡಾಂತರವನ್ನು ತಿರಿಸಲು ಬ್ರಿಟಿಷ್ ಸರಕಾರವು ಸಿದ್ಧವಿರುವುದೇ ಎಂಬುದೀಗ ಪ್ರಶ್ನೆ.

ಇದು ಯುದ್ಧದ ಮುಂಜಿಸ ಸ್ವರೂಪದ ಮೇಲೆ ಕೊಂದಿಕೊಂಡಿದೆ. ಮಧ್ಯ ಪೂರ್ವ ಮತ್ತು ಪೂರ್ವ ಆಸ್ಯಾದದ್ದಿ ಪ್ರಬಲ ಯುದ್ಧ ಆರಂಭವಾದರೆ ಹಿಂದುದೇಶದಲ್ಲಿ ಆಂದೋಲನವೇಳಲು ಸರಕಾರವು ಬಿಡುವ ಹಾಗಿಲ್ಲ. ಯಾವ ರೀತಿಯಲ್ಲಾದರೂ ಹಿಂದೀಯರನ್ನು ಅದು ತೃಪ್ತಿಪಡಿಸಲೆತ್ನಿಸುವುದು ಆ ಕುರಿತೀಗ ಒಳಗಂದೊಳಗೆ ಆಲೋಚಿಸುತ್ತಿರುವುದೆಂದು ಊಹಿಸಿದರೂ ತಪ್ಪಾಗಲಾರದು. ವೈಸರಾಯರು ಪ್ರಾತ್ಯೇಗಳನ್ನು ಸಂಪರ್ಕಿಸಿ ಗವರ್ನರುಗಳ ಅಭಿಪ್ರಾಯವನ್ನು ಪಡೆಯುತ್ತಿರಬಹುದು. ಕಾಂಗ್ರೆಸು ಮುಸ್ಲಿಂ ಲೀಗ್ ಮತ್ತು ಹಿಂದುಮಹಾ ಸಭೆಗಳನ್ನೊಂದುಗೂಡಿಸಿ ಹಿಂದೀ ಸ್ವಾತಂತ್ರ್ಯ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಪೂರ್ವ ತಯಾರಿ ನಡೆಯುತ್ತಿರಬಹುದು. ಶ್ರೀ. ಸಾವರ್ಕರ್ ಮತ್ತು ಮಿ. ಜಿನ್ನರನ್ನು ಕಂಡ ನೇಲೆ ವೈಸರಾಯರು ಕಾಂಗ್ರೆಸ್ ಮುಖಂಡರೊಡನೆ ಮಾತುಕತೆ ನಡೆಸಬಹುದು. ಮಿ. ಜಿನ್ನರ ನಾಯಕತ್ವದ ವಿಷಯದಲ್ಲಿಯೂ ಈಗ ಅತ್ಯಲ್ಪಸ್ವಿಯು ದಿನೇ ದಿನೇ ಹೆಚ್ಚುತ್ತಿರುವುದರಿಂದ ಅವರಲ್ಲಿ ವಿವೇಕೋದಯವಾಗಬಹುದು. ಅವರು ಕೂಡಾ ಇತ್ಥಲಾಗಿ ಮೌನವಹಿಸಿರುವರು. ಆದರೆ, ಆಗೋಸ್ತು ತಿಂಗಳ ಅಂತ್ಯದೊಳಗೆ ಸರಕಾರವು ಏನನ್ನಾದರೂ ಸಿದ್ಧಪಡಿದ್ದಿದೆ ಪರಿಸ್ಥಿತಿಯು ಕೈಮೀರಿ ಹೋಗಿ ಕಾಂಗ್ರೆಸು ಸತ್ಯಾಗ್ರಹ ಹೂಡಲು ಮುಂದೊತ್ತುವ ಗಂಡಾಂತರವುಂಟಾಗದೆ ಇರದು ಎಂದು ತೋರುತ್ತದೆ.

ಬಂಗಾಳದಲ್ಲಿ ಟ್ರೈನ್ ಅವಘಡ

ಇದೇ ತಾ. 9ನೇ ಬೆಳಿಗ್ಗೆ ಡಕ್ಕಾ ಕಲ್ಕತ್ತಾ ಮೈಲ್ ಟ್ರೈನು ಚೊಪಂಗ ಮತ್ತು ಜೈರಾಮಪುರ ರೈಲ್ವೇ ಸ್ಟೇಷನುಗಳ ನಡುವೆ ಕಂಬರಸ್ಟಿಪಿದ್ದು 52ಮಂದಿ ಕೊಲ್ಲಲ್ಪಟ್ಟು 83 ಮಂದಿ ಗಾಯಗೊಂಡಿರುವರು.

ಂದಾದಾರರಲ್ಲಿ ವಿನಂತಿ.

ತ್ರ ತಿಂಗಳಾಂತ್ಯಕ್ಕೆ 'ನವಯುಗ'ದ **19ನೇ ಡು ಸಪ್ಟಂಬರ್ ನೊದಲ್ಗೊಂಡು 20ನೇ ವರ್ಷವು**. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ತಮ್ಮ ಮುಂದಿನ ವರ್ಷದ ಚಂದಾಹಣವನ್ನು **ೀ ಕಳುಹಿಸುವಂತೆ ಈ ಮೂಲಕ ಅಪೇಕ್ಷಿಸೋ**

ವರ್ಷದ ಚಂದಾ ಹಣವನ್ನು ಈ ವರೆಗೂ ಕಳಿಸಿ ಪಾದವಾಗುತ್ತದೆ. ಅಂಥವರು ತ್ವರ್ಯದಲ್ಲಿಯೇ ಚಂದಾ ಹಣವನ್ನೂ ಪಾವತಿಮಾಡುವಂತೆ ಕೇಳಿ

ಿ ನೋಟೀಸು ಬರುವುದೆಂದು ಯಾರೂ ಕಾಯದೆ ನ್ನು ಸಕಾಲದಲ್ಲಿ ಕಳುಹಿಸುವಂತೆ ಪ್ರತ್ಯೇಕ ವಿನಂತಿ

—ಮೆನೇಜರ್.

ಸೂ ಉಚ್ಚ
ಂತೆ ನಡೆಯು
ರವು ಮೈಸೂ
ವರ್ಗಕ್ಕೂ,
ಲಾರದ ಅತಿ
ುದರಲ್ಲಿ ಸಂ
ಜರ ಆತ್ಮವು
ರಿನ ಅದೃಷ್ಟ
ದು ಪಾರ್ಲೆಸು
ತೆಯರ ಖಾನ
ತಾಮರಂಜೋಂ
ತರ ಹೆಜ್ಜೆಯ
ವರ್ಷಗಳಿಂದ
ವಿಚಕ್ಷಣಾಂಶ
ಕೆಯಿಂದ ಮೈ
ನ್ನು ಪ್ರಗತಿ
, ಸಂಸ್ಥಾನದ
ಬೆಳಗಿಸಲೆಂದು

ವೈಗತವು ನೈ
ಗಾಂಧಿಜಿಯ
ಾನ ಮನ್ನಣೆ
ಗಳಾಗಿದ್ದು.
ಮೂ, ರಾಜ
ಮಾಜಿಕವಾಗಿ

ಮಂಚೂರಿಯ, ಚೈನಾ, ಇಂಡೋ ಚೈನಾ ಡಚ್ ಈಸ್ಟ್ ಇಂಡೀಸ್, ಮತ್ತು ದಕ್ಷಿಣ ಸಮುದ್ರ ದ್ವೀಪಗಳ ಮೇಲೆಲ್ಲಾ ತನ್ನ ಆಧಿಕಾರ ಸ್ಥಾಪಿಸಿ ನವೀನ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂಬುದೇ ಈಗಿನ ಪ್ರಧಾನ ಮಂತ್ರಿಗಳಾದ ಪ್ರಿನ್ಸ್ ಕೊನೊಯೆ ವರ ಹೊಸ ಘೋರಣೆಯಾಗಿದೆ. ಪರಿಸ್ಥಿತಿಯು ಇದೇ ರೀತಿ ಮುಂದವರಿದ ಪಕ್ಷದಲ್ಲಿ ಕೆಲವೇ ವಾರಗಳಲ್ಲಿ ಇಂಗ್ಲೆಂಡು ಅಮೇರಿಕ ಮತ್ತು ಜಾಪಾನುಗಳೊಳಗೆ ಘರ್ಷಣೆವುಂಟಾಗುವುದು ನಿಶ್ಚಯವೆಂಬಂತೆ ತೋರುತ್ತದೆ.

ಹಿಟ್ಲರು ಮುಂಬೇನು ಮಾಡುವರು?

ಎಂಬುದೀಗ ಎಲ್ಲೆಕ್ಕೆಯೂ ಚರ್ಚಾಸ್ಪದವಾಗಿರುವ ಪ್ರಶ್ನೆ. ಈ ಕುರಿತು ನಾನಾ ಸುದ್ದಿಗಳು ಪ್ರಕಟವಾಗುತ್ತಿವೆ. ಹಿಟ್ಲರು ಆಗೋಸ್ತು ತಾ. 15ರೊಳಗೆ ಇಂಗ್ಲೆಂಡಿನ ಮೇಲೆ ನೆಲ, ಜಲ ಮತ್ತು ಆಕಾಶ ಮೂಲಕ ಧಾಳಿ ನಡಿಸುವರೆಂದೂ, ಅವಕ್ಕೆ ಪು

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಮಂಗಳೂರು, ತಾ. 4 8-'40.

ನೃತ್ಯಕೆಲಾ ಪ್ರದರ್ಶನ—ಕಳೆದ ತಾ. 30 ಮತ್ತು 31ರಲ್ಲಿ ಭಾರತದ ಸುಪ್ರಸಿದ್ಧ ನಟುವಾದ ಶ್ರೀಮತಿ ಮೇನಕಾ ಇವರೂ, ಶ್ರೀ. ರಾಮನಾರಾಯಣರೂ ಮತ್ತು ಅವರ ಕಚೇರಿಯವರೂ ತಮ್ಮ ಅದ್ಭುತ ನೃತ್ಯಕಲೆಯನ್ನು ಮಂಗಳೂರಲ್ಲಿ ಪ್ರದರ್ಶಿಸಿದರು.

ಆಪಾದಿತರಿಗೆ ಜನ್ಮ ಟಾಪಿನ ಶಿಕ್ಷೆ—ಕೊಳ್ಳಿಗೆ ಗ್ರಾಮದ ಸುಬ್ಬ ವಕ್ಕೆಯಾಣಿ ಮತ್ತು ಅವನ ಮಗ ಕೆ.ಂಡಾಳ್ ಇವರುಗಳನ್ನು ಜಿಲ್ಲಾ ಜಸ್ಟರಾದ ಶ್ರೀ. ಟಿ. ಎಸ್. ರಾಮಚಂದ್ರನಾಯರವರು, ಜನ್ಮ ಟಾಪಿನ ಶಿಕ್ಷೆ ವಿಧಿಸಿ ತೀರ್ಪುಕೊಟ್ಟಿದ್ದರು, ಕಳೆದ ತಾ. 31ರಲ್ಲಿ. ಆಪಾದಿತರ ವಕೀಲ ಅರ್ಜಿಯೊಂದನ್ನು ಹಾಕಿದ್ದು, ಆಪಾದಿತರು ತಾ. 15-3-40ರಲ್ಲಿ ದೇರಳ ಎಂಬವನನ್ನು ದೊಣ್ಣೆಯಿಂದ ಹೊಡೆದು ಕೊಂದರೆಂದೂ, ಹೀಗೆ ಸೂಡಿಯಲ್ಲಾ ದೇರಪ್ಪನ ಇಸ್ಟ ಮಾಗಳನ್ನು ಕೊಂಡಾಪ್ಪನಾಗಿ ವಿವಾಹಮಾಡಿಕೊಂಡಲು ಇದ್ದದೇ ಹೋದುದೇ ಕಾರಣವೆಂದೂ ತಿಳಿಸಲ್ಪಟ್ಟಿತ್ತು. ಆರೋಪಿತರು ತಾವು ಅಂತಹ ತಪ್ಪನ್ನು ಮಾಡಿಲ್ಲವಾಗಿಸಾಬಿತಿ ಸಿದರು. ಎಲ್ಲಾ ಸಾಕ್ಷಿದಾರರೂ ಆಪಾದಿತರು ತಪ್ಪಿತಸ್ಥರಲ್ಲವೆಂದಭಿಪ್ರಾಯ ಪಟ್ಟಿದ್ದರೂ, ಜಡ್ಜರು ಆ ಅಭಿಪ್ರಾಯಗಳನ್ನು ಒಪ್ಪದೆ ನೀಡಿದ ಪ್ರಕಾರ ಶಿಕ್ಷೆ ವಿಧಿಸಿದರು. ಆಪಾದಿತರ ಕಡೆಯಿಂದ ಕೋರ್ಟಿನಿಂದ ನೇಮಕಗೊಂಡಿದ್ದ ಶ್ರೀ. ಎಲ್. ಸಿ. ಸ್ಯಾಮ್ಸರು ವಕಾಲತು ವಹಿಸಿದ್ದರು.

ಡಿನಂಗತ ನೆಲ್ಲಿಕ್ಕಾ ಸುಂದರಯ್ಯನವರು—ಪಂಗಳೂರಿನ ಶ್ರೀಮಂತ ಬ್ರಾಹ್ಮಣ ಮನೆತನಕ್ಕೆ ಸೇರಿದವರೂ, ಮಂಗಳೂರು ನಗರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ. ನೆಲ್ಲಿಕ್ಕಾ ವೆಂಕಟರಾಯರ ಧರ್ಮಪತ್ನಿಯವರೂ ಆದ ಶ್ರೀಮತಿ ನೆಲ್ಲಿಕ್ಕಾ ಸುಂದರಯ್ಯನವರು ತಮ್ಮ 54ನೇ ವಯಸ್ಸಿನಲ್ಲಿ ಕಳೆದ ತಾ. 27 ಆಶಾಸ್ಟ್ರ ದೈವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಶ್ರೀಮತಿಯವರು ಮಂಗಳೂರಿನ ಮಹಿಳೆಯರ ಪರೋಪಭಿವೃದ್ಧಿಗಾಗಿ ಸದಾ ಪ್ರಯತ್ನಿಸುತ್ತಿದ್ದರು, ಸ್ಥಳೀಯ ಲೇಡೀಸ್ ಕ್ಲಬ್ಬಿನ ಅಧ್ಯಕ್ಷೆಯರಾಗಿಯೂ ಮಹಿಳಾ ಸಭೆಯ ಸದಸ್ಯೆಯರಾಗಿಯೂ ಇದ್ದರು. ಅವರು ಸಾಹಿತ್ಯ ಸೇವಾಸಕ್ತರಾಗಿದ್ದರು. ಅವರ ನಿಧನದಿಂದ ಅವರ ಬಂಧುಗಳಿಗೆಲ್ಲಾ ದುಃಖದಲ್ಲಿ ನಮ್ಮ ಸಹಸಂತಾಪವನ್ನು ವ್ಯಕ್ತಪಡಿಸುತ್ತೇವೆ.

ವೈ. ಎಮ್. ಎಸ್. ಎ.—ಶಾರೀಕು 4-8-'40ರಲ್ಲಿ ಸಮಿತಿಯ ಕಾರ್ಯಸಭೆಯು ಅರಂಭ ಸಭೆಯು ದಾ. ಕೆ. ಗಿರಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಎಸ್. ಮುಕ್ಕೋದಿರಾವ್, ಬಿ. ಎ, ಎಲ್. ಟಿ. ಇವರು "ಧರ್ಮಸಾಂಘತ್ಯವು ಮಾನವ ಜೀವಿತ ಧ್ಯೇಯ ಪೂರ" ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಶ್ರೀ. ಎಸ್. ಎಸ್. ವೆಟ್ಟರು ಅಧ್ಯಕ್ಷರ ಭಾಷಣಕರ್ತರ ಪರಿಚಯ, ಸಮಿತಿಯ ಉದ್ದೇಶ ಕಾರ್ಯವೈಖರಿಗಳ ಕುರಿತು ಚರ್ಚಿಸಿದರು. ಕಾರ್ಯದರ್ಶಿಯವರು ಕಳೆದ ಸಭೆಯ ನಡವಳಿಕೆಯನ್ನು ಓದಿ ಒಪ್ಪಿಸಿ, ಸಮಿತಿಯ ಸಿಬ್ಬಂದಿಯನ್ನು ಆಯ್ಕೆಮಾಡಿದರು. ಕೊನೆಗೆ ಅಲ್ಪ ಫಲಾಹಾರ ಮತ್ತು ಕಾರ್ಯದರ್ಶಿಯವರ ಧನ್ಯವಾದದೊಂದಿಗೆ ಸಭಾಂತ್ಯವಾಯಿತು.

ಉಡುಪಿ

ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್—ಇದರ ಜನರಲ್ ಬಿಗಡಿ ಮೀಟಿಂಗು ತಾ. 18-7-40ರಲ್ಲಿ ಜರಗಿ, ಲೆಕ್ಕ ಪರಿಶೋಧನೆ, ಆಡಳಿತ ಕಮಿಟಿಯ ರಚನೆಗಾಗಿ ಮುಖ್ಯ. ಆನಂತರ ತಾ. 31-7-40ರಲ್ಲಿ ಕಾರ್ಯಕಾರಿ ಮಂಡಳಿಯ ಸಭೆ ಇರಿ ರಾಜ್ಯಶ್ರೀ ಸುಂದರರಾಯ ಪೈಗಳು ಅಧ್ಯಕ್ಷರಾಗಿಯೂ, ಸಿ. ಬಿ. ಸಿ. ರೇಗೋದವರು ಉಪಾಧ್ಯಕ್ಷರಾಗಿಯೂ ದಾಕ್ಟರ್ ಕೆ. ಎಲ್. ಮಾಳರವರು ಖಜಾಂಚಿಗಳಾಗಿಯೂ, ಜಾಸ್ಟರ್ ಕೆ. ಆರ್. ನಾಯಕ್ ಮತ್ತು ಶ್ರೀ ಎಂ. ವಾಮನ ಭಟ್ಟರು ಜತೆ ಕಾರ್ಯದರ್ಶಿಗಳಾಗಿಯೂ ಡಿ. ನಾರಾಯಣಪ್ಪಯ್ಯನವರು ತಿಳಿಸುಬರಿತ್ತಿದೆ.

ತಿಲಕ ದಿನಾಚರಣೆ—ತಾಲೂಕು ಪರಿಷತ್ ಸೇವಕ ಸಂಘದ ಆಶ್ರಯದಲ್ಲಿ ಹಾಗೂ ವಿದ್ಯಾರ್ಥಿ ಭವನದಲ್ಲಿ ತಿಲಕ ದಿನಾಚರಣೆಯು ಶ್ರೀ ಬಿ. ಎ. ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ತಾ 1 ಸಂಜೆ ಆಚರಿಸಲ್ಪಟ್ಟಿತು.

ಕೋಪರೇಟಿವ್ ಸ್ಟೋರ್ಸ್—ಕೋಪರೇಟಿವ್ ಸ್ಟೋರ್ಸ್ ಸ್ಥಾಪನೆಯ ಬಗ್ಗೆ ಇದೇ ತಾ. 7ರಲ್ಲಿ ತಾಲೂಕು ಕಚೇರಿಯಲ್ಲಿ ಸಂಜೆ ಏಮು ತಾಸಿಗೆ ಸಭೆ ಜರಗಲಿದೆ.

ಲಕ್ಷ್ಮೀವೆಂಕಟೇಶ ದೇವಸ್ಥಾನ, ಪುತ್ತೂರು.

ಪ್ರಕಟಣೆ

ದ. ಕ. ಜಿಲ್ಲಾ ಉಡ್ಡಿ ತಾಲೂಕು ಪುತ್ತೂರು ಗ್ರಾಮದಲ್ಲಿರುವ ಬ್ರಹ್ಮಶ್ರೀ ಶಾಂತಿಯವರ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನಕ್ಕೆ ಸಂಬಂಧಪಟ್ಟ ವರು ತಾ 1-8-40ನೇ ಗುರುವಾರ ಏಸ್ವ ವ ಧ್ಯಪ್ಪ 3 ಗಂಟೆ ಸಮಯಕ್ಕೆ ಸರಿಯಾಗಿ ದೇವಸ್ಥಾನದಲ್ಲಿ ಸಭೆಸೇರಿ ಮಾಡಿದ ಪ್ರಸ್ತಾವನೆಗಳು:

1. ಈ ಕಛೇರಿ ಶ್ರೀ ಜನಾರ್ದನ ಶೆಟ್ಟಿ ಬಿ. ಎ. ರವರನ್ನು ಅಧ್ಯಕ್ಷರನ್ನಾಗಿ ನವರ್ಷಾವಧಿಗೆ ನೇಮಿಸಲಾಯಿತು. 2. (೧) ಶ್ರೀ ಮುದ್ದು ರಾಮಯ್ಯ (೨) ಸುಬ್ರಾಯ ಯಾನೆ ವಿಶ್ವ ರಾಯ ಶೆಟ್ಟಿ (೩) ಶ್ರೀ ವಿ. ರಾಮಣ್ಣ ಸೇಟ್ (೪) ಶ್ರೀನಿವಾಸ ಸೇಟ್ (೫) ಸರಸಿಂಹನಾಯ್ಕರು. ಈ ಸಭೆ ನೇಮಿಸಿಕೊಳ್ಳುತ್ತಿದೆ.

ದಾಕ್ಟರ್ ಕೆ. ಎಲ್. ಮಾಳರವರು ಬಜಿಗ್ರಿಗೆ ಗಮಿಸಿರುವುದರಿಂದ ಜಾಸ್ಟರ್ ಕೆ. ಆರ್. ನಾಯಕ್ ಇವರು ಕಾರ್ಯದರ್ಶಿಗಳಾಗಿಯೂ ಡಿ. ನಾರಾಯಣಪ್ಪಯ್ಯನವರು ತಿಳಿಸುಬರಿತ್ತಿದೆ.

ಕೋಪರೇಟಿವ್ ಸ್ಟೋರ್ಸ್—ಕೋಪರೇಟಿವ್ ಸ್ಟೋರ್ಸ್ ಸ್ಥಾಪನೆಯ ಬಗ್ಗೆ ಇದೇ ತಾ. 7ರಲ್ಲಿ ತಾಲೂಕು ಕಚೇರಿಯಲ್ಲಿ ಸಂಜೆ ಏಮು ತಾಸಿಗೆ ಸಭೆ ಜರಗಲಿದೆ.

TROPICAL INSURANCE CO LTD, does not boast of 'big' figures. It has not been writing crores of Busines every Year. That was never its intention. It never aimed at breaking "records" at dangerous cost Whatever it did it wrote sound business that endures in the books of the Company. Thus although not the biggest it is one of the best of Life Offices in India.

The Company, founded by Pandit Moti Lal Nehru, Dr. Ansari and Hakim Ajmal Khan, and guided now under the Chairmanship of Sj. Subhas Chandra Bose offers excellent chances to young men of culture & education to forge out their careers

THE
Tropical Insurance Co., Ltd.
Branch Office: NIVAS BUILDING, Hampankatta,
MANGALORE.
Branch Manager: M. SUNDER RAM SHETTY

ಸಮಾಜಗಳೊಳಗೆ ಆದಷ್ಟು ಬೇಗನೆ ಐಕ್ಯವನ್ನುಂಟುಮಾಡಬೇಕೆಂದು ಸರಕಾರವು ಬಹಳ ಆತುರಪಡುತ್ತಿದೆ. ಆದರೆ ಈ ವರೆಗೆದು ಸಾಧ್ಯವಾಗಿರುವುದಿಲ್ಲವೆಂಬುದು ವಿಷಾದಕರ. ಆದರೆ ಹಿಂದುದೇಶದ ರಾಜಕೀಯ ಪಕ್ಷಗಳೊಳಗಣ ಐಕ್ಯದ ನಿಮಿತ್ತ, ವೈಸರಾಯರ ಎಗ್ಜಿಕ್ಯೂಟಿವ್ ಕೌನ್ಸಿಲನ್ನು ವ್ಯಾಪಕಗೊಳಿಸುವ ಮತ್ತು ಯುದ್ಧ ಸಿದ್ಧತೆಯಲ್ಲಿ ಹಿಂದೀ ಜನಸಮೂಹದ ಸಹಕಾರವನ್ನು ಹೆಚ್ಚಾಗಿ ಪಡೆಯುವ ಸರಕಾರದ ಉದ್ದೇಶವನ್ನು ಇನ್ನು ಮುಂದು ವರಿಸಲು ಸಾಧ್ಯವಿಲ್ಲ. ಆದುದರಿಂದ ಜನ ಪ್ರಾತಿನಿಧ್ಯವುಳ್ಳ ಹಿಂದೀಯರು ಕೆಲವ ರನ್ನು ಎಗ್ಜಿಕ್ಯೂಟಿವ್ ಕೌನ್ಸಿಲಿಗೆ ನೇಮಿಸಿ, ವಾರ್ ಎಡ್ವೈಸರಿ ಕಾನ್ಸಿಲೊಂದನ್ನು ಸ್ಥಾಪಿಸಬೇಕೆಂದು ಬ್ರಿಟಿಷ್ ಸರಕಾರವು ತಿಳಿಸಿರುವುದು. 1936ರ ಇಂಡಿಯ ಆಕ್ಟನ್ನು ಪುನಃ ಬದಲಾಯಿಸಲು ಸಾಧ್ಯವಿದೆ. ಅಂತಹ ಬದಲಾವಣೆಯ ಸಂದರ್ಭದಲ್ಲಿ ಅಲ್ಪಸಂಖ್ಯಾಕರ ಅಭಿಪ್ರಾಯಕ್ಕೆ ಸಂಪೂರ್ಣ ಗಮನಕೊಡಲಾಗುವುದು. ದೇಶದ ಶಾಂತಿ ಮತ್ತು ಕ್ಷೇಮಸಾಧನೆಯ ಅಗಣ ಸರಕಾರದ ಜವಾಬ್ದಾರಿಯೆನ್ನು ಹಿಂದೀ ರಾಷ್ಟ್ರೀಯ ಜೀವನದ ದೊಡ್ಡ ಮತ್ತು ಶಕ್ತಿವಂತ ಭಾಗವು ಯಾರ ಅಧಿಕಾರವನ್ನು ಪ್ರತ್ಯಕ್ಷವಾಗಿ ನಿರಾಕರಿಸುವುದೋ ಅಂತಹ ಯಾವ ಸರಕಾರಕ್ಕಾದರೂ ಬಿಟ್ಟುಕೊಡಲಾರದು. ಯುದ್ಧ ಮುಗಿದೊಡನೆ ಆದಷ್ಟು ಬೇಗ ಡೊಮಿನಿಯನ್ ಸ್ಟೇಟ್ ಸನ್ನೀಯುವುದೇ ಸರಕಾರದ ಉದ್ದೇಶ. ಬ್ರಿಟಿಷ್ ಸಾಮ್ರಾಜ್ಯದ ಕೈಕೆಳಗೆ ಸಮಾನತೆ ಮತ್ತು ಸ್ವತಂತ್ರವಾಗಿರುವ ಹಿಂದೀ ರಾಜಕೀಯ ಘಟನೆಯನ್ನು ಹಿಂದೀಯರೇ ತಯಾರಿಸುವಂತಾಗಬೇಕೆಂಬ ಅಭಿಪ್ರಾಯವು ದೇಶಗಳಲ್ಲಿ ಪ್ರಬಲವಾಗಿದೆ. ಈ ಕುರಿತು ಬ್ರಿಟಿಷ್ ಸರಕಾರದ ಸಹಾನುಭೂತಿ ಇದೆ. ಇಂಗ್ಲೆಂಡಿಗೂ ಹಿಂದುದೇಶಕ್ಕೂ ಇರುವ ದೀರ್ಘಕಾಲದ ಸಂಬಂಧದಿಂದ ಬ್ರಿಟಿಷ್ ಸರಕಾರದ ಮೇಲೆ ಬಂದಿರುವ ಜವಾಬ್ದಾರಿಯನ್ನು ನೆರವೇರಿಸುತ್ತಾ ಹಿಂದೀಯರ ಈ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ತರಲು ಸರಕಾರವು ಪ್ರಯತ್ನಿಸುವುದು. ಇದಕ್ಕಾಗಿ ಯುದ್ಧವು ಮುಗಿದ ಮೇಲೆ ಆದಷ್ಟು ಬೇಗನೆ, ಹಿಂದೀ ರಾಷ್ಟ್ರೀಯ ಜೀವನದ ಪ್ರಮುಖ್ಯ ಅಂಗಗಳ ಪ್ರತಿನಿಧಿಗಳ ಕಮಿಟಿಯೊಂದನ್ನು ಸ್ಥಾಪಿಸಿ ಅವರು ಹಿಂದೀ ರಾಜಕೀಯ ಘಟನೆಯನ್ನು ತಯಾರಿಸುವಂತೆ ಸರಕಾರವು ಸರ್ವ ರೀತಿಯಲ್ಲಿಯೂ ಸಹಾಯಮಾಡುವುದು. ಆ ಮೊದಲು ಈ ಕಮಿಟಿಯು ಯಾವ ಸ್ವರೂಪದ್ದಿರಬೇಕು, ಅದು ಯಾವ ರೀತಿಯಲ್ಲಿ ನಿರ್ಧಾರಕ್ಕೆ ಬರಬೇಕು, ಮತ್ತು ರಾಜಕೀಯ ಘಟನೆಯ ತತ್ವ ಮತ್ತು ರೂಪ ಎಂತಹದಿರಬೇಕೆಂಬ ಕುರಿತು ಹಿಂದೀಯರೇ ಪೈತೃಚ್ಛಾವದಿಂದ ಒಡಂಬಡಿಕೆಗೆ ಬರುವಂತೆ ಸರಕಾರವು ಯಥಾರ್ಥ ಸಹಾಯವೀಯಲಿರುವುದೆಂಬುದೇ ವೈಸರಾಯ ಹೇಳಿಕೆಯ ಸಾರಾಂಶ. ವೈಸರಾಯರ ಈ ಹೇಳಿಕೆಯ ಕುರಿತು ಮುಂದಗಾಮಿಗಳೆಲ್ಲರೂ ತೃಪ್ತಿಸೂಚಿಸಿರುವರು. ಆದರೆ ಕಾಂಗ್ರೆಸಿನ ಕೇಳಿಕೆಯನ್ನಷ್ಟು ಏನೇನೂ ತೃಪ್ತಿಪಡಿಸಿರುವುದಿಲ್ಲೆಂಬುದು ಸ್ಪಷ್ಟ ವಿದೆ. ಆದರೂ ಗಾಂಧಿಜಿ, ಪಂಡಿತ ನೆಹೆರು, ಶ್ರೀ ರಾಜಗೋಪಾಲಾಚಾರ್ಯರೇ ಮೊದಲಾದ ಕಾಂಗ್ರೆಸ್ ಮುಖಂಡರೂ ಆ ಕುರಿತು ಅಭಿಪ್ರಾಯವೀಯಲಿಲ್ಲ. ಇದೇ ತಾ. 18ಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ವಾರ್ಧದಲ್ಲಿ ಸೇರಿ ಆಲೋಚಿಸಲಿರುವುದು. ಈ ನಡುವೆ ವೈಸರಾಯರು ಮೌಲಾನ ಅಜಾದರನ್ನು ಮಾತಾಡಲು ಆಮಂತ್ರಿಸಿರುವರು. ಇದೇ ತಾ. 8ರಲ್ಲಿ ಇಂಡಿಯ ಸೆಕ್ರೆಟರಿಗಳಾದ ಮಿ. ಆಮೆರಿಯವರು ಪಾರ್ಲಿಮೆಂಟಿನಲ್ಲಿ ಮಿ. ಸೋರೆನ್ಸನರ ಪ್ರಶ್ನೆಗೆ ಉತ್ತರವೀಯುತ್ತಾ, ಹಿಂದುದೇಶದ ವಿಷಮ ಪರಿಸ್ಥಿತಿಯ ಕುರಿತು ಚಕ್ರವರ್ತಿ ಸರಕಾರವು ಬಹಳ ಚಿಂತೆಗೊಂಡಿದೆ. ಹಿಂದುದೇಶದ ಎಲ್ಲಾ ರಾಜಕೀಯ ಪಕ್ಷಗಳೊಳಗೆ ಸಹಕಾರವನ್ನುಂಟುಮಾಡಲು ಸರಕಾರವು ಆತುರಪಡುತ್ತಿರುವುದೆಂಬುದು ತಾನೀಗ ಓದುವ ಹೇಳಿಕೆಯಿಂದ ವ್ಯಕ್ತವಾಗುತ್ತಿರುವುದೆಂದು, ವೈಸರಾಯರ ಹೇಳಿಕೆಯನ್ನು ಪಾರ್ಲಿಮೆಂಟಿನಲ್ಲಿ ಓದಿ ಹೇಳಿದರು.

ಬ್ರಿಟಿಷ್ ಕಡಲ್ಗಾಲುವೆಯಲ್ಲಿ ಪ್ರಬಲ ಆಕಾಶಯುದ್ಧ

ಇದೇ ತಾ. 8ರಲ್ಲಿ ಬೀರ ಬೇರೆ ಜಾತಿಯ ಸುಮಾರು 100 ಜರ್ಮನ್ ವಿಮಾನಗಳು ಬ್ರಿಟಿಷ್ ಕಡಲ್ಗಾಲುವೆಯ ಮೇಲಿನ ಹಡಗುಗಳ ಮೇಲೆ ಧಾಳಿಯ ಟ್ಟು ಅವನ್ನು ಮುಳುಗಿಸಲೆತ್ನಿಸಿದಾಗ ಬ್ರಿಟಿಷ್ ವಿಮಾನಗಳು ಅವುಗಳೊಂದಿಗೆ ಕೆಚ್ಚು ಹೋರಾಟ ನಡೆಸಿ ಅದನ್ನು ನಾಶಮಾಡಿರುವವು. ಇಷ್ಟು ದೊಡ್ಡ ಆಕಾಶ ಯುದ್ಧವು ಈ ವರೆಗೆ ನಡೆದಿಲ್ಲ. ಜರ್ಮನ್ ವಿಮಾನಗಳು ಒಂದು ದಿನದಲ್ಲಿ ಇಷ್ಟೊಂದು ಹೆಚ್ಚು ನಾಶವಾದುದೂ ಇಲ್ಲ ತಾ. 8ರಲ್ಲಿ ಬಹುತೇಕ ಇಡೀ ದಿನ ತೀವ್ರ ಹೋರಾಟ ನಡೆಯಿತು. ಜರ್ಮನ್ ವಿಮಾನಧಾಳಿಯಿಂದ 5 ಬ್ರಿಟಿಷ್ ಹಡಗಗಳು ಮುಳುಗಿಸಲ್ಪಟ್ಟಿರುವವು ಇತರ 7 ಹಡಗಗಳಿಗೆ ಜಖಮ್ ಆಗಿರುವುದು. ಅವನ್ನು ಸುರಕ್ಷಿತವಾಗಿ ಬಂದರುಗಳಿಗೊಯ್ಯಲಾಗಿದೆ 3 ಹಡಗಗಳು ಮುಳುಗಿಸಲ್ಪಟ್ಟಿದುದು ಜರ್ಮನ್ ಮೋಟರ್ ಬೋಟುಗಳಿಂದ ಜರ್ಮನ್ ಮೋಟರ್ ಬೋಟೊಂದು ಮುಳುಗಿಸಲ್ಪಟ್ಟಿದೆ. ತಾ. 8ನೇ ಮಂಜಾನೆ ಜರ್ಮನ್ 18 ಬೋಟುಗಳು ಬ್ರಿಟಿಷ್ ಹಡಗಗಳನ್ನು ಮುಳುಗಿಸಲೆತ್ನಿಸಿದುವು, ಅವುಗಳಲ್ಲೊಂದು ಮುಳುಗಿಸಲ್ಪಟ್ಟಿದೆ. ಇನ್ನೊಂದಕ್ಕೆ ಜಖಮ್ ಆಗಿದೆ. ತಾ 8ರ ವಿಮಾನ ಯುದ್ಧದಲ್ಲಿ 16 ಬ್ರಿಟಿಷ್ ವಿಮಾನಗಳು ನಾಶವಾಗಿವೆ. ಇವನ್ನು ಭರ್ತಿಮಾಡಲು ಪಾರ್ಲಿಮೆಂಟ್ ಮೆಂಬರರಾದ ಮಿ. ಗಾಫೆಲ್ಡ್ ವೆಸ್ಟನರು 100,000 ಪವನುಗಳ ಚೆಕ್ಕನ್ನು ವಿಮಾನ ಮಂತ್ರಿಗಳಿಗಿತ್ತಿರುವರು. ಜರ್ಮನರು ಈ ರೀತಿ ವಿಮಾನಗಳನ್ನು ಮತ್ತು ವೈಮಾನಿಕರನ್ನು ಕಳಕೊಳ್ಳುತ್ತಾ ಬಂದರೆ ಜರ್ಮನ್ ವಿಮಾನ ಪಡೆಯು ಬೇಗನೆ ಶಕ್ತಿ ಕುಂದಿ ಹೋಗುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ಜರ್ಮನ್ ಸರಕಾರವು ಬ್ರಿಟಿಷರ ನೂರಾರು ವಿಮಾನಗಳು ನಾಶಮಾಡಲ್ಪಟ್ಟವೆಯೆಂದೂ ತಮ್ಮ ನಷ್ಟವು ಬಹಳ ಕಡಿಮೆಯೆಂದೂ ಪ್ರಕಟಿಸಿ ಜನರನ್ನು ವಂಚಿಸುತ್ತಿದೆ. ಉದಾಹರಣೆಗಾಗಿ ತಾ. ೮ರಲ್ಲಿ ನಾಶವಾದ ಜರ್ಮನ್ ವಿಮಾನಗಳು ಹನ್ನೆರಡೆಂದು ಜರ್ಮನ್ ಸರಕಾರವು ಪ್ರಕಟಿಸಿದೆ. ಇದೇ ರೀತಿ ಇಂಗ್ಲೆಂಡಿನ ಕೈಗಾರಿಕಾ ಕೇಂದ್ರಗಳೆಲ್ಲಾ ನಾಶಮಾಡಲ್ಪಟ್ಟಿವೆ. ಸೂರಾರು ಬ್ರಿಟಿಷರು ಕೊಲ್ಲಲ್ಪಟ್ಟಿದ್ದಾರೆಂದೆಲ್ಲಾ ಸುಳ್ಳು ಸುದ್ದಿಗಳು ಪ್ರಕಟವಾಗುತ್ತಿವೆ. ಆದರೆ ಬ್ರಿಟಿಷ್ ವಿಮಾನಗಳು ಪ್ರತಿನಿತ್ಯವೂ ಜರ್ಮನಿಯ ಮೇಲೇರಿ ಹೋಗಿ ಬೋಂಬೆಸೆದು ಮಾಡುತ್ತಿರುವ ಹೆಚ್ಚಿನ ಹಾನಿಯಲ್ಲಿ ಯಾವ ಸುದ್ದಿಯೂ ಪ್ರಕಟಿಸಲ್ಪಡುವುದಿಲ್ಲ. ಆದರೆ ಇದನ್ನು ಹೆಚ್ಚು ಕಾಲ ಗುಟ್ಟಾಗಿಡಲು ಸಾಧ್ಯವಿಲ್ಲ. ಕ್ರಮೇಣ ಅದು ಜನರಿಗೆ ತಿಳಿಯದಿರಲಾರದು. ಜರ್ಮನರಲ್ಲಿಯುದ್ಯೋತ್ಸಾಹವನ್ನುಂಟುಮಾಡಲು ಸರಕಾರವು ಬ್ರಿಟಿಷ್ ಹಡಗ ಮತ್ತು ವಿಮಾನ ನಾಶವನ್ನು ಹೆತ್ತಿಸ್ಪತ್ತು ಸಾಲು ಹೆಚ್ಚಾಗಿ ಚಿತ್ರಿಸಿ ತಮ್ಮ ನಷ್ಟವನ್ನು ಅಂತೆಯೇ ಕಡಿಮೆಮಾಡಿ ತೋರಿಸುತ್ತಿದೆ.

ಮುಸ್ಲಿಮ್ ಲೀಗ್ ಮತ್ತು ಯುದ್ಧ ಕಮಿಟಿಗಳು

ಮುಸ್ಲಿಮ್ ಲೀಗಿನವರು ಸರಕಾರವು ಸ್ಥಾಪಿಸಿರುವ ಯುದ್ಧ ಸಮಿತಿಗಳಲ್ಲಿ ಸಹಕರಿಸಬಾರದೆಂದು ಲೀಗ್ ಕೌನ್ಸಿಲಿನವರು ನಿರ್ಧರಿಸಿರುವರಷ್ಟೆ. ಇದಕ್ಕೆ ವಿರೋಧವಾಗಿ ಪಂಜಾಬ್, ಬಂಗಾಳ, ಸಂಯುಕ್ತ ಪ್ರಾಂತ, ಮತ್ತು ಬೀಹಾರ್ ಪ್ರಾಂತಗಳಲ್ಲಿ ಕೆಲವರು ಯುದ್ಧ ಕಮಿಟಿಗಳಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಿರುವರು. ಬಿಹಾರಿನಲ್ಲಿ ಇಂಥವರ ಮೇಲೆ ಶಿಸ್ತು ಜ್ಯಾರಿಮಾಡಲಾಗಿದೆ. ಪಂಜಾಬಿನ ವಿಶಿಷ್ಟ ಪರಿಸ್ಥಿತಿಯು ನಿಮಿತ್ತ ಅಲ್ಲಿಯ ಲೀಗ್ ಮೆಂಬರರನ್ನು ಯುದ್ಧ ಸಮಿತಿಯ ಸದಸ್ಯರಾಗಬಿಡಬೇಕೆಂದು ಮಿ. ಜಿನ್ನಾರೊಡನೆ ಕೇಳಿಕೊಳ್ಳಲು ಮುಸ್ಲಿಂ ನವಾಬರ ನಾಯಕತ್ವದಲ್ಲಿ ಡೆಪ್ಯುಟೇಶನ್ನೊಂದು ಇದೇ ತಾ. 10ರಲ್ಲಿ ಬೊಂಬಾಯಿಗೆ ಮಿ. ಜಿನ್ನಾರ ಬಳಿಗೆ ಹೋಗಿ ಮಾತುಕತೆ ನಡಿಸಿತು. ಆದರೆ ಮಿ. ಜಿನ್ನಾರು ಈ ಡೆಪ್ಯುಟೇಶನ್ನಿನವರ ಸೂಚನೆಗೊಪ್ಪದೆ, ಲೀಗ್ ಕೌನ್ಸಿಲಿನ ಸಭೆಯು ಇದೇ ತಾ. 17ರಲ್ಲಿ ಬೊಂಬಾಯಿಯಲ್ಲಿ ಸೇರುವ ನೊದಲು, ಯುದ್ಧ ಸಮಿತಿಯ ಮೆಂಬರರಾಗಿರುವ ಲೀಗ್ ಮೆಂಬರರೆಲ್ಲರೂ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕು. ಅನಂತರ ಪರಿಸ್ಥಿತಿಯನ್ನು ವಿಚಾರಿಸಿ

(ಒನೇ ಪುಟಕ್ಕೆ ಮುಂದುವರಿಯುತ್ತದೆ)

LOOK HERE

Any person of any age can see through this miraculous glass It will tell whether the patient will recover from bed. It can reveal the present, past and future and can show the way to protect yourself from the misery. For stolen property, success in hardship, love, job, business, examination, litigation and to see the persons whom you have not dreamt of, you can see this glass. Price Rs. 2/8, Postage extra. Money refunded if not approved.

BENGAL MESMRESIM HOUSE (N. U)
HOSHIARPUR. N. W. R. (India)

THE
BOMBAY LIFE ASSURANCE Company, Limited.
[ESTD. 1908]

BATTLE OF LIFE

Fight Boldly and Nobly for a Just cause against Uncertainty of Life, of your income and investment and Be Brave to Sacrifice your Present a Little Bit.

THEN YOU CAN BE PROUD THAT YOU HAVE CONQUERED YOUR ENEMIES OFMODERN LIFE AND ENSURE HAPPINESS DURING YOUR LIFE TIME AND BEQUEATH THE SAME HAPPINESS TO YOUR DEAR ONES.

PLEASE MAKE HASTE AND WRITE TO US FOR YOUR REQUIREMENTS TO-DAY ALONE

KOCHIKAR BROTHERS, LTD.,

MADRAS BRANCH SECRETARIES
& Chief Agents for Bombay City & Suburbs,
BOMBAY LIFE BUILDING,
Sir Lalubhai Samaldas Road,
GANDHI NAGAR, UDIPI.

Or any of their following Offices at:-

(1) Mount Road Madras | (2) Bangalore City | (3) Bombay No. 4
(4) Calicut | (5) Trivandrum | (6) Mangalore

ಯುದ್ಧದ ಭೀಕರ ಹಾಗೂ ಹೃದ್ರಾವಕ ದೃಶ್ಯಗಳು.

ತಾಯಂದಿರ ಶವಗಳನ್ನಪ್ಪಿ ಹಿಡಿದು ಕೂಗುತ್ತಿರುವ ಮಕ್ಕಳು.

ಗಾಯಗೊಂಡು ಸಾಯಲನುವಾಗಿರುವವರ ಮೇಲೆ ಗುಂಡಿನ ಸುರಿಮಳೆ.

ಯಾವ ನೀತಿನಿಯಮವನ್ನೂ ಇಲ್ಲದ ಪೈರಾಚಿಕ ಕೊಲೆಗಡುಕತನ.

ಇಂದಿನ ಯುದ್ಧ ವಿಧಾನದಿಂದ ಅನಾಗರಿಕ ಬರ್ಬರ ಮಾನವಜಾತಿಯಂತೂ ಚಕಿತರಾಗದಿರಲಾರರು. ಆದಕ್ಕೆಂದು ನೀತಿಯಿಲ್ಲ ನಿಯಮವಿಲ್ಲ ಜನಸಾಮಾನ್ಯರು ಸ್ತ್ರೀಯರು ಮಕ್ಕಳೆನ್ನದೆ ಘೋರಾತ್ಯದಜನಸಾಮಾನ್ಯರನ್ನೆಲ್ಲ ಅಮಾನುಷವಾಗಿ ನಿರ್ಘೃಣವಾಗಿ ಕೊಂದು ನಾಶಮಾಡುವುದೊಂದೇ ಇಂದಿನ ಯುದ್ಧದ ಮುಖ್ಯೋದ್ದೇಶ ಇಂದು ಜರ್ಮನರು ಹೃದಯರಹಿತ ಕೊಲೆಗಡುಕ ಯಂತ್ರದೋಪಾದಿ ವರ್ತಿಸಿರುವರು ದಾನವ ರಕ್ಷಸೋಪಾದಿ ನಡೆದಿರುವರು. ಚಿಕಿತ್ಸಕ ಪಥಕ, ಉಪಚಾರಕರು, ಗಾಯಗೊಂಡವರನ್ನೊಯ್ಯುವ ಟ್ರೆಸು, ಹಡಗುಗಳೆನ್ನದೆ ಎಲ್ಲದರಮೇಲೆಯೂ ಬೋಂಬ್ ಮತ್ತು ವಿಷಗ್ಯಾಸುಗುಂಡುಹೆಯ್ದು ಪೈಶಾಚಿಕ ಕೃತ್ಯ ಮಾಡಿರುವರು. ಸರ್ವ ಸಾಮಾನ್ಯ ನಾಗರಿಕರ ಮೇಲೆ ಬೋಂಬೆಸೆಯಕೂಡದೆಂಬ ನಿಯಮವನ್ನು ಉಲ್ಲಂಘಿಸುತ್ತದರಲ್ಲೇ ಜರ್ಮನರು ಹೆಚ್ಚಾಗಿ ಆಸರಿಸಿತ್ತಿದ್ದಾರೆ ಜರ್ಮನ್ ಸಬ್‌ಮೆರೀನ್‌ಗಳು ಮುಂದಾಗಿ ಎಚ್ಚರವನ್ನೀಯದೆ ತನ್ಮೆದುರಿಗೆ ಸಿಕ್ಕ ಹಡಗುಗಳನ್ನೆಲ್ಲಿ ಮುಳುಗಿಸಿರುತ್ತವೆ. ಈ ಹಡಗಗಳಲ್ಲಿದ್ದವರು ಹೇಗಾದರೂ ಮಾಡಿ ಪ್ರಾಣವನ್ನುಳಿಸಲೆಂತ್ನಿಸುವಾಗ ಅವರಮೇಲೆ ಮಿಶನ್ ತೋಪುಗಳ ಮೂಲಕ ಗುಂಡು ಹೊಡೆದು ಮುಳುಗಿಸುವ ಅಮಾನುಷತನ ತೋರಿಸುತ್ತಾರೆ. ಜರ್ಮನ್ ವಿಮಾನಗಳುಉತ್ತರ ಸಮುದ್ರ ಮತ್ತು ಬ್ರಿಟಿಷ್ ಕಡಲ್ಗಾಲುವೆಗಳಲ್ಲಿ ನಿಶ್ಶಸ್ತ್ರ ಹಡಗಗಳನ್ನೆಲ್ಲ ಬೋಂಬೆಸೆಯ ತೊದಗಿವೆ. ಮೊದಲು ಹಡಗಗಳಲ್ಲಿರುವ ಜನರ ಮೇಲೆ ಮಿಶನ್ ತೋಪುಗಳಿಂದ ಗುಂಡುಗಳ ಮಳೆಗರೆದು ಆ ಮೇಲೆ ಹಡಗಿಗಳನ್ನು ಬೋಂಬೆಸೆದು ಮುಳುಗಿಸಿದುದಿವೆ ಬೋಂಬುಗಳ ಸ್ಫೋಟದಿಂದ ಮುಳುಗುತ್ತಿರುವ ಹಡಗಿನ ಮೇಲೆ ಮತ್ತೂ ಬೋಂಬೆಸೆದು ದಿಗಿಲುಗೊಂಡಿರುವ ಜನರನ್ನು ನಾಶಮಾಡಿದುದಿವೆ. ಪ್ರಾಣರಕ್ಷಕ ದೋಣಿಗಳಲ್ಲಿ ಕೂತು ತಪ್ಪಿಸಿಕೊಳ್ಳಲೆ ತೇಲಾಡಿ ಪ್ರಾಣವನ್ನುಳಿಸಿ ಕೊಳ್ಳಲೆತ್ನಿಸುವವರನ್ನು ಮುಂಬಗಿನಿಸುವ ಉದ್ದೇಶದಿಂದಲೇ ಅವರ ಮೇಲೆ ಗುಂಡೆಸೆದುದಿವೆ. ಇಷ್ಟೊಂದು ಘೋರ ಹಾಗೂ ಅಮಾನುಷ ಯುದ್ಧವು ಇತಿಹಾಸದಲ್ಲೇ ನಡೆದಿಲ್ಲ. ಇದರಿಂದ ಬರ್ಬರತನವು ಮಾನವ ಹೃದಯಾಂತರಾಳದಲ್ಲೇ ಅಡಗಿದೆಯೇ ಹೊರತು ಹಿಂದೆ ಆಗಿಹೋಯಿತೆಂದು ಹೇಳಬರುವುದಿಲ್ಲ. ಫ್ರಾನ್ಸಿನಲ್ಲಿ ಗಾಯಗೊಂಡ ಸೈನಿಕರಿಗೆ ಸಹಾಯಮಾಡುತ್ತಿದ್ದು ಈಗ ಇಂಗ್ಲೆಂಡಿಗೆ ಹಿಂತಿರುಗಿರುವ ಸಾಲ್ವೇಶನ್ ಆರ್ಮಿ ಅಧಿಕಾರಿಗಳು (ಒನೋಪಕಾರೀ ಸೇನೆಯವರು) ಜರ್ಮನರ ರಕ್ಕಸತನವನ್ನು ಇಂಗ್ಲೆಂಡಿನ ನ್ಯೂಸ್ ಕ್ರೊನಿಕ್ಲ್ ಪತ್ರಿಕೆಯಲ್ಲಿ ಪ್ರಕಟಿಸಿರುವರು. ಜರ್ಮನ್ ಗುಪ್ತಚರರು ಈ ಸಾಲ್ವೇಶನ್ ಆರ್ಮಿಯ ಕೆಲಸಗಾರರ ವೇಷದಿಂದಲೂ ಫ್ರಾನ್ಸಿಗೆ ಪ್ರವೇಶಿಸಿ ಒಳಸಂಚುನಡಿಸಿದ್ದರಂತೆ ಮಿ. ಜೆ. ಎಸ್. ಬೆಲ್ಲರೆಂಬವರು ತನ್ನ ಪಥಕದೊಂದಿಗೆ ನಿರಾಶ್ರಿತರಿಗೆ ಮತ್ತು ಗಾಯಗೊಂಡ ಸೈನಿಕರಿಗೆ ಆಹಾರವನ್ನೊದಗಿಸಿ ಕೊಡುತ್ತಿದ್ದರು. ಅವರು ನಡೆಸುತ್ತಿದ್ದ ಭೋಜನಾಲಯಕ್ಕೆ ಒಬ್ಬನು ತನ್ನ ಹೆಂಡತಿ ಮಗು ಮತ್ತು ಅತ್ತೆಯೊಂದಿಗೆ ಮೋಟಾರ್‌ಕಾರಿನಲ್ಲಿ ಬಂದು ಕಾರನ್ನು ರಸ್ತೆ ಬದಿಯಲ್ಲಿನ್ನಿಸಿ ತಾನು ಆಹಾರಪಡೆಯಲು ಭೋಜನ ಶಾಲೆಯ ಒಳಕ್ಕೆ ಹೋದನು. ಶಾಲ್ವೇಶನ್ ಆರ್ಮಿಯವರು ಆಗ ಅಲ್ಲಿದ್ದ ಕೇವಲ ಬಿಸ್ಕುಟ್ಟಿನೆ ಕಟ್ಟೊಂದನ್ನು ಬಿಚ್ಚಿನಿಗೆ ಕೊಡುವಾಗ ಒಂದು ಬೋಂಬು ಭೋಜನ ಶಾಲೆಯ ಹೊರಗೆ ಬಿತ್ತು. ಆಗಂತುಕನು ಕಿಟಕಿಯಿಂದ ಹೊರನೋಡಿ,ವಾಗ ಅವನ ಹೆಂಡತಿ ಮಗು ಮತ್ತು ಅತ್ತೆಯು ರಸ್ತೆಯಲ್ಲಿ ಸತ್ತುಬಿದ್ದಿದ್ದರು.

ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಿಂದ ಇಂಗ್ಲೆಂಡಿಗೆ ತಪ್ಪಿಸಿಕೊಂಡು ಹೋಗಲೆತ್ನಿಸಿದ ನೂರಾರು ಜನರು ಪಟ್ಟಣ ಪಡಿವರ ನಾತೀವ್ರವಾಗಿದೆ. ಅನೇಕರು ಏನು ಬಿಡಿಯೆಂದೂ ದೋಣಿಗಳಲ್ಲಿ ಹೋಗುತ್ತಿದ್ದಾಗ ಜರ್ಮನ್ ವಿಮಾನಗಳವನ್ನು ಹತಾಶಾಧನೆಯಿಂದ ಮುಳುಗಿಸಿಬಿಟ್ಟಿರುವವು. ಕೆಲವರು ಈ ದೋಣಿಗಳು ಒಡೆದುಹೋಗ ಜಲಗೆಗಳನ್ನು ಹಿಡಿಕೊಂಡು ಹಲವು ಘಂಟೆ ಈಜಾಡಿ ದಾರಿಯಲ್ಲಿ ಹೋಗುವ ಸ್ಟೀಮರುಗಳಿಂದ ಹೆಕ್ಕಲ್ಪಟ್ಟಿರುವರು. ಇನ್ನು ಕೆಲವರು ಈಜಿ ಈಜಿ ಸೋತು ಬೆಳಿಯಿಂದ ಮರಕಟ್ಟೆ ಮುಳುಗಿಹೋಗುವರು ಕ್ಷಲ್ಪ ಪಂದಿ ಹೇಗಾದರೂ ಬ್ರಿಟಿಷ್ ಕರಾವಳಿಗೆ ಮುಟ್ಟಿ ರಕ್ಷಿಸಲ್ಪಟ್ಟಿದ್ದಾರೆ. ಈ ಜನರನ್ನೂ ಕಂಡ ಕಂಡಲ್ಲಿ ಜರ್ಮನರು ಮಿಶನ್ ತೋಪುಗಳಿಂದ ಗುಂಡೆಸೆದು ಮುಳುಗಿಸಿ ಬಿಡುತ್ತಿದ್ದರು. ಕೊಲೆಮಾಡುವುದೊಂದೇ ಅವರ ಉದ್ದೇಶವಾಗಿದ್ದಿತು.

ಬೆಲ್ಜಿಯಮಿನ ಪ್ರಖ್ಯಾತ ಕುದುರೆ ಸವಾರರಾದ ಎಂಡ್ರೂಕೆಪ್ಲಿಯರ್ ಮತ್ತು ಅವರ ಕುಟುಂಬದವರು ಟ್ರಿನಿಸಲ್ಲಿ ತಪ್ಪಿಸಿಕೊಂಡು ಹೋಗುವಾಗಲೆದ ಅನುಭವವು ಅತ್ಯಂತ ಭೀಕರವಿದೆ ಜರ್ಮನರ ವಿಮಾನ ಧಾಳಿಯ ಭೀಕರತೆಯನ್ನು ತಾಳಿಕೊಳ್ಳಲಾರದೆ ಉನ್ಮತ್ತನಾದ ಓರ್ವನು ಕೆಳಗೆ ಹಾರದಂತೆ ಹಿಡಿದುಕೊಳ್ಳಬೇಕಾಯಿತು. ಇನ್ನೊಬ್ಬ ಸ್ತ್ರೀಯು ಧೈರ್ಯಗೆಟ್ಟು ಕಿಟಕಿಯಿಂದ ಹೊರಹಾರಿ ಕಾಲು ಮುರಿದುಕೊಂಡಳು. ಕೆಲವರು ಟ್ರೆನಿನಿಂದಲೇ ಇಳಿದು ಸೆಲ್ಫ ಸ್ವದೇಶಗಳಿಗೆ ಹೋಗಿ ಅಡಗಿಕೊಂಡರು. ಬ್ರಿಟಿಷ್ ಯುದ್ಧ ಹಡಗ ಮತ್ತು ಯುದ್ಧವಿಮಾನಗಳ ರಕ್ಷಣೆಯಿಂದ ಕೆಲ್ಲಿಯನರೇ ಮಾದಲಾದವರು ಇಂಗ್ಲೆಂಡಿಗೆ ಸ್ಟೀಮರ್ ಮೂಲಕ ಸುರಕ್ಷಿತವಾಗಿ ಪ್ರಯಾಣಮಾಡಿದರು. ಹಾಗೆಯಲ್ಲೇ ಓರ್ವ ಸ್ತ್ರೀಯು ಅವಳಜವಳೆ ಮಕ್ಕಳನ್ನು ಹೆತ್ತಳು. ಮಕ್ಕಳೂ ತಾಯಿಯೂ ಕೊಡಲೆ ಮೃತರಾದರು.

ನಾಯಿಗಳು ಹಡಗಗಳ ಮೇಲೆ ಬೋಂಬೆಸೆದು ಅವಕ್ಕೆ ಬೆಂಕಿಕೊಟ್ಟು ಸುಟ್ಟುಹಾಕಿದುದು ಮಾತ್ರವಲ್ಲದೆ ಗಾಯಗೊಂಡು ಮತ್ತು ನಿರಾಶ್ರಿತರಾಗಿ ಕಂಗೆಟ್ಟು ರಸ್ತೆಯಲ್ಲಿ ಬಿದ್ದುಕೊಂಡಿದ್ದ ಜನರಮೇಲೆ ವಿಷಗ್ಯಾಸುಗಳ ಮೂಲಕ ಗುಂಡೆಸೆಯುತ್ತಿದ್ದರು. ತಾಯಂದಿರು ತಮ್ಮ ಮಕ್ಕಳನ್ನು ಕೈಯಲ್ಲಿ ಹಿಡಿದುಕೊಂಡಂತೆಯೆ (ಅವು ಸತ್ತು ಹೋಗಿರುವುದನ್ನು ಕಾಣುತ್ತಿದ್ದರು. ಜರ್ಮನ್ ವಿಮಾನಗಳು ಬಹಳ ಕೆಳಗಿಳಿದು ಬಂದು ಜನ ಸಮುದಾಯದ ಮೇಲೆ ಸೈರಿ ಬೆಕವಾಗಿ ಗುಂಡುಗಳ ಮಳೆಗರೆಯುತ್ತಿದ್ದವು. ಕಬ್ಬೆಬ್ಬಿಸುವ ಬೋಂಬುಗಳನ್ನೆಸೆದು ಸುಟ್ಟು ಪಟ್ಟಣಗಳನ್ನು ಸುಟ್ಟುಹಾಕುತ್ತಿದ್ದರು. ನಿಶಾಚಿಯಾದರೂ ಚಕಿತಗೊಳ್ಳುವ ಅಮಾನುಷ ಹಿಂಸೆಯ ದೃಶ್ಯಗಳನ್ನು ಕಂಡು ವಿಕಟ ಆನಂದಪಡುತ್ತಿದ್ದರು.

ಗಾಯಗೊಂಡ ಸೈನಿಕರನ್ನೂ ನಿರಾಶ್ರಿತ ಸ್ತ್ರೀಯರು ಮಕ್ಕಳನ್ನೂ ಒಯ್ಯುತ್ತಿದ್ದ ಆಸ್ಪತ್ರೆ ಹಡಗಗಳ ಮೇಲೂ ಜರ್ಮನರು ನಿಸ್ಕಾರವಾಗಿ ಉದ್ದೇಶಪೂರ್ವಕವಾಗಿ ಬೋಂಬೆಸೆಯುತ್ತಿದ್ದರು. ಒಂದೆಡೆ ಒಂದು ಬಂದರನ್ನಬಳಸಬೇಕಾಗಿ ಸ್ತ್ರೀಯರುಮಸ್ತು ಮಕ್ಕಳು ಗುಂಪು ಕಟ್ಟಿನಿಂತು ಸ್ಟೀಮರನ್ನು ಕಾಯುತ್ತಿದ್ದರು ಜರ್ಮನ್‌ವಿಮಾನಗಳು ಅವರ ಮೇಲೆ ಬೆಂಕೆಂದು ಬೋಂಬೆಸೆದು ತಮ್ಮಿಷ್ಟದ ಬೋಂಬುಗಳನ್ನೆಲ್ಲಾ ಬರಿದು ಮಾಡಿದುವು ಸತ್ತು ಬಿದ್ದ ಸ್ತ್ರೀಯರಿಗೆ ಕಟ್ಟಬಿದ್ದು ಮಕ್ಕಳು ಕೂಗುತ್ತಿರುವ ದೃಶ್ಯವು ಎಂತಹ ಪಾಷಾಣ ಹೃದಯವನ್ನಾದರೂ ಈ ಕಡೆಗೆ ಸೆಳೆದು ಪಾರುಪಾಡುವಂತಿದ್ದಿತ್ತು. ಗುಂಡುಬಿದ್ದು ಗಾಯಗೊಂಡು ರಕ್ತದಿಂದ ತೋಯ್ದ ಹೋಗಿದ್ದ ಮಕ್ಕಳನ್ನು ಅಪ್ಪಿ ಹಿಡಿಕೊಂಡು ತಾಯಂದಿರು ಗೋಳೆಡುತ್ತಿದ್ದರು. ತಲೆಯ ಮೇಲೆಯೇ ಹಾರಿ ಒಂದು ಜರ್ಮನ್ ವಿಮಾನಗಳು ಬೋಂಬೆಸೆಯುತ್ತಿದ್ದುವು. ರೆಡ್‌ಕ್ರೋಸ್ ಧ್ವಜಗಳು ಚೆನ್ನಾಗಿ ತೋರಿಬಂದರೂ ಜರ್ಮನರನ್ನಕ್ಕೆ ಗಣ್ಯನಮಾಡುತ್ತಿದ್ದಿಲ್ಲ. ಗಾಯಗೊಂಡು ಮರಣೋನ್ಮುಖರಾದವರ ಮೇಲೂ ಅವರನ್ನು ಉಪಚರಿಸುವವರ ಮೇಲೂ ಗುಂಡು ಮತ್ತು ಬೋಂಬುಗಳು ನಿರ್ಘೃಣವಾಗಿ ಸುರಿಸಲ್ಪಡುತ್ತಿದ್ದುವು ಹಲವು ಆಸ್ಪತ್ರೆ ಹಡಗಗಳ ಮೇಲೆ ಜರ್ಮನರು ಬೋಂಬೆಸೆದು ಅವನ್ನು ಸುಟ್ಟುಹಾಕಿದಾಗ ಅದರೊಳಗಿದ್ದ ಗಾಯಗೊಂಡವರ ಪತ್ತು ಸ್ತ್ರೀಯರು ಮಕ್ಕಳ ಆಸ್ಪೆಯು ಅವರ್ಣನೀಯ ವಿದ್ದಿತು.

ಜರ್ಮನರು ಹುಟ್ಟೇಪಾಶವಿಕವಾದುದು. ಗಿಬ್ಬೆಯು ಅವರನ್ನು ಮತ್ತೂ ಬುಗ್ಗರನ್ನಾಗಿ ಮಾಂಡುವುದು ಜರ್ಮನಿಯ ಸ್ವಪ್ರಖ್ಯಾತ ಕವಿ ಗೊತೆಯ ವಂದಿರುವರು ಜರ್ಮನರ ಘೋರಾಟಿದ ಪಾರವಿಕ ಪಿಪಾಸೆಯನ್ನು ಕ್ರೈಸ್ತಧರ್ಮವು ಆಗಾಗ ತಣಿಸಿರುವುದು. ಆದರೆ ಯುದ್ಧದ ವಿಕ್ಷಿಪ್ತನಂದವನ್ನು ಅವರು ಹೃದಯದಿಂದ ನಾರಮಾಡಲು ಅವಕ್ಕೆಸಾಧ್ಯವಿಲ್ಲ ಜರ್ಮನರಮೇಲಿನ ಧರ್ಮಪ್ರಚಿಂಕೆಯೊನ್ನೆ ತಪ್ಪಿತೆಂದು ಪೆ ಹಳೆಯು ಪೋಂಟದ ಬರ್ಬರತನವೇ ಮೇಲಾಗಿ ಬಂದುಘೋರ ಹಿಂಸಾತಾಂಡವ ನೇತನೆದೆಯುನಸು.ಜರ್ಮನರಧರ್ಮಪ್ರಜ್ಞೆಯನು ರಂತೆ ಗದೆಯೆತ್ತಿ ಎಲ್ಲರನ್ನೂ ಸದೆಬಡಿಯುವರು. ಜರ್ಮನರು ಗುಡುಗೆಂದರೆ ಭಯಂಕರವಾದುದು. ಇತಿಹಾಸದಲ್ಲೆಲ್ಲಂದು ನಡೆಯೆಂತೆ ಜರ್ಮನರ ಸಿಡಿಲೊಡೆದು ಬೀಳುವುದೆಂದು ಜರ್ಮನೇತರರಾದ ಹೈನೆಯವರು ಭವಿಷ್ಯವೇಳಿದು ಇಂದು ನಿಜವಾಗಿರುವುದು. ಇಂದಿಗೆ ಜರ್ಮನರು ಲೋಕಕಂಟಕ ರಕ್ಕಸರೇ ಆಗಿರುವರು. ಅವರ ಪಾಶವಿಕತನವು ಪರಮಾವಧಿಗೆ ಮುಟ್ಟಿರುವುದು.

ಮಂಗಳೂರು ಮತ್ತು ಉಡುಪಿಗೆ ಬಂದಾಗ ನಿಮಗೆ
ಸುಖವಾದ ನಿವಾಸ ದೊರೆಯಬೇಕೋ?
— ಹಾಗಾದರೆ —
ಸುಖನಿವಾಸಕ್ಕೆ ಬನ್ನಿ.
ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಹಾಸಿ, ವಿದ್ಯುದ್ದೀಪಾಲಂಕೃತ ಕೋಣೆ.
ಇವೆಲ್ಲವುಗಳು ಕಡಿಮೆ ದರದಲ್ಲಿ ದೊರೆಯುವೆಲ್ಲಿ?
ಸುಖನಿವಾಸ ದಲ್ಲಿ ಮಾತ್ರ.
ಪ್ರಯಾಣಿಕರಿಗೆ ಕನ್ವೆನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ಮಂಗಳೂರಿನಲ್ಲಿ ಜೇಡಿಗುಡ್ಡೆಯಲ್ಲಿಯೂ, ಉಡುಪಿಯಲ್ಲಿ ತಾಲೂಕು ಆಫೀಸಿನ ಬಳಿಯಲ್ಲಿಯೂ ಇರುವ 'ಸುಖನಿವಾಸ'ವನ್ನು ಒಮ್ಮೆ ಸಂದರ್ಶಿಸಿರಿ.
ಪ್ರೊಪ್ರೈಟರ್, **ಸುಖನಿವಾಸ.**

ರುಮೇನಿಯದ ಪ್ರಶ್ನೆ

ಇಂಗ್ಲೆಂಡು ಜಪಾನುಗಳ ಸಂಬಂಧ

(ಆನೇ ಪುಟದುಂದ ಮುಂದುವರಿದ್ದು)

ಅವಶ್ಯವಿದ್ದರೆ ಫೋರೀಜ್ ಬಡಾಯಿಸ ಬಹುದೆಂಬ ಅಭಿಪ್ರಾಯವಿತ್ತಿರುವರು. ಮಿ. ಜಿನ್ನರ ಈ ಸೂಚನೆಯನ್ನು ಪಂಜಾಬಿನ ಲೀಗ್ ಕಮಿಟಿಯವರು ವಿಚಾರಿಸಬಹುದು. ಮಿ. ಜಿನ್ನರು ತನ್ನ ಧ್ಯೇಯ ಬಿಡದೆ ಯುದ್ಧ ಸಮಿತಿಯ ಸದಸ್ಯರಾಗಿರುವ ಲೀಗ್ ಮೆಂಬರರ ಮೇಲೆ ಶಿಸ್ತು ಜ್ಯಾರಿಮಾಡುವ ಸಂಭವ ಬಂದಲ್ಲಿ ಲೀಗಿನಲ್ಲಿ ದೊಡ್ಡ ಒಡಕುಂಟಾಗುವುದರಲ್ಲಿ ಸಂದೇಹವೇ ಇಲ್ಲ. ಸರ್ ಸಿಕಂದರ್ ಹಾಯತ್ ಖಾನ್ ಮತ್ತು ಮಿ. ಹೆಕ್ಕರೂ ಅವರ ಆನುಯಾಯಿಗಳೂ, ಇನ್ನೂ ಅನೇಕ ಸರಕಾರದ ಪಕ್ಷಪಾತಿಗಳೂ ಲೀಗಿನಿಂದ ಬೇರೆಯಾಗಿ ಸರ್ ಸಿಕಂದರರ ನಾಯಕತ್ವದಲ್ಲಿ ಪ್ರತ್ಯೇಕ ವಾದೊಂದು ಪಕ್ಷವು ಸ್ಥಾಪಿಸಲ್ಪಡಬಹುದು. ಮಿ. ಜಿನ್ನರ ನಾಯಕತ್ವದ ವಿಷಯದಲ್ಲಿ ಇಷ್ಟರಲ್ಲೇ ಅತೃಪ್ತಿಯು ಹೊಗೆಯಾಡಹತ್ತಿದೆ. ಮುಂದೆ ಅದು ಬೆಂಕಿಯಾಗಿ ಎದ್ದು ಮಿ ಜಿನ್ನರೇ ಲೀಗಿನ ನಾಯಕತ್ವದಿಂದ ತಳ್ಳಹಾಕಲ್ಪಡುವ ಸಂ[illegible]ಭವವು ಬರಬಹುದು. ತಾ. 17ನ್ನು ಬೊಂಬಾಯಿಯಲ್ಲಿ ಸೇರುವ ಲೀಗ್ ಕೌನ್ಸಿಲ್ ಸಭೆಯಲ್ಲಿ ಸೈಸರಾಯರ ಹೇಳಿಕೆಯ ಕುರಿತು ಆಲೋಚಿಸಲಾಗುವುದು.

ರುಮೇನಿಯದ ಪ್ರಶ್ನೆ

ರುಮೇನಿಯಕ್ಕೆ ಸೇರಿರುವ ಟ್ರಾನ್ಸಿಲ್ವಾನಿಯವನ್ನು ಹಂಗೇರಿಗೂ ದೆಬ್ರೂಜವನ್ನು ಬಲ್ಗೇರಿಯಕ್ಕೂ ಬಿಟ್ಟುಕೊಡುವ ಕುರಿತು ರುಮೇನಿಯದ ಮಂತ್ರಿಗಳು ಹಂಗೇರಿ ಮತ್ತು ಬಲ್ಗೇರಿಯ ಸರಕಾರದ ಪ್ರತಿನಿಧಿಗಳೊಡನೆ ರಾಜಿಯ ಮಾತುಕತೆ ನಡೆಸುತ್ತಿರುವರು. ದೆಬ್ರೂಜ ಪ್ರಶ್ನೆಯು ರಾಜಿಯಿಂದಲೇ ಇತ್ಯರ್ಥವಾಗುವ ಸಂಭವ ತೋರುತ್ತದೆ. ರುಮೇನಿಯದ ಅರಸು ಕೆರೋಲರು ಬಲ್ಗೇರದ ಅರಸ ಬೋರಿಸರೊಂದಿಗೆ ಮಾತಾಡಹ ಹೋಗಿರುವರು. ಆದರೆ ಟ್ರಾನ್ಸಿಲ್ವಾನಿಯದ ಪ್ರಶ್ನೆಯು ಬಹಳ ತಿಕ್ಕಿನದಾಗಿದೆ. ಅಲ್ಲಿಯ ಜನರೇ ಹಂಗೇರಿಯೊಂದಿಗೆ ಸೇರಲು ಬದ್ಧ ವಿರೋಧವಿರುವಂತಿದೆ. ಅವನ್ನೆಂದಿಗೂ ಹಂಗೇರಿಗೆ ಬಿಟ್ಟುಕೊಡಕೂಡದೆಂದು ರುಮೇನಿಯದ ಪ್ರಬಲ ರಾಜಕೀಯ ಪಕ್ಷಗಳೆಲ್ಲಾ ಒಂದುಗೂಡಿ ಪ್ರಯತ್ನಿಸುತ್ತಿವೆ. ರುಮೇನಿಯವು ಹಂಗೇರಿಯೊಡನೆಯೂ ರಾಜಿ ಪ್ರಸ್ತಾಪ ನಡಿಸುತ್ತಿದೆ. ರುಮೇನಿಯದ ಗೋಧಿ ಮತ್ತು ಪೆಟ್ರೋಲನ್ನೆಲ್ಲಾ ಜರ್ಮನಿಯೇ ತರಿಸುವ ವ್ಯವಸ್ಥೆ ಮಾಡಿದೆ. ಆದುದರಿಂದ ರುಮೇನಿಯವು ಯುದ್ಧಕ್ಕೆ ಸೇರದೆ ತಟಸ್ಥವಾಗಿರಬೇಕು. ಮತ್ತು ತನ್ನ ಆಹಾರ ಸಾಮಗ್ರಿಗಳ ಆಶಯವಾಗಿರುವ ಬಾಲ್ಕನ್ ರಾಷ್ಟ್ರಗಳಲ್ಲಿ ಗಲಾಟೆಯಾಗಬಾರದೆಂದು ಹಿಟ್ಲರರು ಪ್ರಯತ್ನನಡಿಸುತ್ತಿರುವರು. ಟ್ರಾನ್ಸಿಲ್ವೇನಿಯದ ಸ್ವಲ್ಪ ಭಾಗ ಮತ್ತು ಸ್ಲೋವೇಕಿಯದ ಹೆಚ್ಚಿನ ಭಾಗವನ್ನಾದರೂ ಹಂಗೇರಿಗೆ ಕೊಟ್ಟು ಅದನ್ನು ತೃಪ್ತಿಪಡಿಸಬೇಕೆಂಬ ಅಭಿಪ್ರಾಯ ಜರ್ಮನಿಯಲ್ಲುಂಟಾಗಿದೆ.

ಇಂಗ್ಲೆಂಡ್ ಜಪಾನುಗಳ ಸಂಬಂಧ

ಜಪಾನಿನಲ್ಲಿ ವೈದೇಶಿಕರಾಡಲ್ಪಟ್ಟಿರುವ ಅಂಗ್ಲೇಯರ ಪೈಕಿ 6 ಮಂದಿ ಇನ್ನೂ ಬಂಧನದಲ್ಲೇ ಇರುತ್ತಾರೆ ಜಪಾನ್ ಹಡಗವೊಂದನ್ನು ಹೊಂಕೊಂಗಿನಲ್ಲಿ ಹಿಡಿದಿದಲಾಗಿದೆ. ಕಾಂಘೈಯಿಯಲ್ಲಿರುವ 1500 ಮಂದಿ ಬ್ರಿಟಿಷ್ ಸೈನಿಕರನ್ನು ಬ್ರಿಟಿಷ್ ಸರಕಾರವು ಹಿಂದೆ ಕರೆದಿರುವುದು. ಇದರಿಂದ ಜಪಾನು ಸಂತೋಷಗೊಂಡಿರುವುದಾದರೂ, ಇಂಗ್ಲೆಂಡು ಜಪಾನನ್ನು ಸುಮಜಾಯಿಸಲೆತ್ನಿಸುವುದೆಂಬ ಭಂಗೇಹವು ಅಮೇರಿಕದಲ್ಲುಂಟಾಗಿರುವುದು. ಬ್ರಿಟನು ತನ್ನ ಸೇನೆಯನ್ನೆಲ್ಲಾ ಒಂದು ಪ್ರಾಮುಖ್ಯ ಕ್ಷೇತ್ರದಲ್ಲಿ ಒಟ್ಟುಗೂಡಿಸುವುದೆಂದು ನಂಬಲುಗಿದೆ ಜಪಾನಾ ಪಾರ್ಲಿಮೆಂಟಿನ 128ಮಂದಿ ಮೆಂಬರರು ಒಟ್ಟು ಸೇರಿ ಬ್ರಿಟನನ್ನು ತೀವ್ರವಾಗಿ ನಿಷೇಧಿಸಿ, ಸರಕಾರವು ಕರಿಣ ಧೋರಣೆವಹಿಸಿ, ಪೂರ್ವ ಆಸ್ಯದಿಂದ ಬ್ರಿಟಿಷ್ ಪ್ರಭಾವವನ್ನೇ ನಿರ್ನಾಮಗೊಳಿಸಬೇಕೆಂಬ ನಿರ್ಣಯ ಮಾಡಿರುವರು

ಇಂಗ್ಲೆಂಡಿನ ಮೇಲೆ ವಿಮಾನ ದಾಳಿಯ ಪ್ರಾಮಳಿ

ಇಂಗ್ಲೆಂಡಿನ ಮೇಲೆ ಜರ್ಮನರು ನಡೆಸಿದ ವಿಮಾನದಾಳಿಯಿಂದ ಬ ಲ್ಯ ಸಿಂಗಳಲ್ಲಿ 258 ಮಂದಿ ಕೊಲ್ಲಲ್ಪಟ್ಟು 321 ಮಂದಿಗೆ ಬಹಳ ಪೆಟ್ಟಾಗಿರುವುದು. ಕೆಗಲ್ಲಲ್ಪಟ್ಟವರಲ್ಲಿ 47 ಮಂದಿ ಸ್ತ್ರೀಯರು ಮತ್ತು 23 ಮಂದಿ 16 ವರ್ಷದೊಳಗಿನ ಮಕ್ಕಳು. ಗಾಯಗೊಂಡವರಲ್ಲಿ 77 ಮಂದಿ ಸ್ತ್ರೀಯರು ಮತ್ತು 17 ಮಕ್ಕಳು.

ಬರ್ಮಾಡಾಲ್ಲಿ ಡ್ಯೂಕ್ ಆಫ್ ವಿಂಡ್ಸರರು

ಡ್ಯೂಕ್ ಆಫ್ ವಿಂಡ್ಸರರು ದಕ್ಷಿಣ ಅಮೇರಿಕದ ಬಳಿಯ ಬಹಾಮ ದ್ವೀಪಗಳ ಗವರ್ನರರಾಗಿ ನೇಮಿಸಲ್ಪಟ್ಟಿರುವ ರಷ್ಟೆ. ಅವರು ಡಚೆಸ್ ಆಫ್ ವಿಂಡ್ಸರರೊಂದಿಗೆ ಎಕ್ಸ್‌ಕಾಲಿಬರ್ ಎಂಬ ಯನಾಟೆಡ್ ಸ್ಟೇಟ್ಸಿನ ಹಡಗದಲ್ಲಿ ಪೋರ್ಚುಗಲ್ಲಿನ ಮುಖ್ಯ ಪಟ್ಟಣವಾದ ಲಿಸ್ಬನಿನಿಂದ ಪ್ರಯಾಣ ಮಾಡಿ ಇದೇ ತಾ. ಆರಲ್ಲು ಬರ್ಮುಡಾಕ್ಕೆ ಮುಟ್ಟಿರುವರು. ಡ್ಯೂಕರು ಹಡಗದಿಂಬಿದಾಗ ವೆಸ್ಟ್ ಇಂಡೀಸಿನ ಗವರ್ನರ್ ಕಮಾಂಡರು ಇನ್ನೆ ತಂಗಿಯೊಂದಿಗೆ ಜೆವರನ್ನೆದುರ್ಗೊಂಡರು. ಸಾವಿರಾರು ಜನರು ಸೇರಿ ಡ್ಯೂಕರಿಗೆ ಸ್ವಾಗತವಿತ್ತರು

ಕವಿರವೀಂದ್ರರಿಗೆ ಒಕ್ಸ್‌ಫೋರ್ಡಿನ ಮನ್ನಣೆ

ವಿಶ್ವಕವಿ ರವೀಂದ್ರರಿಗೆ ಇಂಗ್ಲೆಂಡಿನ ಬರ್ಮ್ಸ್‌ಫೋರ್ಡ್ ಯೂನಿವರ್ಸಿಟಿಯು ಗೌರವ ಡಾಕ್ಟರ್ ಪದವಿಯನ್ನಿತ್ತು ಸನ್ಮಾನಿಸುವ ಸಮಾರಂಭವು ಇದೇ ತಾ. 7ರಲ್ಲು ಶಾಂತಿನಿಕೇತನದಲ್ಲಿ ಜರಗಿತು. ಹಿಂದುದೇಶದ ಸುಪ್ರೀಮ್ ಕೋರ್ಟಿನ ಚೀಫ್ ಜಸ್ಟಿಸರಾದ ಸರ್. ಮೋರಿಸ್ ಗ್ವಾಯರರು, ಸಾಹಿತ್ಯ ಸಂಬಂಧವಾದ ಡಾಕ್ಟರ್ ಪದವಿಯನ್ನು ಕವಿರವೀಂದ್ರರಿಗಿತ್ತರು. ಕಲ್ಕತ್ತ ಹೈಕೋರ್ಟಿನ ಜಸ್ಟಿಸ್ ಹೆಂಡರ್ಸನ್‌ರು ಕವಿವರ್ಯರ ಯೋಗ್ಯತೆಯನ್ನು ವಿವರಿಸಿ ಮಾತಾಡಿದರು. ಶ್ರೀಗಳಾದ ಸರ್ ರಾಧಾಕೃಷ್ಣನ್, ರಮಾನಂದ ಚಟರ್ಜಿ, ಡಾಕ್ಟರ್ ಶ್ಯಾಮಪ್ರಸಾದ ಮುಖರ್ಜಿ ಮೊದಲಾದ ಅನೇಕ ವಂದಿ ವಿದ್ವಾಂಸರು ಈ ಸಂದರ್ಭದಲ್ಲಿ ಹಾಜರಿದ್ದರು

ಬ್ರಿಟಿಷ್ ಮತ್ತು ಇತರ ಹಡಗುಗಳ ನಷ್ಟ

ಜುಲ್ಯಾ ತಾ. 29ಕ್ಕೆ ಅಂತ್ಯವಾಗುವ ವಾರದಲ್ಲಿ 66, 601 ಘನ ಟನ್ನಿನಷ್ಟರ 18 ಬ್ರಿಟಿಷ್ ಹಡಗುಗಳು ಮುಳುಗಿಸಲ್ಪಟ್ಟವೆ. ಅಗೋಸ್ತು ತಾ. 4ರ ವರೆಗೆ 9,15,000 ಘನ ಟನ್ನು ಜರ್ಮನ್ ಹಡಗವು ಮುಳುಗಿಸಲ್ಪಟ್ಟವೆ. ಇಟಲಿಯ ನಷ್ಟ 2,54000 ಘನ ಟನ್ನು. ಕಳದ 6ಹಪ್ತೆಗಳಲ್ಲಿ 1,367,000 ಘನ ಟನ್ನು ಬ್ರಿಟಿಷ್ ಹಡಗಗಳನ್ನು ಮುಳುಗಿಸಲಾಗಿದೆಯೆಂದು ಜರ್ಮನರು ಪ್ರಕಟಿಸಿರುತ್ತಾರೆ. ಯುದ್ಧವಾರಂಭವಾದಂದಿನಿಂದ ಬ್ರಿಟಿಷರ ನಷ್ಟ ನಷ್ಟವಾಗಿರುವುದಿಲ್ಲ. ಕಳದ 3 ವಾರಗಳಲ್ಲಿ 6,70,321 ಘನ ಟನ್ನು ಬ್ರಿಟಿಷ್ ಹಡಗ ನಷ್ಟವಾಗಿದೆಯೆಂದು ಜರ್ಮನ್ ರೇಡಿಯೋ ಸುದ್ದಿ. ಇದರಿಂದ ಸತ್ಯಾಂಶವನ್ನು ನಾಲ್ಕಡಿ ಹೆಚ್ಚಿಸಿದಂತಾಗಿದೆ. ಜುಲ್ಯಾ ತಾ. 7ರಿಂದ 28ರ ವರೆಗೆ ನಷ್ಟವಾದ ಬ್ರಿಟಿಷ್ ಹಡಗುಗಳು 136,141 ಘನ ಟನ್ನಿನಷ್ಟೆಂದು ಬ್ರಿಟಿಷ್ ನೌಕಾಖಾತೆಯವರು ಪ್ರಕಟಿಸಿರುವರು

REWARD Rs. 500/-

KAMNA SIDHI TALISMAN: In case all your efforts to bring your sweet-heart under your control have proved quite useless, you must try our KAMNA SIDHI TALISMAN once only and see its magnetic effect. Anybody whom you want, however stone-hearted he may be and even hates to talk with you, will surely be obedient by its help. Besides this, the wearer can aquire immense wealth, good health, high fame, son, promotion in service, success in business or any sort of undertaking examination or litigation etc., In short all the ambitions can be achieved by this wonderful and supereme Talisman. Price Rs. 2—8—0, postage extra. Three Talismans Rs. 6—0—0 postage free. Foreigners should remit shillings 5 for one and shillings 12 for three Talismans. Try once. Guaranteed satisfaction.

Rs. 500/- will be awarded to him who proves our Talisman as untrune.

SHRI SAT NTRAYAN JEOTISH ASHRAM (N. U)
HOSHIARPUR. N. W. R. (INDIA.)

Money to Lend.

Loans are granted at competitive rates on Bullion, Gold Ornaments, Government Paper, Goods and produce, Shares & other valuable securities. Enquire of any of our THIRTY SEVEN OFFICES.

RESOURCES OF A CRORE. } CANARA BANK LIMITED. ESTD. 1906.

ವಿಮಾ ಕಂಪೆನಿಗಳ ವರದಿಗಳು.

ದಿ ಏಷಿಯನ್ಸ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:—

ಈ ಕಂಪೆನಿಯ 1939 ನೇ ದಶಂಬರ ತಾ. 31ಕ್ಕೆ ಕಂತ್ಯವಾಗುವ 21ನೇ ವರ್ಷದ ವರದಿಯು ನಮ್ಮ ಪರಿಶೀಲನೆಗೆ ಬಂದಿದೆ. ವರದಿಯ ವರ್ಷದಲ್ಲಿ ರೂ. 97,69,442ರ 6141 ಪೊಲಿಸಿಗಳು ಬಂದಿದ್ದು ರೂ. 78,04,147ರ 4912ನ್ನು ಪೊಲಿಸಿಗಳಾಗಿ ಮಂಜೂರಾತಿ ಮಾಡಲಾಗಿದೆ. ಯುದ್ಧ ಪರಿಸ್ಥಿತಿಯಿಂದಾಗಿ ವ್ಯಾಪಾರ ವಹಿವಾಟುಗಳು ಅಸ್ತವ್ಯಸ್ತವಾದರೂ ಕಂಪೆನಿಯ ಈ ವರ್ಷದ ವಹಿವಾಟು ಕಳದ ವರ್ಷಕ್ಕಿಂತಲೂ ರೂ. 1,30,000ದಷ್ಟು ಅಧಿಕವಾಗಿರುವುದು ವಿಶೇಷ ಸಂಗತಿಯಿದ್ದು ಏಸ್ಯಾನ್ ಕಂಪೆನಿಯ ಯಶಸ್ಸನ್ನೂ ಜನ ವಿಶ್ವಾಸವನ್ನೂ ಹೆಚ್ಚಿಸದಿರಲಾರದು. ಕಳದ 20 ವರ್ಷಗಳಲ್ಲಿ ಈ ಕಂಪೆನಿಯು ಒಟ್ಟು ರೂ. 4,06,09,704-13-3ರ 25,106 ಪೊಲಿಸಿಗಳನ್ನು ಪಡೆದಿರುತ್ತದೆ. ವರದಿಯ ವರ್ಷದಲ್ಲಿ ಪ್ರೀಮಿಯಮ್ ಆದಾಯವು ರೂ. 19,26,993-11-0 ರಿಂದ 20,67,602-5-4 ಕ್ಕೇರಿದೆ. ಬಡ್ಡಿ ಡಿವಿಡೆಂಡ್ ಮೊದಲಾದುವುಗಳಿಂದ ದೊರೆವ ಆದಾಯ ಕೂಡಾ ಕಳದ ವರ್ಷ ರೂ. 3,07,307-8-3 ಇದ್ದುದು ಈ ವರ್ಷ ರೂ. 3,67,076-15-5 ಆಗಿದೆ. ಕ್ಲೈಮುಗಳು ಕೂಡಾ ಕಳದ ವರ್ಷ 1ಕ್ಕಿಂತ ವರದಿಯ ವರ್ಷದಲ್ಲಿ ಕಡಿಮೆಯಾಗಿವೆ. ಕಂಪೆನಿಯ ಜೀವವಿಮಾ ಫಂಡು ಕಳದ ವರ್ಷಾಂತ್ಯದಲ್ಲಿ ರೂ. 67,66,528-3-10 ಇದ್ದು ವರದಿಯ ವರ್ಷಾಂತ್ಯದಲ್ಲಿ ರೂ.76, 53,460-8-8 ಆಗಿದೆ. ಅಂದರೆ ರೂ. 8,86,932-4-10 ರಷ್ಟು ಅಧಿಕವಾಗಿದೆ. ವರದಿಯ ವರ್ಷದಲ್ಲಿ ಕಂಪೆನಿಯು ತೆರಿಗೆ ರಹಿತವಾಗಿ ಸೇಕಡ 6½ರಷ್ಟರ ಡಿವಿಡೆಂಡ್ ಹಂಚಿದೆ. ಈ ವರ್ಷ ಕಂಪೆನಿಯು ತನ್ನ ವಾಲು ಭಂಡವಾಳದ ಉಳಿದ ಪಾಲುಗಳನ್ನು 59,277 ಪಾಲುಗಳಾಗಿ ಹೊರಡಿಸಿದಾಗ ಮೊದಲಿನ ಪಾಲುದಾರರು ಮತ್ತು ಕಂಪೆನಿಯ ಪೋಲಿಸ್‌ದಾರರೇ ಅವನ್ನೆಲ್ಲಾ ತೆಗೆದುಕೊಂಡು ಹೊರಗಿನವರ ಪಾಲು ಅರ್ಜಿಗಳನ್ನು ನಿರಾಕರಿಸಬೇಕಾಗಿ ಬಂತು. ಈ ಹೊಸ ಪಾಲುಗಳು ಮಂಜೂರಾತಿ ಹೊಂದಿದರೆ ಕಂಪೆನಿಯು ಪಾವತಿಸಿದ ಪಾಲುಭಂಡವಾಳವು ರೂ. 5 ಲಕ್ಷವಾಗುವುದು. ತನ್ನ ಸ್ಥಿರವಾದ ಅಭಿವೃದ್ಧಿಯನ್ನು ಉಳಿಸಿಕೊಳ್ಳುವುದೇ ಕಷ್ಟವಾದ ಈ ವಿಪತ್ಕಾಲ ವರ್ಷದಲ್ಲಿ ಸರ್ವವಿಧದಲ್ಲಿಯೂ ಕಳದ ವರ್ಷಕ್ಕಿಂತ ಹೆಚ್ಚಿನ ಶ್ರೇಯಸ್ಸಾಧಿಸಿರುವ ಏಸ್ಯಾನ್ ಕಂಪೆನಿಯ ಆಡಳಿತ ಮಂಡಳಿಯು ಅಭಿನಂದನೀಯವಿದೆ ಕಂಪೆನಿಯು ಇದೇ ರೀತಿ ಉನ್ನತಿ ಹೊಂದಲೆಂದು ಹಾರೈಸುತ್ತೇವೆ

ದಿ. ಬೋಂಬೇ ಲೈಫ್ ಎಶ್ಯೂರೆನ್ಸ್ ಕೋ ಲಿಮಿಟೆಡ್:—

ದಿವಂಬರಕ್ಕೆ ಅಂತ್ಯವಾಗುವ 1939ನೇ ಇಸ್ವಿಯ ಈ ಕಂಪೆನಿಯ ವರದಿಯನ್ನು ನಾವೆಸಂತೋಷದಿಂದ ಸ್ವೀಕರಿಸುತ್ತೇನೆ. ವರದಿಯ ವರ್ಷದಲ್ಲಿ ರೂ. 1,68,40,000 ನೊತ್ತದ 8662 ಪೊಲಿಸಿಗಳನ್ನು ಕಂಪೆನಿಯು ಪಡೆದಿದೆ. ಕಳದ ವರ್ಷ ಬಾಕಿ ಉಳದ ಕೆಲವು ಸೇರಿ ಇವುಗಳಲ್ಲಿ ರೂ. 1,12,02,050ರ 7162 ಪೊಲಿಸಿಗಳು ಮಂಜೂರಾತಿ ಹೊಂದಿದೆ. ಇದರ ಫಲಿತಾಂಶವಾಗಿ ಕಂಪೆನಿಗೆ 7,48,491-7-0 ರಷ್ಟರ ವಾರ್ಷಿಕ ಪ್ರೀಮಿಯಮ್ ಆದಾಯ ದೊರೆಯತ್ತಾಗಿದೆ. ಈ ವರ್ಷ ರೂ. 6,71,216ರಷ್ಟರ 373 ಕ್ಲೈಮುಗಳನ್ನು ಕೊಡಲಾಗಿದೆ. ಇವುಗಳಲ್ಲಿ 134 ಪರಿಪಕ್ವವಾದ ಕ್ಲೈಮುಗಳು. ದೈವಿಕ್ಕರರು ಸೇಕಡ 15ಷ್ಟರ ಡಿವಿಡೆಂಡ್ ಮತ್ತು ಸೇಕಡ 10ಷ್ಟರ ಬೋನಸನ್ನು ಈ ವರ್ಷ ಕೊಡಬೇಕೆಂದು ಶಿಫಾರಸು ಮಾಡಿರುತ್ತಾರೆ. ಯುದ್ಧಗೊಂದಲದ ಪರಿಸ್ಥಿತಿಯ ನಿಮಿತ್ತ ಹಲವು ಪ್ರಥಮ ಶ್ರೇಣಿಯ ವಿಮಾ ಕಂಪೆನಿಗಳ ವಹಿವಾಟುಗಳು ಬಹಳವಾಗಿ ಬಿದ್ದು ಹೋಗಿರುವುದಾದರೂ ಬೋಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿಯು ತನ್ನ ಅಭಿವೃದ್ಧಿಯನ್ನು ಸ್ಥಿರವಾಗಿರಿಸಿರುವುದೆಂಬುದು ಅತ್ಯಭಿನಂದನೀಯ ವಿಷಯ. 1938ರಲ್ಲಿ ಕಂಪೆನಿಯು ಒಟ್ಟು ಪ್ರೀಮಿಯಮ್ ಆದಾಯವು ರೂ. 31,85,000 ಇದ್ದುದು 1939ರಲ್ಲಿ ರೂ. 37,55,000 ಕ್ಕೇರಿರುತ್ತದೆ ಬಡ್ಡಿ, ಡಿವಿಡೆಂಡ್, ಮೊದಲಾದುವುಗಳಿಂದ ಕಂಪೆನಿಗೆ ದೊರೆಯುವ ವರ್ಷ ಮುನಾವೆಯು 1938ರಲ್ಲಿ ರೂ 4,65,000 ಇದ್ದುದು 1939ರಲ್ಲಿ ರೂ. 5,69,000ಕ್ಕೆ ಹೆಚ್ಚಿದೆ. ಕಂಪೆನಿಯ ಜೀವವಿಮಾ ಫಂಡು ರೂ. 193 ಲಕ್ಷವಾಗಿದೆ. ಆದಾಯದ ಪ್ರಮಾಣವು ಪರವಿಯ ವರ್ಷದಲ್ಲಿ ಸೇಕಡ 1·31ರಷ್ಟು ಕಡಿಮೆಯಾದಲ್ಲಿಟ್ಟಿವೆ. ಈ ನಿಚ್ಚವನ್ನು ಇನ್ನೂ ಕಡಿಮೆಯಾಡಬೇಕೆಂದು ಪೈರೆಕ್ಟರರು ಪ್ರಯತ್ನಿಸಿರುವುದು ಸ್ತುತ್ಯವಿದೆ. ವರದಿಯ ವರ್ಷದಲ್ಲಿ ಕಂಪೆನಿಯ ತನ್ನ ಎಂಪಿನೇತರ ಸರ್ವತೋಮುಖವಾದ ಅಭಿವೃದ್ಧಿಯ ಪ್ರಮಾಣವನ್ನು ಎತ್ತಿ ಹಿಡಿದಿರುತ್ತದೆ. ಬಹಳ ಜನ ಪ್ರಿಯವಾದ ಬೋಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿಯು ಒಂದೆಯಿವರಲ್ಲಿ ಸಂದೇಹವಿಲ್ಲ. ಇವಕ್ಕೆ ಆದರೆ ಮದ್ರಾಜ್ ಶಾಖೆಯ ಸೆಕ್ರೆಟರಿಗಳು ಮತ್ತು ಬೋಂಬಾಯಿ ಪಟ್ಟಣ ಮತ್ತು ಅಸುಪಾಸಿನ ಬೇಫ್ ಏಜಂಟರಾದ ಉಡುಪಿಯ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಇವರ ಪರಿಶ್ರಮವೂ ಕಾರಣವಾಗಿರಬೇಕೆಂಬುದು ಅಭಿಪ್ರಾಯದ ವಿಷಯ. ಈ ಕಂಪೆನಿಗೂ ಶ್ರೀ ಕೊಚ್ಚಿಕಾರ ಸಹೋದರರಿಗೂ ನಾವು ಎಂದಿಗಿಂತಲೂ ಹೆಚ್ಚಿನ ಯಶಸ್ಸನ್ನು ಕೋರುತ್ತೇವೆ.

ಮೈಸೂರು ಮಹಾರಾಜರ ಪಾಸಗಿ ಜೀವನದ ಕೆಲವು ಕೆತೆಗಳು

(೫ನೇ ಪುಟದಿಂದ

ಪತ್ರಿಕೆಗಳನ್ನೆಲ್ಲಾ ಚೆನ್ನಾಗಿ ತೊಳೆದು ಜೋಡಿಸಿಟ್ಟರು. "ನೀವು ಶ್ರೀಮಂತರು, ನಿಮಗೆ ಇಂತಹ ಕೆಲಸಮಾಡುವ ಅಭ್ಯಾಸವಿಲ್ಲೆಂ"ಬ ಮಹಾರಾಜರ ಮಾತು ಅದೆಷ್ಟು ಮಾರ್ಮಿಕವಾದುದು! ಯಾವಾಗಲೂ ಆಲಂಕಾರಮಾರ್ತಿಗಳೇ ಆಗಿದ್ದು ಪರಾವಲಂಬಿಗಳೂ ಪರೋಪಜೀವಿಗಳೂ ಆಗಿರುವ ಶ್ರೀಮಂತ ಮಹಾಶಯರುಗಳು ಮೈಸೂರು ಮಹಾರಾಜರ ಮಾದರಿಯಿಂದ ಪಾಠಕಲಿಯುವರೇ! ನಿಜವಾದ ದೊಡ್ಡ ಮನುಷ್ಯರೆಂದರೆ ಶ್ರೀಕೃಷ್ಣ ಮಹಾರಾಜ ಒಡೆಯರು.

ಶ್ರೀ ನಲ್ವಡಿ ಕೃಷ್ಣರಾಜ ಒಡೆಯರು ಮಾದರಿ ಅರಸು, ಮಾತ್ರವಲ್ಲದೆ ಮಾದರಿ ವ್ಯಕ್ತಿಯೆಂಬುದನ್ನು ಮೇಲಿನ ಕತೆಗಳು ವಿದಿತಗೊಳಿಸುವವು. ಮೈಸೂರು ಎಲ್ಲಾ ಮಾರ್ಗದಲ್ಲೂ ಮುಂದುವರಿಯಬೇಕೆಂಬುದೇ ಅವರ ಹಿರಿಯ ಹಂಬಲು ಮೈಸೂರಿಗೆ ಬೇಕಾದ ಎಲ್ಲಾ ಸಾಮಾನುಗಳನ್ನು ಮೈಸೂರಲ್ಲೇ ತಯಾರು ಮಾಡುವ ಕಾಲಬರಬೇಕೆಂದು ಅವರು ಹಾತೊರೆಯುತ್ತಿದ್ದರು. ತಮ್ಮ ನಿತ್ಯೋಪಯೋಗಕ್ಕೆ ಬೇಕಾದ ಸಾಮಾನುಗಳನ್ನು ಹೊರಗಿನಿಂದ ತರಿಸಿಕೊಳ್ಳುತ್ತಿದ್ದರೆ ಅಂತಹವನ್ನು ಮೈಸೂರಲ್ಲಿಯೇ ತಯಾರಿಸುವಂತೆ ಮಹಾರಾಜರು ಕುಂಟಾ ಶ್ರಮ ಸಹಿಸುತ್ತಿದ್ದರು. ಮೈಸೂರು ಶ್ರೀ ಕೃಷ್ಣರಾಜೇಂದ್ರ ಗಿರಣಿಗಳಲ್ಲಿ ಅತ್ಯುತ್ತಮ ವರ್ಗದ ರೇಷ್ಮೆ ಬಟ್ಟೆಗಳನ್ನು ನೇಯುವಂತೆ ಪ್ರೇರೇಪಿಸಿದವರು ಮಹಾರಾಜರು. ಮೈಸೂರಲ್ಲಿ ತಯಾರಾಗುತ್ತಿರುವ ಪ್ರತಿಯೊಂದು ಉತ್ತಮವಸ್ತುವಿನ ನಿರ್ಮಾಣದ ಇತಿಹಾಸದಲ್ಲೂ ಮಹಾರಾಜರ ಪ್ರಭಾವ ಇದ್ದೇ ಇರುವುದು. ಆಧುನಿಕ ಮೈಸೂರಿನ ನಿರ್ಮಾಣಕರ್ತೃ ಅವರೆಂದು ನಿಸ್ಸಂದೇಹವಾಗಿ ಹೇಳಬಹುದು.

1940ನೇ ಇಸ್ವಿ ಜುಲ್ಯಾ ತಾರೀಖು 29ನೇ ಸೋಮವಾರ ದಿನಸದ

ಮಂಗಳೂರು ಸೇಟಿಯ ದವಸ ಧಾನ್ಯ ನಗ್ಗೆರೆಗಳ ಧಾರಣೆ

		ರಿಂದ	ತನಕ
ಆಕ್ಕಿ ಆಲ್ಸಲ್ ತರದ ಗುಡ್ಡು ಮುಡಿಗೆ	...	4-12—0	4-14—0
" ಮುಯಿಂ ತರದ ಗುಡ್ಡು ಮುಡಿಗೆ	...	4-10—0	"
" ಆಲ್ಸಲ್ ತರದ ಸಣ್ಣಿ ಮುಡಿಗೆ	...	4- 9—0	4-10—0
" ಮುಯಿಂ "	...	4—5—0	4—7—0
ತೆಂಗಿನಕಾಯಿ ಸುಲಿದದ್ದು 1000ಕ್ಕೆ	...	35—0—0	40—0—0
" ಸಿಪ್ಪೆಯದ್ದದ್ದು "	...	37—8—0	42—8—0
(a) ಕೊಬ್ಬರಿ ಆಫೀಸು ಖಂಡಿಗೆ	...	47—8—0	...
(b) " ದೀಪ ಮತ್ತು ಡಿಲ್‌ಪರಂಡಾ	...	...	...
ತೆಂಗಿನ ಎಣ್ಣೆ ಮಣಕ್ಕೆ	...	3-10—0	...
ಸಿಪ್ಪೆಯದ್ದ ಆಡಿಕೆ 1000ಕ್ಕೆ	...	4—0—0	4—4—0
ಗೇರುಬೀಜ ಮುಡಿಗೆ	...	2—8—0	2-12—0
ಕಬ್ಬಿನ ಬೆಲ್ಲ ಖಂಡಿಗೆ	...	35—0—0	42—0—0
ಒಳ್ಳೇ ಮೆಣಸು ಹಂಡ್ರದ ಪೌಟಿಗೆ	...	13—8—0	14—0—0
(a) ಬೈಳ್ಳಪೆಟಿಯ ಹೊಗೆಸೊಪ್ಪು ಪ.ಡಣಕ್ಕೆ	...	4—8—0	6—8—0
(b) ಹುಡಿದ್ದು ಹೊಗೆಸೊಪ್ಪು	...	7—8—0	9—8—0
(a) ಸ್ಮೈರೂರ್ ಬಿಲಕ್ಕೆ	...	40 0—0	45-0—0
(b) ಕೊಡಗಿನ ಬಿಲಕ್ಕೆ	...	37—0—0	39—0—0
(a) ಕುಮಟೆಯ ಮೆಣಸು ಖಂಡಿಗೆ	...	85—0—0	95—0—0
(b) ಕಾರವಿಗೀಡಿಯ ಮೆಣಸು ಮಣಕ್ಕೆ	...	2-12—0	...
(c) ಮಂಗ್ಳೂರು "	...	4—0—0	4—6—0
ಅವಕ ಸುಲಿದದ್ದು ಖಂಡಿಗೆ	...	90—0—0	112—0—0

ನೋ ಟೀ ಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 33/1938

R. P. E. 1/1940

1. ನಾಡಿ ಅನಂತಯ್ಯಾಳ ಸಬ್ಬಾಯ ಸ್ಥಾಳರ ಮಗ, ಪಾಂಡೇಶ್ವರ ಗ್ರಾಮವಾದ ಸ್ಥಾಳನೆವಾಲಿಯವನಿ. 2. ಪ್ರತಿವಾದಿ, 4ನೇ ಪ್ರತಿವಾದಿ ವೆಂಕಟರಿಂಗ ನಾವಡರ ಮಗ— ರಾಮಚಂದ್ರ ನಾವಡರ ಮಗ— ಕುಟುಂಬ ಕಸಬೆವಲಿಯರುವನ.

14ನೇ ಪ್ರತಿವಾದಿ ನರಸಿಂಹ ಭಟ್ಟ— ಕುಪ್ಪಿ ಭಟ್ಟರ ಮಗ— ಶ್ರೀನಿವಾಸ ಕಸಬೆಯಲ್ಲಿ ಶ್ರೀಂಗೇರಿ ವಾಸವಲಿಯರುವನ.

ವಾದಿಯು ಮೇಲ್ಕಂಡ ಪ್ರತಿವಾದಿಯ ಮಗ್ಗೆರೆಯ ಮೇಲೆ ಪಡೆದ ಮೇಲ್ಕಂಡ ದಿಕ್ಕಿಯ ಬಗ್ಗೆ ನಡಿಸಿದ ಮೇಲ್ಕಂಡ ಅಮಲ್ದಾರಿಯ ಫ್ಲಿ ದಿಕ್ಕಿಯಲ್ಲಿ ಕಾಣಿಸಿದ ಸ್ಥಿರ ಆಸ್ತಿಗಳನ್ನು ಏಲಂ ಮಾಮವರಿ ಏಲಂ ಇತ್ತು ಪಾಲು ಪಾಟ್ಟುಪಡಿಯಾನ್ನೆ. ಸದ್ರಿ ಏಲಂ ಇತ್ತುಕಾರಿನ ರಸತಿಗಳನ್ನು ಸರ್ಕಾರಿಯವರಿಂದ ತಾ. 22-8.40 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಪ್ಪಿಗೆ ಇಟ್ಟಿವೆ. ಆ ಕುರಿತು ಆಕ್ಷೇಪವಿಲ್ಲದವರು ಆ ತಾರೀಕಿಗೆ ಹಗಲು 11ಗಂಟೆಗೆ ಕೋರ್ಟಿನ ಮುಂದೆ ಹಾಜ್ರಾಗಿ ಕೆಲಸ ಕೈದ್ದು. ಇದಕ್ಕೆ ತಪ್ಪಿದರೆ ಸದ್ರಿ ಆಮಲ್ದಾರಿಯ ಫ್ಲಿ ಎಕ್ಸ್‌ಪಾರ್ಟಿಯಾಗಿ ಮಾಡಿ ಕೊಟ್ಟ ಆದೇಶವು ಮುಂದೆ ಹುಕ್ಕುಂ ಜಾರುತ್ತದೆ.

ಕುಂದಾಪುರ } 2-8-40 } K Raghunath Shanbhag. ಪಾಪಿ ಕಡೆ ವಕೀಲ

Imperial Bank of India, MANGALORE.

NOTICE.

Notice is hereby given that the following gold ornaments of the weights specified against each will be sold by public auction at the Imperial Bank of India Mangalore. on Saturday the 7th September 1940 at 3-30 P. M. (Ornaments relating to Udipi Pay Office Gold Loan Nos. 2/140 & 4/68).

Loan No.	Ornaments.	Tolas
2/140	1 Bangle	15/16
4/68	1 Chain	6

Date 19-7-40 } (Sd.) T. L. I. Bean. Agent



ಭೂಪುಸಿಗೆ ಬಂದಾಗ

ನಿಮಗೆ ಜೇಕಾಗುವ ಯಾವತ್ತೂ ವಿಧವ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವಿವಿಧ ಖಾತೈಗಳೂ ಸಾಮಾನ್ಯಿಗಳು ಒಂದೇ ಕಡೆಯಲ್ಲಿ ಸಿಗಬೇಕಾದರೆ

ರಥಬೀದಿಯ

ಕಲ್ಲಂಜೆ ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.

ಆಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

A BANK OF INTEREST

FORMS OF INTEREST MAY BE MANY
WAYS OF INTEREST MAY BE VARIOUS;
BUT
THE OBJECT OF INTEREST IS ONLY ONE.

The popularity of an institution is attributable to the interest taken by all in it and that is what "CORPORATION" can rightly boast of.

The Canara Banking Corporation Limited.
(Incorporated in British India)
Estd: 1906.

ಉಡುಪಿ, ಗುರುವಾರ ತಾ. ೧೫-೮-೧೯೪೦

ವೈಸರಾಯರ ಹೇಳಿಕೆ

ಹಿಂದು ದೇಶದ ಸ್ವಾತಂತ್ರ್ಯದ ಕುರಿತು ವೈಸರಾಯರು ಕಳೆದ ತಾ. 7ರಲ್ಲಿ ಹೊರಡಿಸಿರುವ ಹೇಳಿಕೆಯು ಕೆಲವುಬ್ಬನ ರಿಯಾಯಿತಿಗಳನ್ನೊಳಗೊಂಡಿದೆ. ಬ್ರಿಟಿಷ್ ಸರಕಾರವು ಹಿಂದಿಗಿಂತ ಒಂದು ಹೆಜ್ಜೆ ಮುಂದಿಟ್ಟಿದೆ. ಕೇಂದ್ರ ಎಗ್ಜಿಕ್ಯೂಟಿವ್ ಕೌನ್ಸಿಲಿನ ವ್ಯಾಪಕ ನುತ್ತು ವಾರ್ ಎ ಡ್ವೈಸರಿ ಕೌನ್ಸಿಲ್ (ಯುದ್ಧ ಸಲಹೆಗಾರ ಮಂಡಲಿ) ಸ್ಥಾಪನೆಯೆಂಬುದು ಹಳೆಯ ಪಾಪಜೇ. ಬ್ರಿಟಿಷ್ ಸಾಮ್ರಾಜ್ಯದೊಂದಿಗೆ ಸಮಾನತೆಯಿಂದ ಮತ್ತು ಸ್ವತಂತ್ರವಾಗಿರುವ ರಾಜಕೀಯ ಘಟನೆಯನ್ನು ತಯಾರಿಸುವ ಹಕ್ಕನ್ನು ಹಿಂದೀಯರಿಗೀಯಲಾಗಿದೆ. 1935ರ ಇಂಡಿಯಾ ಲಕ್ಕು ಮೂಲಿಗುಂಬಾಗಿದೆ. ಜಾತೀಯ ಪ್ರಶ್ನೆಯನ್ನು ಹಿಂದೀಯರು ತನ್ಮೂಲಕ ಇತ್ಯರ್ಥಮಾಡಿಕೊಳ್ಳದೆ ಹೆಚ್ಚಿನ ರಾಜಕೀಯ ಸ್ವಾತಂತ್ರ್ಯವೀಯುವ ಕುರಿತು ವಿಚಾರಿಸಲು ಸಾಧ್ಯವಿಲ್ಲೆಂಬ ಅಗ್ರಹವನ್ನು ಬಿಟ್ಟುಬಿಡಲಾಗಿದೆ. ಯುದ್ಧವು ಮುಗಿದ ಕೂಡಲೆ ಆ ದಸ್ಸು ಬೇಗನೆ ಹಿಂದೀ ಪ್ರತಿನಿಧಿಗಳ ಕಮಿಟಿಯೊಂದನ್ನು ನೇಮಿಸಿ ರಾಜಕೀಯ ಘಟನೆಯೊಂದನ್ನೆಸರು ತಯಾರಿಸುವಂತೆ ಸರ್ವ ಸಹಾಯವನ್ನೂ ಮಾಡುವ ಆಶ್ವಾಸನೆ ಕೊಡಲ್ಪಟ್ಟಿದೆ. ಮಾತ್ರವಲ್ಲದೆ ಈ ಘಟನೆಯ ತತ್ವ ಮತ್ತು ರೂಪರೇಖೆಯನ್ನು ಜೇತದ ಬೇರೆ ಬೇರೆ ಪಕ್ಷಗಳ ಪ್ರತಿನಿಧಿಗಳು ಪರಸ್ಪರ ಸಹಕರಿಸಿ ನಿರ್ಣೈಸುವಂತೆ ಯಥಾರ್ಥ ಪ್ರಯತ್ನ ನಡಿಸಲ್ಪಡುತ್ತದೆ. ಯುದ್ಧ ಮುಗಿದ ಕೂಡಲೆ ಸಾಧ್ಯವಾದಷ್ಟು ಶೀಘ್ರವಾಗಿ ಡೊಮಿನಿಯನ್ ಸ್ಟೇಟನ್ನು ಕೊಡಲಾಗುತ್ತದೆ ಪ್ರಾಂತದ ಲ್ಲಿ ಕಾಂಗ್ರೆಸ್ ಮಂತ್ರಿಗಳು ಪುನಃ ಅಧಿಕಾರಕ್ಕೆ ಬರಲು ಅಕ್ಷೇಪವಿಲ್ಲ. ಮಿ ಜಿನ್ನರ ಪಾಕಿಸ್ತಾನ ಯೋಜನೆಯು ಎಷೊಲಿಗೊತ್ತಲ್ಪಟ್ಟಿದೆ. ಪ್ರಾಂತಗಳಲ್ಲಿ ಎಲ್ಲಾ ಪಕ್ಷಗಳ ಸಂಯುಕ್ತ ಮಂತ್ರಿ ಮಂಡಲಗಳು ಸ್ಥಾಪಿಸಲ್ಪಡಬೇಕೆಂಬ ಅಭಿಪ್ರಾಯವನ್ನೂ ಬಿಟ್ಟುಬಿಡಲಾಗಿದೆ.

ಸರಕಾರವು ಕೆಲವುಬ್ಬಗೆ ಹಿಂದೀಜನ ಮತವನ್ನು ಮನ್ನಿಸಿರುತ್ತದೆ. ಆದರೆ ಲಂಡನಿನ ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆಯೇ ಟೀಕಿಸಿರುವಂತೆ, ಅದು ತೋರಿಬರುವ ರಿಯಾಯಿತಿಗಳು ನಿರಾಕಾಜನಕವಿವೆ. ಇನ್ನೂ ಅದು ಹಿಂದಿನ ಮನೋವೃತ್ತಿ ಗೇನೇ ಕಟ್ಟುಬಿದ್ದಿದೆ. ಅಧಿಕಾರವನ್ನು ಬಿಟ್ಟು ಕೊಡುವ ಮನಸ್ಸೇ ಅದಕ್ಕಿರುವಂತಿಲ್ಲ. ಆದುದರಿಂದ ಒಂದು ಕೈಯಲ್ಲಿ ಅಧಿಕಾರಕೊಡುವ ನಟನೆಮಾಡಿ ಮತ್ತೊಂದು ಕೈಯಿಂದದನ್ನು ಕಿತ್ತುಕೊಂಡಿರುತ್ತದೆ. ಕೇಂದ್ರ ಎಗ್ಜಿಕ್ಯೂಟಿವ್ ಕಮಿಟಿಯ ವ್ಯಾಪನೆಯಿಂದ ಯಾವ ಅಧಿಕಾರವನ್ನೂ ಜನ ಪ್ರತಿನಿಧಿಗಳಿಗೆ ಬಿಟ್ಟುಕೊಟ್ಟಂತಾಗುವುದಿಲ್ಲ ಅಂಗ್ಲೇಯ ಎಗ್ಜಿಕ್ಯೂಟಿವ್ ಕೌನ್ಸಿಲರರ ಬದಲಿಗೆ ಹಿಂದೀಯರು ನೇಮಿಸಲ್ಪಟ್ಟರೆ ರಾಜಕೀಯ ಅಧಿಕಾರವನ್ನೇನಾದರೂ ಕೊಟ್ಟಂತಾಗುವುದಿಲ್ಲ. ಕೇಂದ್ರಾಡಳಿತದಲ್ಲಿ ಪ್ರಜಾ ಜವಾಬ್ದಾರಿ ರಾಜ್ಯ ಭಾರವನ್ನು ಸ್ಥಾಪಿಸಲಿತ್ತಿಸಿಲ್ಲಂತಾಗುವುದಿಲ್ಲ. ವೈಸರಾಯರ ಸರ್ವಾಧಿಕಾರವು ಇದ್ದ ಕ್ಕಿದ್ದಂತೆಯೇ ಇರುವುದು. ಎಗ್ಜಿಕ್ಯೂಟಿವ್ ಕೌನ್ಸಿಲಿನ ಎಲ್ಲಾ ನೇಂಬರರು ಹಿಂದೀಯರಾದರೂ ವೈಸರಾಯರಿಗೆ ತನ್ನಿಚ್ಛಾನುಸಾರ ನಡೆಯಲು ಯಾವ ಆತಂಕವೂ ಇರುವುದಿಲ್ಲ. ಯುದ್ಧ ಸಲಹೆಗಾರ ಮಂಡಲಿಯೆಂಬುದು, ಹಿಂದೀಯರ ಸಂಪೂರ್ಣ ಸಹಕಾರ ಪಡೆದೇ ಯುದ್ಧ ಸಿದ್ಧತೆಗಳೆಲ್ಲಾ ನಡೆಯುವುದೆಂದು ಲೋಕದ ಕಣ್ಣಿಗೆ ಮಣ್ಣುಣ್ಣಾಕುವ ಉಪಾಯವಲ್ಲದೆ ಅದಕ್ಕೆ ನಿಜವಾದ ಅಧಿಕಾರವೇನೂ ಇರುವುದಿಲ್ಲ. ಬ್ರಿಟಿಷ್ ಸರಕಾರವು ಈ ಸಲವೂ ಹಿಂದು ದೇಶದ ಅಲ್ಪಸಂಖ್ಯಾತರಿಗೆ ವರ ಬೆನ್ನು ಚಪ್ಪರಿಸಲು ಮರೆತಿರುವುದಿಲ್ಲ. ಈ ಸಂದರ್ಭದಲ್ಲಿ ಅದರ ಅವಶ್ಯಕತೆಯೇನಿತ್ತೋ ತಿಳಿಯದು ಭಾರತ ರಾಷ್ಟ್ರಜೀವನದ ಯಾವ ದಾದರೊಂದು ದೊಡ್ಡ ಪಂಗಡದ ಬೆಂಬಲ ದೊರೆಯದಿದ್ದ ಪಕ್ಷದಲ್ಲಿ ಅಧಿಕಾರವನ್ನು ಯಾವ ಸರಕಾರಕ್ಕಾದರೂ ಇಂಗ್ಲೆಂಡು ಬಿಟ್ಟುಕೊಡಲು ಕಯಾರಿಲ್ಲ. ಅಂದರೆ ನಾಳೆ ಕಾಂಗ್ರೆಸಿನವರು ರಾಜ್ಯಭಾರ ನಡೆಸುವಂತಾದರೆ, ಮುಸ್ಲಿಮ್ ಲೀಗಿನವರಾಗಲಿ, ದೇಶೀಯ ಸಂಸ್ಥಾನಾಧಿಪತಿಗಳಾಗಲಿ, ಯುರೋಪಿಯನ್ನರಾಗಲಿ ಆಕ್ಷೇಪಿಸಿ, ಕಾಂಗ್ರೆಸ್ ಪಕ್ಷದ ಬೇಲೆ ತನ್ಮೆ ವಿಶ್ವಾಸವಿಲ್ಲೆಂದು ಹೇಳಿದರೆ ಬ್ರಿಟಿಷ್ ಸರಕಾರವು ಅಡಳಿತಾಧಿಕಾರವನ್ನೀಯಲಾರದು. ವಿಭಾಗಿಸಿ ಆಳುವ ಹಳೆಯ ಆಟವನ್ನು ಇನ್ನಾದರೂ ಬ್ರಿಟಿಷ್ ಸರಕಾರಕ್ಕೆ ಬಿಟ್ಟುಬಿಡಲು ಮನಸ್ಸಿಸಿರುವಂತಿಲ್ಲ. ಇದರಿಂದ ಯಾವುದಾದರೊಂದು ಮುಖ್ಯ ಅಲ್ಪ ಸಂಖ್ಯಾತ ಸಮಾಜ ಅಥವಾ ಪಕ್ಷವು ಹಿಂದೀ ಸ್ವಾತಂತ್ರ್ಯಕ್ಕೆ ತಡೆಹಾಕಬಹುದಾಗಿದೆ ಯಾರೆಲ್ಲದಿದ್ದರೂ ದೇಶೀಯ ಸಂಸ್ಥಾನಾಧಿಪತಿಗಳು ಬ್ರಿಟಿಷ್ ಸರಕಾರದ ಹಸ್ತಕರಾಗಿ ನಡೆಯುವರೆಂಬ-ನರಲ್ಲಿ ಸಂದೇಹವೇ ಇಲ್ಲ. ಸಾವಂತ ಸ್ವರಾಜ್ಯವೀಯುವಾಗಲೂ, ಹಿಂದು ದೇಶಕ್ಕೂ ಇಂಗ್ಲೆಂಡಿಗೂ ಇದ್ದ ದೀರ್ಘಕಾಲದ ಸಂಬಂಧದಿಂದ ಬ್ರಿಟಿಷ್ ಸರಕಾರವೆ ಹೆಗಲಮೇಲೆ ಬಿದ್ದಿರುವ ಜವಾಬ್ದಾರಿಯನ್ನು ಎತ್ತು ದೇಶದ ಶಾಂತಿ ಮತ್ತು ಕ್ಷೇಮದ ಕಡೆಗೆ ದೃಷ್ಟಿ ಇಟ್ಟುಕೊಳ್ಳಲಾಗುವುದೆಂಬ ಶರತ್ತಿದೆ ಇದು ಅತಿ ವ್ಯಾಪಕವಿದ್ದು ಏನನ್ನಾದರೂ ಒಳಗೊಳ್ಳಬಹುದು

ವೈಸರಾಯರ ಸ್ಟೇಟ್‌ಮೆಂಟು ಹೆಲವು ವಿಷಯಗಳನ್ನು ಸ್ಪಷ್ಟಪಡಿಸಿರುವುದಿಲ್ಲ. ಹೊಸತಾಗಿ ನೇಮಿಸಲ್ಪಡುವ ಎಗ್ಜಿಕ್ಯೂಟಿವ್ ಕೌನ್ಸಿಲ್ ಮೆಂಬರರೆಷ್ಟು ಮಂದಿ? ಅವರ ಅಧಿಕಾರ ಮತ್ತು ಜವಾಬ್ದಾರಿಗಳೇನು? ಅವರಿಗೂ ವೈಸರಾಯರಿಗೂ ಇರುವ ಸಂಬಂಧ ಎಂತಹದು? ಹಿಂದೀ ರಾಜಕೀಯ ಘಟನೆಯನ್ನು ತಯಾರಿಸಲು ನೇಮಿಸಲ್ಪಡುವ ಕಮಿಟಿಯು ಯಾವ ರೀತಿಯಲ್ಲಿ ರಚಿಸಲ್ಪಡುವುದು? ಚುನಾವಣೆ ಮೂಲಕವೆ? ನೇಮಿಸಲ್ಪಡುವುದೇ? ಈ ಕಮಿಟಿಯು ತಯಾರಿಸಿದ ರಾಜಕೀಯ ಘಟನೆಯನ್ನು ಬ್ರಿಟಿಷ್ ಪಾರ್ಲಿಮೆಂಟು ಸಂಪೂರ್ಣವಾಗಿ ಸ್ವೀಕರಿಸುವುದೇ? ಅಥವಾ ಅದು ಇಂಗ್ಲೆಂಡಿನ ಬದಲಿಗೆ ಹಿಂದು ದೇಶದ ರೌಂಡ್‌ಟೇಬ್ಲ್ ಪರಿಷತ್ತಿನಂತಾಗುವುದೆ?

ವೈಸರಾಯರ ಹೇಳಿಕೆಯೇ ಸರಕಾರದ ಕೊನೆಯ ರಿಯಾಯಿತಿ ಇದ್ದು ಅದರಲ್ಲಿ ಇನ್ನು ಮುಂದೇನೂ ಬದಲಾವಣೆಮಾಡಲು ಸಾಧ್ಯವಾಗದಿದ್ದರೆ, ಬ್ರಿಟಿಷ್ ಸರಕಾರವು ಕಾಂಗ್ರೆಸ್ಸಿನ ಸಹಕಾರವನ್ನು ಕಳಕೊಳ್ಳುವುದೆಂಬುದು ನಿಶ್ಚಯ ಪಾತ್ರವಲ್ಲದೆ ಕಾಂಗ್ರೆಸು ಬೇಗನೆ ಯಾವುದಾದರೊಂದು ರೀತಿಯ ಸವಿನಯ ಕಾಯಿದೆ ಭಂಗ ಚಳವಳ ಹೂಡಬಹುದೆಂಬ-ದರಲ್ಲಿ ಸಂದೇಹವಿಲ್ಲ. ವೈಸರಾಯರ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು ಮುಂದೆ ಮಾತುಕತೆ ನಡಿಸುವುದಾದರೆ, ಈಗಣ ಅತಿದೊಡ್ಡ ಗಂಡಾಂತರದ ಸಂದರ್ಭದಲ್ಲಿ ಇಡೀ ಹಿಂದೂ ದೇಶವು ಇಂಗ್ಲೆಂಡಿನ ಬೆಂಬಲಕ್ಕೆ ನಿಲ್ಲುವ ಸುಯೋಗ ಉಂಟಾಗಬಹುದು. ಎಲ್ಲವೂ ಸರಕಾರದ ಧೋರಣೆಯ ಮೇಲೆ ಅವಲಂಬಿಸಿದೆ. ಕಾಂಗ್ರೆಸು ತನ್ನ ಕೇಳಿಕೆಗಳನ್ನು ಆದಷ್ಟು ಕಡಿಮೆಮಾಡಿದೆ. ಆತ್ಯಂತ ವಿವೇಕಪರ ಧೋರಣೆ ವಹಿಸಿದೆ. ಆದುದರಿಂದ ಜಡನ್ನು ತೃಪ್ತಿಪಡಿಸಲೆತ್ನಿಸುವುದು ಸರಕಾರದ ಪ್ರಥಮ ಕರ್ತವ್ಯ. ಯಾಕೆಂದರೆ ಇಡೀ ದೇಶದಲ್ಲಿ ಅತಿ ಹೆಚ್ಚಿನ ಮಾನ್ಯತೆ ಪಡೆದಿರುವ ವಿಕಮಾತ್ರ ರಾಷ್ಟ್ರೀಯ ಪಕ್ಷವೆಂದರೆ ಕಾಂಗ್ರೆಸು.

ಯುರೋಪಿನ ಯುದ್ಧವು ದೀರ್ಘಕಾಲ ನಡೆಯಲಾರದು. ಜಯಾಪಜಯಗಳು ಬೇಗನೆ ನಿಶ್ಚಯವಾಗುವ ರೀತಿಯಲ್ಲಿ ಹೋರಾಟ ನಡೆಯುವ ಸಂಭವ ತೋರುತ್ತಿದೆ. ಹೆಚ್ಚೆಂದರೆ ಇನ್ನೊಂದು ವರ್ಷದೊಳಗೆ ಯುದ್ಧವು ಕೊನೆಗೊಳ್ಳಬಹುದು. ಆದರಲ್ಲಿ ಬ್ರಿಟಿಸರು ಸೋತರೆ ಹಿಂದು ದೇಶವು ಸ್ವತೇಹ ಅವರ ಕೈಬಿಟ್ಟು ಹೋಗುವುದು. ಗೆದ್ದರೆ ಕೂಡಲೆ ಅದಕ್ಕೆ ಸಾಮಂತ ಸ್ವರಾಜ್ಯ ಕೊಡಬೇಕಾಗುವುದು. ಅಂದ ಮೇಲೆ ಈಗಲೇ ಸಾಮ್ರಾಜ್ಯ ಸ್ವಾರ್ಥವನ್ನು ಬದಿಗೊತ್ತಿ ಉದಾರ ಹಾಗೂ ವಿವೇಕಪರ ಮುತ್ಸದ್ದಿತನದಿಂದ ಬ್ರಿಟಿಷ್ ಸರಕಾರವು ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ, ಆಡಳಿತ ಜವಾಬ್ದಾರಿಯನ್ನು ಹಿಂದೀ ಜನ ಪ್ರತಿನಿಧಿಗಳಿಗೆ ಬಿಟ್ಟುಕೊಟ್ಟು, ಅವರ ಮೂಲಕವೇ ಯುದ್ಧಕ್ಕೆ ಬೇಕಾದ ಸಹಾಯವನ್ನೇಕೆ ಪಡೆಯಬಾರದು? ಹಾಗೆ ಮಾಡಿದರೆ ಪ್ರಜಾಸತ್ತೆಗಾಗಿ ಹೋರಾಡುವ ಅದರ ಉಚ್ಚ ಧ್ಯೇಯಕ್ಕೆ ಮತ್ತಷ್ಟು ಬೆಲೆ ಬರಲಾರದೇ? ಸಾಮ್ರಾಜ್ಯ ಸ್ವಾರ್ಥವನ್ನೆಲ್ಲಾ ಬಿಟ್ಟು ಬಿಟ್ಟು ಜೆಕೊಸ್ಲೊವೇಕಿಯ, ನೋರ್ವೆ, ಹೊಲ್ಲೆಂಡ್, ಡೆನ್ಮಾರ್ಕ್, ಬೆಲ್‌ಜಿಯಮ್ ಮತ್ತು ಫ್ರಾನ್ಸುಗಳ ಸ್ವಾತಂತ್ರ್ಯಕ್ಕಾಗಿ ಜೀವನ್ಮರಣ ಹೋರಾಟದಲ್ಲಿ ತೊಡಗಿ ಜಯ ಸಂಪಾದಿಸುವ ನಿರ್ಧಾರದಿಂದಿರುವ ಇಂಗ್ಲೆಂಡು ಯುದ್ಧಾನಂತರದ ನವನಿರ್ಮಾಣದಲ್ಲಿ ಅಗ್ರಗಣ್ಯಸ್ಥಾನದ ಮನ್ನಣೆಗೆ ಪಾತ್ರವಾಗಲಾರದೇ?

ಪಂಡಿತ ಜವಾಹರಲಾಲರು ಅಭಿಪ್ರಾಯ ಪಟ್ಟಿರುವಂತೆ ಲೋಕದಲ್ಲಿ ಇನ್ನು ಮುಂದೆ ಸಾಮ್ರಾಜ್ಯವಾದವು ಹೆಚ್ಚುಕಾಲ ಬಾಳಿ ಬಾರದು ಮುಂದೆ ಭಾರತಕ್ಕೆ ಸ್ವರಾಜ್ಯ ಸಿಕ್ಕುವುದಂತೂ ನಿಶ್ಚಯ. ಅಂದಮೇಲೆ ತಮ್ಮ ಕೈಯಿಂದ ಎಳೆದುಕೊಳ್ಳಲ್ಪಡುವ ನಕ ಕಿಂಚಿಬೆ ಬ್ರಿಟಿಷರು ತಾವಾಗಿಯೇ ಭಾರತವನ್ನು ಸ್ವತಂತ್ರವನ್ನಾಗಿ ಮಾಡಲಾರದೇಕೆ? ಆಗಲೇ ಬೇಕಾದುದನ್ನು ತಡೆಗಟ್ಟಲು ಯಾರಿಂದ ಸಾಧ್ಯ? ಕೈಯಲ್ಲಿ ಜಾರಿಯೇ ಬೀಳಬೇಕಾದುದನ್ನು ಬಲವಾಗಿ ಹಿಡಿದುಕೊಂಡು ಬಿಡಿಸಿಕೊಳ್ಳುವುದಾದರೂ ಕೇಗೆ? ಪ ಹತ್ವದ ನಿರ್ಣಯಗಳನ್ನು ಕೈಗೊಳ್ಳಬಲ್ಲ ಸಾಹಸವು ತಮಗಿದೆಯೆಂಬುದನ್ನು ತೋರಿಸಲು ಒದಗಿದ ಹಲವು ಸಂದರ್ಭಗಳನ್ನು ಹಿಂದೆ ಬ್ರಿಟಿಷರು ಕಳಕೊಂಡಿರುವರು ಈಗಲೂ ಕಳಕೊಂಡರೆ, ಈ ಮಹಾ ವಿಪತ್ಕಾಲದಲ್ಲಿ ದೊಡ್ಡ ಅನಾಹುತವೊಂದನ್ನವರು ತಮ್ಮ ಮೇಲೆ ತಂದುಕೊಳ್ಳುವಂತಾಗುವುದೆಂದು ಪಂಡಿತರು ಎಚ್ಚರಿಸಿರುವರು. ಮತ್ತು ಬ್ರಿಟಿಷ್ ಮಂದಗಾಮಿ ಸಕ್ಷದ ಪ ಮುಖ ಮೆಂಬರೂ ರಾಜಕಾರಣ ಪಟುವೂ ಆಗಿದ್ದ ಸರ್. ಎಸ್ಪಿನ್ ಜೇಂಬರ್ಲೇನರು ದಕ್ಷಿಣ ಆಫ್ರಿಕಕ್ಕೆ ಸ್ವಾತಂತ್ರ್ಯವೀಯದಾರದೆಂದು ವಿರೋಧಿಸಿದ್ದು, ಆ ಮೇಲೆ ಅದರ ಸತ್ಪರಿಣಾಮವನ್ನು ಕಂಡು ತಪ್ಪನ್ನೊಪ್ಪಿ ಪಶ್ಚಾತ್ತಾಪಪಟ್ಟರೆನದನ್ನೆತ್ತಿ ಬರೆದಿರುವರು. ಲಿವರ್‌ಪೂಲ್ ನಗರದಲ್ಲಿ ಅವರು ಕೊಟ್ಟ ಭಾಷಣವೊಂದರಲ್ಲಿ ಅ ವರು ಹೀಗೆಂದಿದ್ದರು. "ನಾವು ದಕ್ಷಿಣ

ಬರುವ ವಾರ
ನವಯುಗವು
ಜಯಂತಿ ಸಂಚಿಕೆ
ಎಂಬ ನಿತೇಷಾಂಕಣಾಗಿ
ಹೊರಡುವುದು.

ಗ್ರೆಸ್ ಪ್ರೆಸಿಡೆಂಟರು ವೈಸರಾಯರನ್ನು ಕಾಣುವುದಿಲ್ಲ

ಪಂಡಿತ ನೆಹರುಗಳ ಅಭಿಪ್ರಾಯ

ವ್ಯ ದಾನಕ್ಕೆ ವಿರುದ್ಧ
ದು ತೀರಾ ಅವಿಚಾರ
ದು ನಾವಾಗಿ ಭಾವಿ
ನು ನಾನು ಕೊಟ್ಟ
ದಕ್ಕೆ ತೆಗೆದುಕೊಳ್ಳ
ಮಾಡಲು ನಾನು
ಸ್ವಾತಂತ್ರ್ಯ ದಾನವು
ಆ ವಿಶ್ವಾಸಪೂರ್ಣ
ಆ ಆಕ್ಷಿಕವ ವಿವಿಧ
ಸ್ಥರ ಸಖ್ಯವನ್ನು ಸಂ
ಸಿತು. ಆದರೆ ಈ
ಇದ್ದಿಲ್ಲ. ಎಚ್ಚರಿಕೆ
ುಂದೆ ನೋಡುತ್ತಾ
ಿಂತ ಧೈರ್ಯದಿಂದ
ಳೆಚ್ಚು ಕ್ಷೇಮಕಾರಿ
ರು ಬರುವುದುಂಟು.
ಲ್ಲಿ ಜನತೆಯ ಅಂತಃ
ಿವಂತಹ ವಿಶ್ವಾಸ
ಮು, ರಾಜಕಾರಣ
ಸಾಧಿಸಲು ಅಸಾಧ್ಯ
ಣಾಮಗಳನ್ನುಂಟು
ಹ ಪರಿಣಾಮವನ್ನು
ಡುವಂತಹ ಪ್ರಸಂಗ
ಕಣ್ಣ ಮುಂದೆ ಎದ್ದು
ಷ್ಟಸ್ಪಷ್ಟವಾಗಿ ಕಾಣ
ರೂ, ಅಪ್ರಸಂಗದಲ್ಲಿ
ರ್ತಿಸಲು ಬೇಕಾದ
ರ್ಯವನ್ನು ಸಾಧಿ
ಮನಸ್ಸೂ ಇಂದು
ತವ ಸ್ಥಿತಿಯಲ್ಲಿರು
ಂದು ನಾನು ಪರ
ರಣಪೂರ್ವಕವಾಗಿ
ಬ. ಆಸ್ಟಿನ್ ಚೇಂಬ
ಡಿನ ಸ್ವಾತಂತ್ರ್ಯದ
ಬ್ರಿಟಿಷ್ ಸರಕಾರ

ಕೈ ಕೊಟ್ಟ ಒಬ್ಬರಿಕೆ ಮತ್ತು ಮಾಡಿದ
ಕೊಂಡ ಪ್ರಾರ್ಥನೆ ಇದು. ಇಂದು ಹಿಂದು
ದೇಶದ ಸ್ವಾತಂತ್ರ್ಯದ ವಿಷಯದಲ್ಲಿಯೂ
ಅದೆಷ್ಟು ಸಂದರ್ಭೋಚಿತವಾದುದೆಂದು
ಬೇರೆ ಹೇಳಬೇಕೇನು? ಶ್ರೀ. ಆಸ್ಟಿನರ
ಯಥಾರ್ಥ ಪ್ರಾರ್ಥನೆಯ ಇಂದು ಹಿಂದೀ
ಯರ ಹೃದಯದಲ್ಲೆಲ್ಲಾ ಪ್ರತಿಧ್ವನಿಸಲಾ
ರದು.

ಹಿಂದುದೇಶದ ಪರಿಸ್ಥಿತಿಯು ಉತ್ಕಟ
ವಾಗಿರುವುದೆಂದು ಇಂಡಿಯಾ ಸೆಕ್ರೆಟರಿ
ಗಳಾದ ಮಿ. ಅಮೇರಿಯವರು ಇದೇ ತಾ.
8ರಲ್ಲು ಪಾರ್ಲಿಮೆಂಟಸಲ್ಲಿಸ್ಟಿ ತಾನು
ಹಿಂದೆ ನೂಡಿದ ತಪ್ಪನ್ನು ಸರಿಗೊಳಿಸಿರು
ವರು. ಹಿಂದುದೇಶದ ಎಲ್ಲಾ ಪಕ್ಷಗಳ
ಸಹಕಾರವನ್ನು ಪಡೆಯಲು ಸರಕಾರವು
ಆತುರಗೊಂಡಿರುವುದೆಂದು ಹೇಳಿರುವರು.
ಬ್ರಿಟಿಷ್ ಸರಕಾರಕ್ಕೆ ಯಥಾರ್ಥವಾಗಿ
ಯೂ ಆ ಮನಸ್ಸಿದ್ದರೆ ಅವನ್ನು ಸಾಧಿ
ಸುವ ಸುವರ್ಣಸಂಧಿ ಈಗ ಬಂದಿರುವುದು.
ಅದನ್ನದು ಕಳಕೊಳ್ಳಬಾರದೆಂದು ನಿರೀ
ಕ್ಷಿಸುತ್ತೇವೆ. ವೈಸರಾಯರು, ಕಾಂಗ್ರೆಸ್
ಪ್ರೆಸಿಡೆಂಟರಾದ ಮೌಲಾನಾ ಅಜದ್,
ಮುಸ್ಲಿಂ ಲೀಗ್ ಪ್ರೆಸಿಡೆಂಟರಾದ ಮಿ.
ಜಿನ್ನಾ, ಹಿಂದು ಮಹಾಸಭೆಯ ಜಗದ್ವಿಖ್ಯ
ರಾದ ಶ್ರೀ ಸಾವರ್ಕರರನ್ನು ಪುನಹ ಮಾ
ತಾಡಕರೆದಿರುವುದು ಆಶಾದಾಯಕ ಚಿನ್ಹೆ
ಯಾಗಿದೆ. ಇದು ಹಿಂದಿನ ಮಾತುಕತೆ
ಯಂತಾಗದೆ ಸಕ್ರಿಯಾತ್ಮಕವಾಗಿ
ಹಿಂದೀಯರೆಲ್ಲರೂ ಒಕ್ಕಟ್ಟಾಗಿ ಬ್ರಿಟಿಷ್
ಸರಕಾರದೊಡನೆ ಸೌಹಾರ್ದದಿಂದ ಸಹ
ಕರಿಸುವಂತಾಗಲೆಂದು ಹಾರೈಸುತ್ತೇವೆ

ರೂ. 73,000 ಎಷ್ಟಕ್ಕೆ ಹೊರಾಸಾದಿ ದಾಖಾ
ಯಿ ಪಡಿಸಲಾಗಿದೆ.

ಮುಂದಿನ ಪ್ರಭುವರ್ಯರಾರು—ಶ್ರೀ ನಾಲ್ವಡಿ ಕೃಷ್ಣರ ಪರೋಕ್ಷದಿಂದ ಮೈ
ಸೂರಿನ ಮುಂದಿನ ದೊರೆಗಿರಾರು? ಎಂಬುದಾಗಿ
ಈಗಾಗಲೇ ಅನೇಕರಲ್ಲಿ ಮಾತಾಡ್ತಿದೆ. ಇಂದಿರು
ವ ಶ್ರೀಮದ್ಯುವರಾಜ ಶ್ರೀ ಜಯಚಾಮರಾಜ
ಒಡೆಯರು ಗತಿಸಿದ ಶ್ರೀ ನಾಲ್ವಡಿ ಕೃಷ್ಣರ
ಸಹೋದರರ ಗತಿಸಿದ ಶ್ರೀಕಂಠೀರವ ನರಸ ರಾ
ಜ ಒಡೆಯರ ಮಿಂಯ ಮಕ್ಕಳು ಅಗುವುದ
ರಿಂದ, ಅವರಿಗೆ ರಾಜ್ಯಭಾರ ವಹಿಸಿಕೊಡುವ
ವಿಚಾರ ಮೈ ಬ್ರಿಟಿಷ್ ರೆಸಿಡೆಟ್ ಹಾಗೂ
ಕ್ರೌನ್ ಪ್ರತಿನಿಧಿ ಮೈಸೂರಿನ ಮೂಲಕ ಇಂ
ಡಿಯಾ ಸೆಕ್ರೆಟರಿ ಆಫ್ ಸ್ಟೇಟರಿಗೆ ವಕ್ತವ್ಯವ
ಹಾರ ನಡೆಯುತ್ತಿದೆಯೆಂದೂ ಎಲ್ಲ ಪೌ ಶಿವ್ವಡೆ
ಪ್ಲೇ ತಿಳಿಯುತ್ತೇವೆಂದು ಒಂದು ವರ್ತಮಾನ ಪ
ಬ್ಬಿದೆ. ಗತಿಸಿದ ಸ್ವರ್ಗಾಗ ಧರ್ಮಪತ್ನಿ ಶ್ರೀ
ಮತಿ ವಿಲಾಸ ಸನ್ನಿಧಾನ ಶ್ರೀಕಂಠ ನರಸಿಂಹ
ರಾಜ ಒಡೆಯರು ವಿಚಿತ್ರವಾದ ಮೂಲಕ ರಾಜ್ಯಭಾರ
ಕೈಗಾಡಿವರಿತ್ತೆಂದು ಕೆಲವರ ಹಟವಾಗಿದೆ. ಆ
ದರೆ ಒಂದು ಕಕ್ಷೆಯು ಇದುವರೆಗೂ ಈಗಾ
ಗಲೆ ಆದನುವೆ, ಸರಕಾರ ವಿಚಾರ ಮತ್ತು ಇತ
ರರುಗಳು ಶ್ರೀಮದ್ಯುವರಾಜರನ್ನು ಸಂಪ್ರದಾ
ಯದಂತೆ ಮಹಾರಾಜರೆಂದೇ ಸಂಬೋಧಿಸುತ್ತಿ
ರುವುದರಿಂದ, ಇವರೇ ಕ್ರಮೇಣ ಮೈ ಸೂ ರಿ
ದರಪರಾಗುತ್ತಾರೆ ಇವರ ಧರ್ಮ ಪತ್ನಿ ಶ್ರೀ
ಸತ್ಯಪ್ರೇಮವಿಲಾವತಿ ಪಟ್ಟ ಮಹಿಷಿ ಮಾರಾಣ
ಜ್ಞಿಯವರು. ಇದಿರುವ ಮುಂಬಾಜ್ಞಿ ಶ್ರೀ
ಪ್ರತಾಪ ಕುಮಾರಿಯವರು 'ಯೌವರಾಜ್'
ಪಾತ್ರಾರಾಜ್ಞಿಯವರು.

THE
TROPICAL INSURANCE CO., LTD.
HEAD OFFICE **NEW DELHI**
Chairman: Sjt SUBHAS CHANDRA BOSE

We are glad to announce that owing to expansion of business our Office has been shifted to a more specious premises from this day. Our address, in future, will be Union Company Buildings, 29 Mount Road, Madras

Dated 12-8-'40

K. S. RAMAMURTHI, M. A.
Secretary, Madras Branch

ನೋಟೀಸು
ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
S. C No. 2316
M. ಶ್ರೀನಿವಾಸಯ್ಯ—ಪಾದಿ
ವಿರುದ್ಧ
ವೆಂಕಟಾಚಲ ಭಟ್ಟ—ಪ್ರತಿವಾದಿ.

ಪ್ರತಿವಾದಿ ವೆಂಕಟಾಚಲ ಭಟ್ಟ ಯಾನೆ H. S. Venkatachala Rao. Manager, Sri Mohan Vilas coffee Club. Powerpet (in the reconstructed building) Ellore. ಇವರಿಗೆ ತಾ. 5-7-37 ರಲ್ಲು ಸಲ್ಲಿ ಸಲ್ಲಿ ಮಾಡಿ ಜಪ್ತಿಕೊಟ್ಟ ದಿವಾಣ ನೋಟಿನ ಆದಲು ಬದಲು ಕೋರ್ಟು ಕಟ್ಟಳೆ ರೂ. 117-5-0 ಮುಂದಿನ ಬಡ್ಡಿ, ಕೋರ್ಟು ಖರ್ಚಿಗೆ ಬಗ್ಗೆ ಮಾಡಿ ಕೊಳ್ಳಲೆ ವಾದಿಯು ವಿರುದ್ಧ ಸಲ್ಲಿ ಮಾಡಿಯು ತಾ. 28-8-40ಕ್ಕೆ ಇಬ್ಬರುವುದರಿಂದ ನಿಮ್ಮ ಅಕ್ಷೇಪಣೇನಾದರೂ ಇದ್ದಲ್ಲಿ ಸಲ್ಲ ಆಷ್ಟರೊಳಗೆ ಮುಂಬಿಕವಾಗಿ ಸಲ್ಲಿ ಕೋರ್ಟಿನ ಮುಂದೆ ಬಂದು ಪಾಪಾಣಿ ಜಾಬಗೆ ಆಗ್ಯೆನಿಮಿ ವಿಚಾರವನ್ನು ದಾ ಖಲುಮಾಡಿ ಆದೇಶವನ್ನು ಕೊಡಬೇಕಾಗಿದ್ದು, ಕಪ್ಪಿದರೆ ನಿಮ್ಮನ್ನು ಕಿವಾಯಿ ಮಾಡಿ ನಿಮ್ಮ ಗೈರು ಮಾಜರಿಯಲ್ಲಿ ಸಲ್ಲಿ ದಾವೆಯು ತರ್ಗಾಸಲಾಗುವುದು ಎಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸಲಾಗಿದೆ.

13-8-40 ಕಾರ್ಕಳ } P. Ramachandra Rao
Pleader for Plaintiff

ನೋಟೀಸು
ಕಾರ್ಕಳ ಡಿ. ಮು. ಕೋರ್ಟಿನಲ್ಲಿ
R. E. P. No. 1716
R. E. A. 1816
ಸರ್ವ ಸಲ್ಲ ಕೊಡಾ—ಅರ್ಜಿದಾರರು.
ದೊಗ್ಗ ಸಲಕಾರ, ಕೂಡಾ—ಎದುರು

3ನೇ ಎದ್ದಿ ಎಂದಾರು ಸಲಕಾರ ಲಕ್ಷುಮಿ ಪೆಂ
ಸಿನ ಸೆಟ್ಟಾ ಸಂಗಳೂರು ಶಾಲುಮಾಲ ಮಾಂ
ಡ್ಯೂರು ಗ್ರಾಮದಲ್ಲಿರುವವರು

6ನೇ ಎದ್ದಿಗಳು—ಸೇಸಿ ಹೆಗ್ಗು, ಲಕ್ಷಿಮಿ
ಹೆಗ್ಗಿಸ ಪೆಂಡ್ಮಗಳು, ಕಾರ್ಕಳ ತಾಲೂಕು
ಕರಂಬೆ ಗ್ರಾಮದಲ್ಲಿರುವವರು.

ಈ ಎದಾರು ಜಾರೀಗೆ ಕೋರ್ಟು ಹುಕುಂ
ಸ್ಕಾರ ತಿಳಿಯಪಡಿಸುವುದೇನಂದರೆ—

ಅರ್ಜಿದಾರರು ಎನ್ನರ ಕುಟುಂಬದ ಸ್ಥಿರ
ಸ್ತಿಗಳನ್ನು ಏಲಂಗೆ ಆಜ್ಞೆಪಿಸಿ ಬರಕೊಂಡ
ಸಲು ಇಪ್ಪತ್ತಾರನೆ ರತ್ನಗಳನ್ನು ಪಂಚಾಯ
ಮಾಡುವನೆ, ಪಕಲು ಕಾಲದಲ್ಲಿ ಆರ್ಜಿದಾರ
ಗೆ ಬಿಡ್ ಮಾಡುವರೆ ಪರ್ಮಿಷನ್ ಪ ಸರ್ ಆ
ಫ್ ಕೋರ್ಟ್ ಕೇಳಿಕೊಳ್ಳಿದ್ದ ಅರ್ಜಿಯನ್ನು ಕೋರ್ಟ
ತಾ. 4-9-40ನೇ ದಿನ ಮೇಲ್ಕಾಣಿಸಿದ ಕೋ
ರ್ಟಿಗಸ್ಥಿ ತ್ಯಾಗೆ ಇಟ್ಟರುವುದರಿಂದ ನಿಮಗೇನಾ
ದರೂ ಆಕ್ಷೇಪ ಹೇಳಿಕೊಳ್ಳುವದಿದ್ದರೆ ಸಲ್ಲಿ
ದಿನ ಬೆಳಿಗ್ಗೆ 10ಘಂಟೆಗೆ ಈ ಕೋರ್ಟಿಗೆ ಮುಂ
ಪೆ ಬಾಜಾಬ್ಸಿಗೆ ನಿಮ್ಮ ಆಕ್ಷೇಪಣೆಯನ್ನು ಕೊ
ಡತಕ್ಕದ್ದು. ಕಪ್ಪಿದರೆ ನಿಮ್ಮನ್ನು ಕಿವ್ಯಾ ಮಾಡಿ
ನಿಮ್ಮ ಗೈರು ಹಾಜ್ಯರಿಯಲ್ಲಿ ವಿಚಾರಣೆಯಲ್ಲು
ಮಾಡಲು ಎಂಬ ಸಂಗ್ತಿ ಈ ಮೂಲಕ ತಿ
ಸೂಚಿಸಲಾಗುತ್ತದೆ.

ಕಾರ್ಕಳ 13-8-40 } K. Mahabala Hegde
ಆರ್ಜಿದಾರರ ವಕೀಲ್

ನಾ ಆಜಾದರು ವೈಸರಾಯರನ್ನು ಕಾಣ
ಲಿಲ್ಲಿರುವುದಿಲ್ಲೆಂದು ಊಹಿಸಬಹುದಾ
ಗಿದೆ. ಆದುದರಿಂದ ಕಾಂಗ್ರೆಸ್ ವರ್ಕಿಂಗ್
ಕಮಿಟಿಯವರು ವೈಸರಾಯರ ಹೇಳಿಕೆ
ಯನ್ನು ಪರಿಶೀಲಿಸಿ ತದಕ್ಕೆ ಉತ್ತರವನ್ನೀ
ಯಲಿದ್ದಾರೆ. ಬಹುಮಟ್ಟಿಗೆ ಕಾಂಗ್ರೆಸಿ
ಗೂ ಸರಕಾರಕ್ಕೂ ರಾಜಿಯಾಗುವ ಸಂ
ಭವ ತೋರುವುದಿಲ್ಲ. ಮುಸ್ಲಿಮ್ ಲೀಗ್,
ಹಿಂದುಮಹಾಸಭೆ, ಹಿಂದುಳಿದ ಸಮಾ
ಜ, ಬ್ರಾಹ್ಮಣೇತರ, ಲಿಬರಲ್ ಮತ್ತು
ರೆಸ್ಪೋನ್ಸ್ ನ್ಯೂ ಕೋಪರೇಟರ್ಸ್‌ರೇ ಮೊದ
ಲಾದವರ ಬೆಂಬಲಿದಿಂದ ಸರಕಾರವು ಅಡ
ಚಿತ ನಡೆಸುವ ನಿರ್ಧಾರಮಾಡಿರುವಂತಿದೆ.
ಕೇಂದ್ರ ಎಗ್ಸಿಕ್ಯೂಟಿವ್ ಕಮಿಟಿಗೆ ಹೊಸ
ತಾಗಿ ನೇಮಿಸಲ್ಪಡುವ ಮೆಂಬರರು ಯಾ
ರೆಂಬ ವಿಷಯದಲ್ಲಿಯೂ ಸುದ್ದಿಯೆಟ್ಟಾ
ಗಿದೆ.

ಪಂಡಿತ ನೆಹರುಗಳ ಅಭಿಪ್ರಾಯ

"ವೈಸರಾಯರ ಹೇಳಿಕೆಗೂ ಕಾಂಗ್ರೆ
ಸಿನ ಕೇಳಿಕೆಗೂ ಸರಿಹೋಗುವ ಸಂಭವ
ತೋರುವುದಿಲ್ಲ. ಸಾಮ್ರಾಜ್ಯವಾಹಿರ್ಮೂ
ರಾಷ್ಟ್ರೀಯತ್ವವೂ ಪರಸ್ಪರ ವಿರುದ್ಧವಾ
ಮವುಗಳಾಗಿವೆ ಈ ಎರಡು ಸತ್ಯೆಗಳು
ಎಂದೂ ಒಪ್ಪಿಗೆಗೆ ಬರಲು ಸಾಧ್ಯವಿಲ್ಲ.
ಸಾಮ್ರಾಜ್ಯ ಸತ್ಯೆಯನ್ನು ಅಂತ್ಯಗೊಳಿಸಿ
ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸಂಪಾದಿ
ಸುವುದೇ ರಾಷ್ಟ್ರವಾದದ ಗುರಿಯಾಗಿದೆ.
ಸಾಮಂತ ಪ್ರರಾಜ್ಯವೆಂಬುದೇ ಈಗ
ಣ್ಣಾಗೂಡಿದೆ, ಇವು ಎಂದಿಕ್ಕೆ ಉಳಿ
ಳೆತ್ತಲಿ ಅವಕಾಶವಿಲ್ಲೆನೆಂದು ಎಂಡಿತ
ಜವಾಹರಲಾಲರು ವೈಸರಾಯರ ಹೇಳಿಕೆಯ
ಕುರಿತು ಇಂದು ತಾ 11ರಲ್ಲು ಕಾಸ್ಮೋರದಲ್ಲಿ
ಪತ್ರಿಕಾ ಪ್ರತಿನಿಧಿಗಳೊಡನೆ ಅಭಿಪ್ರಾಯ
ವಿಶ್ಲೇಷಿಯವರು ಸಾಮ್ರಾಜ್ಯಶಾಹಿಕಾರವಸ್ಸು
ಬಿಟ್ಟುಕೊಡಲು ಬ್ರಿಟಿಷ್ ಸರಕಾರವು
ಸ್ತಾಲುವುದಿಲ್ಲ ಇದರ ಸಾಮ್ರಾಜ್ಯಾಧಿ
ಕಾರವನ್ನೊಪ್ಪಿ ನಡೆಯಲು ಕಾಂಗ್ರೆಸು
ತಯಾರಾಗುವುದಿಲ್ಲ. ಅಂದಮೇಲೆ ಕಾಂ
ಗ್ರೆಸು ಮತ್ತು ಬ್ರಿಟಿಷ್ ಸರಕಾರಗಳು
ಒಂದುಗೂಡಿ ನಡೆಯುವಂತಾ ಗುವುದು.
ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವನ್ನು ಬ್ರಿಟಿಷ್ ಸರಕಾರವು
ಒಪ್ಪಿಯೇ ಒಪ್ಪುವುದೆಂಬ ಶ್ರೀ ರಾಜಗೋ
ಪಾಲಾಚಾರ್ಯರ ಭರವಸೆಗೆ ಅವಕಾಶ
ವಿರುವುದಿಲ್ಲ. ಶೀಘ್ರ ಗಾಂಧಿಜಿಯವರ
ನಾಯಕತ್ವದಲ್ಲಿ ಕಾಂಗ್ರೆಸ್ ಸಾರ್ವಜನಿ
ಕಾಯಿದೆ ಭಂಗವನ್ನು ಹೂಡುವ ಸಂಭ
ವವೇ ಹೆಚ್ಚೆಂದು ತೋರುತ್ತದೆ.

ವಿಳಾಸ ಸ್ಪರ್ಧೆ

ಜಂಟಿ ಮಾರ ಜಯಂತಿ ವಿಷಯ
ಸಂಬಂಧವಾಗಿ ವಿಳಾಸ ಸ್ಪರ್ಧಾ
ಯನ್ನಿರಿತಾರವನ್ನು ತಾ-11-10ಕ್ಕೆ ಸ್ಪ
ಷ್ಟಿಸಲಾಗುವುದು. ಈ ಕಾರಣದಿಂ
ದ ಸ್ಪರ್ಧೆಯ ಅವಧಿಯನ್ನು ಈ ತಿಂಗ
ಳಾಂತ್ಯದ ವರೆಗೂ ಮುಂದುವರಿಸಲಾಗಿದೆ.

ಉಡುಪಿ

ಮಂಗಳೂರು

(ನನ್ನ ಸ್ವಂತ ಜ್ಞಾಪಕದಿಂದ)

ಶಾ. 12-8-40

ಕವಿ ಸಮಯ — ಕಳೆದ ತಾ. 4ನೇ ಭಾನುವಾರ ಮಿತ್ರ ಮಂಗಡಲಿಯು ಮಾಸಿಕ ವಿವರಿಸಗೋಷ್ಠಿಯು ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ತಿಮ್ಮಪ್ಪಯ್ಯನವರು 'ಆವಿಸಮಯ' ಎಂಬ ವಿಷಯವನ್ನೆತ್ತಿ ಭಾಷಣವಿತ್ತರು.

ಆರಂಭ ಭಾಷಣ—ಸ್ಟೆ. ಎ. ಕಾಲೇಜ್ ಯೂನಿಯನ್ ಬಕ್ ಕ್ಲಬ್ ಇದರ ಆರಂಭ ಭಾಷಣವನ್ನು ಶ್ರೀ ಯ. ಎಸ್. ಪಾಷಣ ರಾಯರು ಕಳೆದ ಶುಕ್ರವಾರ ಕೊಟ್ಟರು. ಪುಸ್ತಕಗಳನ್ನು ಆರಿಸುವುದು ಅವಗಳನ್ನು ಓದುವುದು ಇದೇ ಮೊದಲಾದ ವಿಷಯ ಗಳನ್ನೆತ್ತಿ ಭಾಷಣಮಾಡಿದರು.

ಯುದ್ಧದ ವಿಷಯದಲ್ಲಿ ನಮ್ಮ ಕರ್ತವ್ಯ—ಸ್ಟೆ. ಎ. ಕಾಲೇಜಿನ ಸಭಾಮಂದಿರದಲ್ಲಿ ವೀಳಲಿನ ವಿಷಯವಾಗಿ ಜಿಲ್ಲಾ ಜಡ್ಜರಾದ ಶ್ರೀ. ಬಿ. ಎಸ್. ರಾಮಚಂದ್ರನ್ ಐ. ಸಿ. ಎಸ್. ರವರು ಕಳೆದ ಶನಿವಾರ ಭಾಷಣಮಾಡಿ ತಮಿಗೆ ಯುದ್ಧದಲ್ಲಿ ಭಾರತೀಯರು ಬ್ರಿಟಿಷರಿಗೆ ಸಹಾಯ ನೀಡುವುದು ಎಷ್ಟರ ಮಟ್ಟಿಗೆ ಆಗತ್ಯವೆಂಬುದನ್ನು ತಿಳಿಸಿದರು.

ಈಗಿನ ಪರಿಸ್ಥಿತಿಯಲ್ಲಿ ರಾಷ್ಟ್ರ ಸಭೆಯನ್ನರು ಮಂತ್ರಿ ಮಂಡಲಗಳನ್ನು ಸ್ವೀಕರಿಸಬೇಕು—ಈ ವಿಷಯ ವಾಗಿ ವಿದ್ಯಾರ್ಥಿ ಭವನದಲ್ಲಿ ಒಂದು ಪ್ರತಿಭೆ ಚರ್ಚೆಯು, ನಿನ್ನೆಯ ದಿನ ಸಾಯಂ. 3-30ಕ್ಕೆ ಸರಿಯಾಗಿ ಜರಗಿತು. ಶ್ರೀ. ಕೆ. ಶೆಟ್ಟರವರಿಯರು ಅಗ್ರಾಸನ ಸುಶೋಭಿಸಿದರು. ವಾಗ್ವಿದರ ವರದಿ ಸೂಚನೆಗಳಾದ ರವುವಾಯ. ಶ್ರೀ. ಎ. ಶ್ರೀನಿವಾಸಭಟ್ಟರು ಕಾಂಗ್ರೆಸಿನವರು ಮಂತ್ರಿ ಮಂಡಲಗಳನ್ನು ರಚಿಸುವುದರಿಂದಾಗುವ ಪ್ರಯೋಜನಗಳನ್ನು ಕುರಿತು ಯುಕ್ತ ಯುಕ್ತ ಘಾಸಂದರ್ಭ ವಾಗಿ ದರರು ಶ್ರೀ. ಪಿ ನಾರಾಯಣರಾಯ ರು ರರಾವನ್ನು ವಿರೋಧಿಸುತ್ತಾ ಕಾಂಗ್ರೆಸಿನವರು ಅಧಿಕಾರ ಬಿಡುಗಡೆಯನ್ನಾಗಿ ಸ್ಥಿತಿಯಲ್ಲಿ ಇರುವುದರಿಂದಲೂ, ಆ ಪರಿಸ್ಥಿತಿಯಲ್ಲಿ ಬದಲಾವಣೆ ಯಾಗದಿರುವುದರಿಂದಲೂ ಕಾಂಗ್ರೆಸಿನವರು ಆತ್ಮ ಗೌರವವನ್ನು ಳಿಸಿಕೊಳ್ಳಿಸದಕ್ಕಾಗಿಯಾದರೂ ಅಧಿಕಾರ ವಹಿಸಬಾರದೆಂದು ಹೇಳಿದರು. ಎರಡು ಪಕ್ಷಗಳಲ್ಲೂ ಹಲವರು ಭಾಷಣಮಾಡಿದರು. ಮತತೆಗೆಯಲಾಗಿ ರರಾವು ಬಿದ್ದು ಹೋಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸಿನವರು ಅಧಿಕಾರ ವಹಿಸದಿಗೆ ಅವರಿಗೆ ಸರಕಾರದಿಂದ ದೊರಕಿ ಅರ್ಜಿಸನೆ ಅಮೇಟಿ ಯದ್ಧಿಗೆ ಗುರಿಯಾ ವಿಷಯವಾದುದು ಪ್ರಸ್ತಾಪಕ್ಕೆ ಸವರ್ಥವಾದ ಉತ್ತರವಾರದೆ ಹೋದ್ದರಿಂದ ಅವರು ರಾಜಿನಾಮೆ ಕೊಟ್ಟಿದ್ದು, ಇದೇ ಮೊದಲಾದ ವಿಷಯಗಳನ್ನು ವಿವರಿಸಿ, ಈಗ ಸರಕಾರದವರಿಂದ ಹೆಚ್ಚಿನ ಆಶ್ವಾಸನೆ ದೊರೆಯದೆ ಅಧಿಕಾರವನ್ನು ವಹಿಸುವುದರಿಂದ ಕಾಂಗ್ರೆಸಿನ ಆತ್ಮಗೌರವಕ್ಕೆ ಕುಂದು ಬಂಬೇತೆಂದರು, ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಉಡುಪಿ

ನಗರಸಭೆ—ಸ್ಥಳೀಯ ನಗರಸಭೆಯು ತಾ. 6ರಲ್ಲಿ ಚೆಯರ್‌ಮೆನ್ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಯುದ್ಧ ಸಹಾಯಕ್ಕೆ ಸಲಿಗೆ ಧನಾಯೋಜನೆಯನ್ನು ತಿ ಸ್ಪಂ ಗ್ ಫೈಟಿನ ಒಂದಿಂದ ಟೀವೆಂದಾಯಿತು. ಮೈಸೂರು ವಿಹಾರಾಬರ ಅಕಾಲಿಕವಿನಿಧನ ಸಲವಾಗಿ ಸಂತಾಪ ಸೂಚಿಸಲಾಯಿತ.

ಸೇಂದಿಯಂಗಡಿಗಳ ಹರಾಜು—ತಾ. 27ರಲ್ಲಿ ಉಡುಪಿ ತಾಲೂಕಿನ 72 ಸೇಂದಿಯಂಗಡಿಗಳು ರೂ. 91,564ಕ್ಕೆ ಹರಾಜಾಯಿತು. ಕಳೆದ ವರುಷದಲ್ಲಿ 96,156 ರೂಪಾಯಿಗಳಷ್ಟು ಉತ್ಪತ್ತಿ ಬಂದಿತ್ತು.

ದೊಣಸೂಚಕ ಸಭೆ—ಶ್ರೀಕೃಷ್ಣ ಮಠದಲ್ಲಿ ಇಂದು ತಾ. 11ರಲ್ಲಿ ಪರ್ಯಾಯ ಶ್ರೀ ಉದ್ಯಾವರ ಮಠದ ಸ್ವಾಮಿಗಳವರ ಸಭಾಧ್ಯಕ್ಷತೆಯಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಆಕಾಲಿಕನಿಧನದ ನಿಮಿತ್ತ ದುಃಖಸೂಚಕಸಭೆ ಜರಗಿ ಸಂತಾಪಸೂಚಕ ಕರಡುವಾಂಗಿತು. ಶ್ರೀ. ಶಿವರಾಯರು ಮರೆದ ಸ್ವಾಮಿಗಳವರು ಸಹ ಹಾಜರಿದ್ದರು.

ವಿಟ್ಲಪಿಂಡಿ ಹಬ್ಬದ ವೇಷಧಾರಿಗಳಿಗೆ ಸೂಚನೆ—ಶ್ರೀಕೃಷ್ಣ ಮಠದಲ್ಲಿ ಜರಗಿನ ವಿಟ್ಲಪಿಂಡಿ ಹಬ್ಬಕ್ಕೆ ವೇಷ ಹಾಕಿ-ವವರು ಯಂಚಿತವಾಗಿಯೇ ಮಠದ ಅನುಜ್ಞೆಯನ್ನು ಪಡೆ ಕೊಳ್ಳಬೇಕಾಗಿ ಪರ್ಯಾಯ ಶ್ರೀ. ಅದಮಾರು ಮಠದ ಏಜಂಟರು ತಿಳಿಸುತ್ತಾರೆ.

ಎಯಿಡೆಡ್ ಶಾಲಾಧ್ಯಾಪಕರ ಯೂನಿಯನ್—ಉಡುಪಿ ತಾಲೂಕು ಎಯಿಡೆಡ್ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಯೂನಿಯನಿನ ವರ್ಷಾವಧಿ ಮಹಾಸಭೆಯು ತಾ. 18-8-40ನೇ ಮಧ್ಯಾಹ್ನ 2 ಘಂಟೆಗೆ ದೊಡ್ಡಣ್ಣ ಶೆಟ್ಟಿಯಲ್ಲಿ ಶ್ರೀ. ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಆಂದೇ ಕಾರ್ಯಕಾರಿ ಮಂಡಳಿಯ ಚುನಾವಣೆಯು ನಡೆಯ ವುದೆಂದೂ ಕಾರ್ಯದರ್ಶಿ ಶ್ರೀ. ಬಿ. ಆನಂದರಾಯರು ವಿನಂತಿಸಿಕ್ಕಾರೆ.

ವಾರ್‌ಫಂಡು ರೆಸ್ಪಾನ್ಸ್—ಉಡುಪಿ ತಾಲೂಕು ವಾರ್ ಫಿನ್ಯಾನ್ಸ್ ಸಮಿತಿಯು ತಾ. 8-8-40ನ್ನು ನಡೆದ ಸಭೆಯಲ್ಲಿ ಯದ್ಧನಿಧಿಗೆ ಹಣ ಸಂಗ್ರಹಿಸಲು ಒಂದು ಲೆಫ್ಲೆಟ್ (ಜನಮಾನ ನೋಡ್ತಿ)ಯನ್ನು ಜರಗಿಸುವುದಾಗಿ ನಿರ್ಣಯಿಸಿರುತ್ತದೆ. ಸದರಿ ರೆಫಲೆಟ್ ತಾ. 30-8-40ಕ್ಕೆ ಅಂಕ್ಯವಾಗುವುದು, ಎಲ್ಲರಿಗೂ ಸಹಕರಿಸಲು ಅನುಕೂಲವಾಗುವಂತೆ ಟಿಕೆಟ್ ಒಂದರ ಬೆಲೆ ಕೇವಲ 0-4-0 ಇಟ್ಟಿರುತ್ತದೆ. ಕೆಳಗೆ ವಿವರಿಸಿರುವ ಬಹುಮಾನಗಳು ಗೆದ್ದ ಟಿಕೆಟುಗಳ ಮಾಲಿಕರಿಗೆ ಕೊಡಲ್ಪಡುವುದು. ಸದರಿ ಬಹುಮಾನಗಳ ಸೋಡ್ತಿಯು ತಾ. 30-8-40ನೇ ಸಾಯಂ 5 ಘಂಟೆಗೆ ಉಡುಪಿ ಮುನಿಸಿಪಲ್ ಚೈನ್ ಎಲಿಮೆಂಟರಿ ಶಾಲೆಯಲ್ಲಿ ನಡೆಯುವುದು, ಸಾರ್ವಜನಿಕರು ಈ ಪ್ರಯತ್ನಕ್ಕೆ ಯಶಸ್ವಿಯಾಗುವಂತೆ ಸಹಕರಿಸ ಬೇಕಾಗಿ ಜತೆಕಾರ್ಯದರ್ಶಿಗಳುದ ಡಾ. ಸುಂದರ ರಾಮ ಶೆಟ್ಟಿ ಮತ್ತು ತಮಾಲೀಲ್ದಾರ್ ಶ್ರೀ. ಬಿ. ಗಣೇಶ ರವರು ಅಪೇಕ್ಷಿಸುತ್ತಾರೆ.

ಬಹುಮಾನಗಳ ಶೆಡ್ಯೂಲ್— 1. ರೂ. 350 ಬೆಲೆಯ 1 ವಯರ್‌ಲೆಸ್ ರೇಡಿಯೋ (2) ರೂ. 50 ಬೆಲೆಯ 1 ಸೈಕಲ್ ಫೋನ್ (3) ರೂ. 25 ಬೆಲೆಯ 1 ನೊದ್ದ ಗಡಿಯಾರ (1-5) ಪ್ರತಿಯೊಂದಕ್ಕೆ ರೂ. 10 ಬೆಲೆಯ ಸಾಮಾನುಗಳು (6) ರೂ. 5 ಬೆಲೆಯ ಸಾಮಾನು ಮತ್ತು ಪ್ರತಿಯೊಂದಕ್ಕೆ ರೂ. 1 ಬೆಲೆಯ ಆಮ್ಲಾಸನೆಯ ಬಹುಮಾನಗಳು 50.

ಧಾರಣೆ ನಿರ್ಧಾರ ಸಮಿತಿಯ ದರಗಳು—ತಾ 7-8-'40ರಲ್ಲಿ ನೇರದ ಉಡುಪಿ ತಾಲೂಕು ದವಸಧಾನ್ಯಗಳ ಧಾರಣೆ ನಿರ್ಧಾರ ಸಮಿತಿಯ ಸಭೆಯಲ್ಲಿ ಈ ಕೆಳಗಣ ದರಗಳು ಮಂಜೂರಾಗಿವೆ—

ಮುಸ್ಕತ ಅಕ್ಕಿ ಮಂಡಿ 1ಕ್ಕೆ ರೂ. 4-14-0 ಸೇರು ಒಂದರ 0—2—0. ಗುಜ್ಜು ಮಂಡಿ 1ಕ್ಕೆ 4-8-0, ಸೇರಿಗೆ 0-1-9. ಕೆಂಪ್ಪಲು ಮುಡಿ 1ಕ್ಕೆ 4-6-0, ಸೇರು 1ರ 0-1-8. ಸಂಗ್ಗಿ ಪಡಿ 1ಕ್ಕೆ 4-4-0, ಸೇರು 1ರ 0-1-7. ಬೆಲ್ಲಿಗೆ ಮಂಡಿ 1ರ 5-8 0 ಇಂದ 5-12-0, ಸೇರು 1ಕ್ಕೆ 0-2-2ಮುಂದ 0 2-3ಕ್ಕೆ ಪರಿಗೆ. ಬೆಲ್ಲ ಮಣ 1ಕ್ಕೆ ಉತ್ತಮ ತರದ್ದು 2-2-0, ಸೇರಿಗೆ 0-0 9, ಮಧ್ಯಮತರದ ಬೆಲ್ಲ ಮಣ 1ರ 2 0 0, ಸೇರಿಗೆ 0 0-8. ಉಂಡೆ ಬೆಲ್ಲ ಉತ್ತಮ ತರದ್ದು ಮಂಡಿಕ್ಕೆ 2-8-0, ಸೇರಿಗೆ 0 0 10ನ್ಯೆ. ಮಧ್ಯಮತರದ್ದು ಮಣ 1ರ 2-6 0, ಸೇರಿಗೆ 0-0-9ನ್ಯೆ. ಸಕ್ಕರೆ ಸೇರು 1ರ 0-1 8. ಉದ್ದು ಮುಡಿಗೆ 6-8-0. ಸೇರಿಗೆ 0-2-7. ಹುರುಳಿ ಮುಡಿ 1ರ 5-0-0ರಿಂದ 7-0 0ರ ವರೆಗೆ, ಸೇರಿಗೆ 0-2-2ರಿಂದ 0-3-0 ತನಕ. ತೊಗರಿಬೇಳೆ ಪಡಿ 1ರ 7-0 0, 9-0 0, 11-0-0ವರೆಗೆ, ಸೇರಿಗೆ 0-3-0, 0-3-6, 0-4-0 ತನಕ, ಕಡಲೆ ಮುಡಿ 1ರ 3 0-0, ಸೇರಿಗೆ 0-1 3. ಹೆಸರು ಮುಡಿ 1ರ 6-0-0, ಸೇರಿಗೆ 0-2-4ರಿಂದ 0-2-6. ಅಪ್ಪು ಸೇರು 1ರ 0-1-0. ಚನಾಣಿ ಎನ್ನೆ ಪಿಪ್ಪಿ 1ಕ್ಕೆ 3-12-3, ಬಾಟ್ಲಿ 1ರ 0-2-7. ರಾಗಿ ಸೇರು 1ರ 0-1-0ರಿಂದ 0-1-1. ಊರ ಮೆಣಸ್ಸು ಪೂಡಿ 1ರ 3-12-0, ಸೇರಿಗೆ 0-1-4. ಗಾಟಿಮೆಣಸ್ಸು ಮಣಕ್ಕೆ 5-12 0, ಸೇರಿಗೆ 0-2-0 ತೆಂಗಿನಕಾಯಿ 100ಕ್ಕೆ 3-2-0 ಒಂದು ತೆಂಗಿನಕಾಯಿಗೆ 0-0-7. ತೆಂಗಿನೆಣ್ಣೆ ಕಾಡಿತೆ 1ರ 0 0-10ನ್ಯೆ. ಎಳ್ಳೆಣ್ಣೆ ಕುಡ್ತಿ 1ಕ್ಕೆ 0-1-3ನ್ಯೆ. ಡೆಂಕಪೆಟ್ಟಿಗೆ 80ಕ್ಕೆ ಇದ್ದುದು ಕ್ಕೆ 0-0-6; 6ಗಡ್ಡಿದ್ದಕ್ಕೆ 0-0-4; 40ಕ್ಕೆ ಇರುವ ಪೆಟ್ಟಿಗೆ 1ಕ್ಕೆ 0-0-3. ಜೊಂಜಾಮು ಗೋಧಿಮಟ್ಟು ಸೇರು 1ಕ್ಕೆ 0-1-6; ಊರ ಏಟ್ಟಿಗೆ ಸೇರು 1ರ 0-1-4.

ಶ್ರೀ. ಹೆಬ್ಬೆ ಗೋಪಾಲಕೃಷ್ಣ ಬಲ್ಲಾಳರ ನಿಧನ — ಸಾಹಿತಿಕರೂ, ನಾಗರಿಕರೂ, ಜನಸ್ನೇಹಿತರೂ ಆಗಿದ್ದ ಶ್ರೀ. ಹೆಬ್ಬೆ ಗೋಪಾಲಕೃಷ್ಣ ಬಲ್ಲಾಳರು ತಾ. 7-8-40ರಲ್ಲಿ ವ್ಯವಹಾರವೆನ್ನಲು ವಿಷಾದಿಸುತ್ತೇವೆ. ಇವರು ತಮ್ಮ ಶ್ರೀಮತಿಗೆ ಸಿರಿಮಾಷ್ಟ್ರಿರೋಗದಲ್ಲಿ ಕೊಳ್ಳಲಾಗಿ ಕೆಲ ಸಮಯ ಉಪ್ಪಿನಲ್ಲಿದ್ದ ಅನಂತರ ಮಂಗಳೂರಿಗೊಯ್ಯಲ್ಪಟ್ಟು ಅಲ್ಲಿಯೇ ಚಿಕಿತ್ಸೆಹೊಂದುತ್ತಿದ್ದರು. ಅದರೂ ಗುಣವಾಗದೆ ಅಳಿಸ್ಮಿಳಿಯಾಗಿ ಮೃತರಾದುದು ವ್ಯಸನಕರವಿದೆ. ವ್ಯಾತರದ ಕವಿಗೆ ಬಂಧುವಾತ್ಸರೊಡನೆ ನಾವೂ ಸಹಭಾಗಿಗಳಾಗಿದ್ದೇವೆ.

ಶ್ರೀ. ಬಿ. ಮಹಾಬಲೇಶ್ವರ ಹೆಗ್ಡೇರ ಮರಣ—ಶ್ರೀಯುತರು ಸುಮಾರು ಒಂದು ಒಂಭತ್ತರೆ ವರ್ಷದಿಂದ ಕಾಯಿಲೆಗೊಳಗಾಗಿ, ಉತ್ತಿಯಲ್ಲಿ ತಮ್ಮ ಮಗನ (ವಿಜಯ ಬೇಂಕಿನ ವಿಜಂಟರಾದ ಶ್ರೀ. ಬಿ. ಸಚ್ಚಿದಾನಂದ ಹೆಗ್ಡೇ) ಬಿಡಾರದಲ್ಲಿ ಚಿಕಿತ್ಸೆಪಡೆಯುತ್ತಿದ್ದರು. ತಾ. 11-8-40ನೇ ಆದಿತ್ಯವಾರ ರಾತ್ರಿ 2ಗಂಟೆಗೆ ತಮ್ಮ 70ವರ್ಷದಲ್ಲಿ ಆಕಸ್ಮಿಕವಾಗಿ ಮೃತರಾದುದು ವಿಷಾದಕರವಿದೆ. ಸೋಮವಾರ ಪ್ರಾತಃಕಾಲ ಕಳೇಬರವನ್ನು ಉಡ್ಡಿಯಿಂದ ಬಾಳ್ಕಟ್ಟೆಗೆ ಕೊಂಡುಹೋಗಿ ಅಂತ್ಯ ಕ್ರಿಯೆ ನಡೆಸಲಾಯಿತು. ದಿವಂಗತರು ಸತತೋದ್ಯೋಗಿಗಳಾಗಿ ಬಹಳ ವರ್ಷಗಳ ವ್ಯವಹಾರಜ್ಞರೂ ಉತ್ತಮ ಕೃಷಿಕರೂ ಆಗಿದ್ದರು. ಕೋಲಕ್ಕೀದಾದ ಇತರ ಬಂಧುಬಳಗದವರೊಂದಿಗೆ ನಾವೂ ಸಹ ತಾಪ ಪಡುವೆವು.

ಶ್ರೀ. ರಂಗಮ್ಮ ಶೆಡ್ತಿರ ನಿಧನ—ಕಟಪಾಡಿನ ಬೀಡಿನ ರಂಗಮ್ಮ ಶೆಡ್ತಿರು ತಮ್ಮ 80ನೇ ವರ್ಷದಲ್ಲಿ ತಾ. 6-8 40ನೇ ಬೆಳಿಗ್ಗೆ ಮೃತರಾಗಿರುವರೆಸ್ಸಲು ವಿಷಾದಿಸುತ್ತೇವೆ. ಇವರು ಉಡ್ಡಿಯಲ್ಲಿ ತಮ್ಮ ಮಗ ವಕೀಲ್ ಕೆ. ಜಿ. ಜಲ್ಲಿಕೇರಿ ಬಿಡಾರದಲ್ಲಿದ್ದು, ತಾ. 10ನೇ ದಿನ ಸ್ಥಿತಿಗೆ ನಿತ್ಯಾನ ವಕಾಶ ಬಿಡ್ಡು ದೋಷ ಕಳೆದ ರು. ಆಗ ಅವರಿಗೆ ತಳ್ಳಿ ಚಿಕಿತ್ಸೆ ನಡೆಸಿದರೂ ಫಲಪ್ರದರ್ಶಿಯಾಗಿದ್ದ ತಾ. 11ರಲ್ಲಿ ಕಡೆಯಾಗಿ ಯ್ಯಲಾಗಿತ್ತು. ಮೃತರ ಬಂಧುಬಳಗಕ್ಕೆ ಮೃದುಬಿಂದಂಗಿಗೆ ನಾವೂ ಸಹಭಾಗಿಗಳಾಗಿ ನ್ತೀವೆ.

